ಕಂಟಿನ್ಯುಯಸ್ ಇದೆ. ಆದುದರಿಂದ ಮಾನ್ಯ ಸಚಿವರು ಎತ್ತಿರತಕ್ಕ ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಯಾವುದೇ ಉರುಳಿಲ್ಲ ಸುಮ್ಮನೇ ವಾದಕ್ಕೋಸ್ಕರ ಇದನ್ನು ಎತ್ತಿದ್ದಾರೆ. ಆದುದರಿಂದ ದಯಮಾಡಿ ತಾವು ನಮಗೆ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ನಾನು ಕೂಡ ಇದಕ್ಕೆ ಸಹಿ ಹಾಕಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ಇಲ್ಲ ತಾವು ದಯವಿಟ್ಟು ಕುಳಿತುಕೊಳ್ಳಿ ನಾನು ಯಾರಿಗೂ ಅವಕಾಶ ಕೊಡುವುದಿಲ್ಲ ನಿಮಗೆ ಈಗಾಗಲೇ ಮೂರು ಸಲ ಅವಕಾಶ ಕೊಟ್ಟಿದ್ದೇನೆ, ಇದರ ಬಗ್ಗೆ ಚರ್ಚೆ ಬೇಡ ನಾನು ರೂಲಿಂಗ್ ಕೊಡುತ್ತೇನೆ. ಮಾನ್ಯ ಸಚಿವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅದರ ಬಗ್ಗೆ ಮಾನ್ಯ ಖರ್ಗೆಯವರನ್ನು ಕೇಳಿದ್ದೇನೆ. ಈಗ ನನ್ನ ರೂಲಿಂಗ್ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ತಾವು ಧರ್ಮಸಿಂಗ್ ಅವರಿಗೆ ಅವಕಾಶ ಕೊಟ್ಟರೆ ಖಂಡಿತ ಅನ್‌ವಿನ್ನ ಆಗುತ್ತೀರಿ.

ಶ್ರೀ ಧರ್ಮಸಿಂಗ್.—ತಾವು ನನಗೆ ಏಕೆ ಅವಕಾಶ ಕೊಡುವುದಿಲ್ಲ. ನಾನು ಕೂಡ ಸಹಿ ಹಾಕಿದ್ದೇನೆ. ನನಗೆ ಮಾತನಾಡುವ ಹಕ್ಕಿದೆ.

ಅಧ್ಯಕ್ಷರು.—ನೀವು ದಯವಿಟ್ಟು ಕೂಡ್ರಿ, ನಾನು ಯಾರಿಗೂ ಅಲೋ ಮಾಡುವುದಿಲ್ಲ, ಈಗ ನಾನು ರೂಲಿಂಗ್ ಕೊಡುತ್ತೇನೆ, ಮಾನ್ಯ ಕಾನೂನು ಸಚಿವರು ಎತ್ತಿರತಕ್ಕಂಥ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಮೂರು ಮಹನಿಯರ ವಾದವನ್ನು ಕೇಳಿದ್ದೇನೆ, ಅವರ ಪಾಯಿಂಟ್ ಆಫ್ ಆರ್ಡರ್ ಅನ್ನು ಭಾಗಶಃ ಎತ್ತಿಹಿಡಿದಿದ್ದೇನೆ.

The Committee of presiding officers has considered the scope of the rule of sub-Judice and recommend the following guide lines.

7) In case of linked matters, part of which is sub-Judice and part not sub-Judice, debate can be allowed on the matters which are not subjudice. ಆದುದರಿಂದ ಸಬ್‌ಜ್ಯೂಡಿಸ್ ಆಗುವ ವಿಚಾರವನ್ನು ಬಿಟ್ಟು ಬೇರೆ ವಿಚಾರದ ಬಗ್ಗೆ ನಿಯಮ ೬೮ರ ಪ್ರಕಾರ ಚರ್ಚೆ ಮಾಡಲು ನಾಳೆ ಅವಕಾಶ ಮಾಡಿಕೊಡುತ್ತೇನೆ ಸಬ್ ಜ್ಯೂಡಿಸ್ ಆಗುವ ವಿಚಾರಗಳನ್ನು ಬಿಟ್ಟು ಉಳಿದ ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡಲು ಅವಕಾಶ ಇದೆ. ಈಗ ಬೇಡಿಕೆಗಳ ಮೇಲೆ ಚರ್ಚೆ.

೪-೦೦ ಪಿ.ಎಂ.

ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ನೇ ಸಾಲಿನ ಅನುದಾನಗಳ ಬೇಡಿಕೆಗಳ ಮೇಲೆ ಚರ್ಚೆ

ಬೇಡಿಕೆಗಳ ಕ್ರ. ಸಂ. ೫೮ — ಗ್ರಾಮಾಂತರ ನೀರು ಸರಬರಾಜು
೫೯ — ಸಾಮುದಾಯಿಕ ಅಭಿವೃದ್ಧಿ
೬೦ — ಗ್ರಾಮಾಂತರ ಸಂಘಟನಾ ಯೋಜನೆ
೬೧ — ಗ್ರಾಮೀಣ ಉದ್ಯೋಗ ಯೋಜನೆ

ಅಧ್ಯಕ್ಷರು.—ಈಗ ಬೇಡಿಕೆ ಸಂಖ್ಯೆ ೫೮, ೫೯, ೬೦ ಮತ್ತು ೬೧ರ ಮೇಲೆ ಚರ್ಚೆ. ಈಗ ಮಾನ್ಯ ಮಂತ್ರಿಗಳು ಬೇಡಿಕೆಗಳನ್ನು ಮಂಡಿಸಬಹುದು.

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು). (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಬೇಡಿಕೆಗಳನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ ೫೮—ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ.—

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧.೩.೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೪,೮೯,೫೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುಧಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ''

ಅಭಿಯಾಚನೆ ಕ್ರಮಾಂಕ ೫೯ – ಸಾಮುದಾಯಿಕ ಅಭಿವೃದ್ಧಿ.—

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧.೩.೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾಮುದಾಯಿಕ ಅಭಿವೃದ್ಧಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೯,೬೬,೬೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.''

ಅಭಿಯಾಚನೆ ಕ್ರಮಾಂಕ ೬೦ – ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ.—

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧.೩.೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೮,೩೨,೯೪,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.''

ಅಭಿಯಾಚನೆ ಕ್ರಮಾಂಕ ೬೧ – ಗ್ರಾಮೀಣ ಉದ್ಯೋಗ ಯೋಜನೆ.—

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧.೩.೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಉದ್ಯೋಗ ಯೋಜನೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೩,೬೬,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.''

ಪ್ರಸ್ತಾವಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು.—ಮೇಲ್ಕಂಡ ಬೇಡಿಕೆಗಳನ್ನು ಸದನದ ಮುಂದೆ ಮಂಡಿಸಲಾಗಿದೆ. ಎಲ್ಲಾ ಬೇಡಿಕೆಗಳೂ ಸದನದ ಮುಂದೆ ಇವೆ. ಈಗ ರಾಮಯ್ಯನವರು ಚರ್ಚೆಯನ್ನು ಪ್ರಾರಂಭಿಸಬಹುದು.

ಶ್ರೀ ಮಲ್ಲಾರಿಗೌಡಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ಎಷ್ಟು ಘಂಟೆಯವರೆಗೆ ಈ ಚರ್ಚೆಯನ್ನು ಮುಂದುವರಿಸುವುದು.

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ. ಅವರು ಮಾತನಾಡಲಿ ನೋಡೋಣ. ಅವರು ಮಾತನಾಡುವುದಕ್ಕೆ ಪ್ರಾರಂಭ ಮಾಡಲಿ, ನಂತರ ನೋಡೋಣ. ರಾಮಯ್ಯನವರೇ, ತಾವು ಪ್ರಾರಂಭ ಮಾಡಿರಿ. ಸ್ವಾಮಿ ಕೆಲಸ, ಸ್ವಂತ ಕೆಲಸ ಎರಡೂ ಆಗಬೇಕು. ಸ್ವಾಮಿ ಕೆಲಸ ಅಂದರೆ ಸದನ ನಡೆಸುವುದು, ಉಳಿದದ್ದು ನಿಮ್ಮ ಸ್ವಂತ ಕೆಲಸ. ಮೊದಲು ಸ್ವಾಮಿ ಕೆಲಸ ಆಗಬೇಕು. ಆಮೇಲೆ ಸ್ವಂತ ಕೆಲಸ.

† ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ೧೯೮೮–೮೯ನೇ ಸಾಲಿನ ಸಮಗ್ರ ಗ್ರಾಮೀಣ ಅಭಿವೃದ್ಧಿ, ಗ್ರಾಮಾಂತರ ನೀರು ಸರಬರಾಜು ಯೋಜನೆ, ಗ್ರಾಮ ನೈರ್ಮಲ್ಯೀಕರಣ ಇವುಗಳನ್ನು ಒಳಗೊಂಡಂಥ ಬೇಡಿಕೆಗಳ ಮೇಲೆ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಭಾರತ ದೇಶ ಹಳ್ಳಿಗಳ ದೇಶ, ಹಳ್ಳಿಗಳ ಉದ್ಧಾರವಾಗದೇ ಭಾರತದ ಉದ್ಧಾರವಾಗುವುದಿಲ್ಲ ಎನ್ನತಕ್ಕಂಥಾದ್ದನ್ನು ರಾಷ್ಟ್ರಪಿತ ಮಹಾತ್ಮಾಜಿಯವರು ಕಳಕಳಿಯಿಂದ ಹೇಳಿದ್ದರು. ಅವರು ಕಂಡಂಥ ಗ್ರಾಮರಾಜ್ಯದ ಕಲ್ಪನೆಯನ್ನು ನನಸು ಮಾಡುವುದಕೋಸ್ಕರ ಹಲವಾರು ಬುದ್ಧಿಜೀವಿ ರಾಜಕಾರಣಿಗಳು ಶ್ರಮಿಸಿರತಕ್ಕಂಥದ್ದನ್ನು ನಾವೆಲ್ಲಾ ಸ್ಮರಿಸಬಹುದು. ಬಹುಶಃ ಇಂದಿನ ಬೇಡಿಕೆಯ ಮೇಲೆ ಚರ್ಚೆ ನಡೆಯುವ ಕಾಲಕ್ಕೆ ಮಾನ್ಯ ನಜೀರ್ ಸಾಹೇಬರು ಇದ್ದರೆ ಗಾಂಧೀಜಿಯವರ ತತ್ವಗಳನ್ನು ಎಲ್ಲೆಲ್ಲಿ ಸೇರಿಸಬೇಕೋ ಅಲ್ಲಲ್ಲಿ ಸೇರಿಸಿ ಅವರದ್ದೇ ಆದಂಥ ದಾಟಿಯಲ್ಲಿ ಉತ್ತರ ಹೇಳುತ್ತಿದ್ದರು. ಆದರೆ ಅನಿವಾರ್ಯವಾಗಿ ಅವರ ಅನಾರೋಗ್ಯದ ಕಾರಣದಿಂದ ಅವರು ಇಲ್ಲಿ ಇಲ್ಲ. ಆದಾಗ್ಯೂ ನಾನು ಹಲವಾರು ವಿಚಾರಗಳನ್ನು ಹೇಳಬಯಸುತ್ತೇನೆ. ಇವತ್ತು ಮಾನ್ಯ ಸಚಿವರು ತಮ್ಮ ಪ್ರಸ್ತಾವನೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. '' ಏನೆಂದರೆ ಸಾಮಾಜಿಕ ನ್ಯಾಯದೊಂದಿಗೆ ಬೆಳವಣಿಗೆಯು ಭಾರತ ದೇಶದ ಯೋಜನೆಯ ಮೂಲೋದ್ದೇಶವಾಗಿದೆ, ಬಡತನವನ್ನು ಕಡಿಮೆ ಮಾಡುವುದರೊಂದಿಗೆ ಅಂತಿಮವಾಗಿ ಅದನ್ನು ತೊಡೆದು ಹಾಕುವುದು ನಮ್ಮ ಗುರಿಯಾಗಿದೆ '' ಎಂದು ಹೇಳಿದ್ದಾರೆ, ಈ ದೇಶದಲ್ಲಿ ಕಾನ್‌ಕ್ರೀಟ್ ಆಗಿ ಬಡತನ ಇದೆ, ಅದನ್ನು ಮೂಲೋತ್ಪಾಟನೆ ಮಾಡತಕ್ಕದ್ದು ನಮ್ಮ ಉದ್ದೇಶ ಎನ್ನತಕ್ಕಂಥ ಕಳಕಳಿಯನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಬಡತನ ನಮ್ಮ ದೇಶದಲ್ಲಿ ಎಷ್ಟರ ಮಟ್ಟಿಗೆ ಇದೆ ಎನ್ನತಕ್ಕಂಥಾದ್ದು ಹಲವಾರು ಸದಸ್ಯರುಗಳಿಗೆ ಪರಿಚಯ ಇದೆ. ಅದನ್ನು ಅನುಭವಿಸದೇ ಮೇಲಕ್ಕೆ ಬಂದಿರತಕ್ಕಂಥವರೂ ಇದ್ದಾರೆ. ಆದರೆ ಬಡತನವನ್ನು ನಮಗೆ ಸಿನಿಮಾ ಮೂಲಕ ಸತ್ಯಕಥೆಯ ಮೂಲಕ ಹೇಳಿದಾಗ ಮಾತ್ರ ಆದರ ಕಲ್ಪನೆ ನಮಗೆ ಅರಿವಾಗುವುದು ಸಾಧ್ಯ. ಅದಕೋಸ್ಕರ ಒಂದು ನಿದರ್ಶನವನ್ನು ನಾನು ಹೇಳಬಯಸುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಮಾನ್ಯ ಅಧ್ಯಕ್ಷರೇ, ಈ ಬಡತನ ಭಾರತದಲ್ಲಿ ಹೇಗೆ ಇದೆ ಎನ್ನತಕ್ಕಂಥಾದನ್ನು ಗಾಂಧೀಜಿಯವರು ಕಂಡಂಥ ನಗ್ನ ಸತ್ಯದ ಕಥೆಯೊಂದರ ಮೂಲಕ ನಾನು ಉದಾಹರಿಸಬಲ್ಲೆ. ಅವರು ಒಮ್ಮೆ ಗುಜರಾತಿನಲ್ಲಿ ಪ್ರಾತಃಕಾಲದ ವಾಕಿಂಗ್ ಎಂದು ಏನು ಕರೆಯುತ್ತಾರೆ ಅದಕ್ಕೆ ಹೋಗುತ್ತಿದ್ದರು. ಅವರು ಪ್ರಮುಖ ರಸ್ತೆಯಲ್ಲಿ ಹೋಗುತ್ತಿದ್ದಾಗ ಅಲ್ಲಿ ಒಂದು ಜನಗಳ ಗುಂಪು ನಿಂತಿತ್ತು. ಬಟ್ಟೆ ಗಂಟನ್ನು ಇಟ್ಟುಕೊಂಡಿದ್ದ ಬಡ ಹೆಂಗಸೊಬ್ಬಳನ್ನು ಸುತ್ತುವರಿದಂಥ ಜನಗಳ ಗುಂಪನ್ನು ಗಾಂಧೀಜಿಯವರು ನೋಡಿದರು. ಆ ಸ್ಥಳಕ್ಕೆ ಗಾಂಧೀಜಿ ಹೋಗಿ ನೋಡಿದರು. ಆ ಹೊತ್ತಿಗಾಗಲೇ ಅಲ್ಲಿಗೆ ಪೋಲಿಸರೂ ಬಂದಿದ್ದರು. ಅವರಿಗೆ ಬಹಳ ಆಶ್ಚರ್ಯ ಆಯಿತು. ಏನು ನಡೆದಿರಬಹುದೆಂಬುದನ್ನು ತಿಳಿದುಕೊಳ್ಳಲು ಗಾಂಧೀಜಿಯವರು ಸ್ಥಳಕ್ಕೆ ಹೋಗಿ ಏನು ಎಂದು ಪ್ರಶ್ನಿಸಿದರು. ಅದಕ್ಕೆ ಜನರು ಈ ಹೆಂಗಸು ಕಳ್ಳತನ ಮಾಡಿಕೊಂಡು ಬಂದಿದ್ದಾಳೆ ಎಂದು ಹೇಳಿದರು. ಪೋಲಿಸರೂ ಸಹ ಈಕೆ ಕಳ್ಳಿ ಎಂಬ ನಿರ್ಣಯಕ್ಕೆ ಬಂದು ಆಕೆಯನ್ನು ಅರೆಸ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಆಗ ಗಾಂಧೀಜಿಯವರು ವಿಚಾರ ಏನೆಂದು ಕೇಳಿ ತಿಳಿಯದೇ ಈ ರೀತಿ ಮಾಡುವುದು ಸರಿಯಲ್ಲ. ಏನೂ ನಡೆದಿದೆ ಎಂದು ಕೇಳಿ ತಿಳಿಯುವ ಪ್ರಯತ್ನ ಮಾಡಬೇಕೆಂದು ಹೇಳಿದರು. ಆಗ ಅವರು ವಿಷಯ ಏನೆಂದು ತಿಳಿಯಲು ಪ್ರಯತ್ನಪಟ್ಟರು. ಆಗ ಆಕೆಯನ್ನು ಏನು ಮಾಡಿದೆ, ಯಾರ ಮನೆಯಲ್ಲಿ ಕದ್ದಿದ್ದೀಯಾ ಏನು ಕದ್ದಿದ್ದೀಯಾ ಎಂದು ಕೇಳಿದಾಗ, ಆಕೆ ತನ್ನ ಕಂಕುಳ ಬದಿಯಲ್ಲಿದ್ದ ಗಂಟನ್ನು ಬಿಚ್ಚಿ ತೋರಿಸಿದಳು. ಅದರಲ್ಲಿ ಒಂದು ಜೊತೆ ಉಡುಪು ಇತ್ತು. ನೆರೆದಿದ್ದ ಜನರಿಗೆ, ಗಾಂಧೀಜಿಯವರಿಗೆ ತನ್ನ ಕಥೆಯನ್ನು ಹೇಳಿದಳು. ನನಗೆ ಎರಡು ಜನ ಮಕ್ಕಳಿದ್ದರು. ಬೆಳಿಗ್ಗೆ ತಾನೇ ಒಬ್ಬ ಮಗ ತೀರಿಕೊಂಡು ಹೋದ. ಅವನು ತೀರಿಕೊಂಡ ಮೇಲೆ ಅವನ ಶವಸಂಸ್ಕಾರ ಮಾಡಿ ಬಂದಾಗ, ಅವನ ಮೈಮೇಲಿದ್ದ ಬಟ್ಟೆಯನ್ನು ತಂದಿದ್ದೇನೆ. ಮನೆಯಲ್ಲಿ ಇರುವ ಇನ್ನೊಬ್ಬ ಮಗನಿಗೆ ತೊಡಿಸ ಬೇಕಾಗಿದೆ, ಅದಕೋಸ್ಕರ ಈ ಬಟ್ಟೆಯನ್ನು ತಂದಿದ್ದೇನೆ ಎಂಬ ಮಾತನ್ನು ಅವಳು ಹೇಳಿದಾಗ ಅಲ್ಲಿದ್ದಂಥವರೆಲ್ಲರಿಗೂ ನಾಚಿಕೆ ಆಯಿತು. ನಮ್ಮ ದೇಶದಲ್ಲಿ ಎಂತಹ ಒಂದು ಕಡು ಬಡತನ ಇದೆ ಎಂದು ಮಹಾತ್ಮಾ ಗಾಂಧೀಜಿಯವರಿಗೆ ಆಗ ಗೊತ್ತಾಯಿತು, ಆ ಒಂದು ಸನ್ನಿವೇಶ ಅದಾಗಿತ್ತು. ಎಷ್ಟು ಆಳವಾದ ಬಡತನ ನಮ್ಮ ದೇಶದಲ್ಲಿ ಇದೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಹೀಗಿರುವಾಗ ಈ ದೇಶದ ಜನತೆಯನ್ನು ಉದ್ಧಾರ ಮಾಡುವುದಕ್ಕೆ ಸರ್ಕಾರಕ್ಕೆ ಕಳಕಳಿ ಮತ್ತು ಇವರನ್ನು ಉದ್ಧಾರ ಮಾಡುವುದಕ್ಕೆ ಕಾಳಜಿ, ಮುತುವರ್ಜಿ ಇಟ್ಟುಕೊಂಡು ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೀರಿ. ಈ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರತಕ್ಕಂಥಾದ್ದಕ್ಕೆ ಒಂದು ಧ್ಯೇಯ ಮತ್ತು ಧೋರಣೆ ಯಾವ ಸರ್ಕಾರಕ್ಕೆ ಇರುತ್ತದೆಯೋ ಆಗ ನಿಜವಾಗಿಯೂ ನಮ್ಮ ದೇಶ ಮುನ್ನಡೆಯುವುದಕ್ಕೆ

ಸಾಧ್ಯವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ನಿಟ್ಟಿನಲ್ಲಿ ಇವತ್ತು ಕಡುಬಡತನವನ್ನು ಹೋಗಲಾಡಿಸುವುದಕ್ಕೆ ಮತ್ತು ಹಳ್ಳಿಗಾಡು ಪ್ರದೇಶಗಳಲ್ಲಿರತಕ್ಕಂಥ ಕಡುಬಡತನದ ಬಗ್ಗೆ ಸ್ವಲ್ಪ ಚಿಂತನೆ ಮಾಡಿ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಘೋಷಣೆ ಮಾಡಿದೆ. ಈ ಕಾರ್ಯಕ್ರಮಗಳಲ್ಲಿ ಕೇಂದ್ರ ಸರ್ಕಾರದ ಪಾಲು ಇದೆ ರಾಜ್ಯ ಸರ್ಕಾರದ ಪಾಲು ಸಹ ಸ್ವಲ್ಪ ಇದೆ. ಸರ್ಕಾರದವರು ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೋ ಆ ಎಲ್ಲಾ ಕಾರ್ಯಕ್ರಮಗಳನ್ನು ನಾನು ಪಟ್ಟಿ ಮಾಡಿದ್ದೇನೆ. ಅಂತಹ ಸುಮಾರು ೧೬ ಕಾರ್ಯಕ್ರಮಗಳು ಇವೆ. ಆ ಎಲ್ಲಾ ಕಾರ್ಯಕ್ರಮಗಳನ್ನು ಒಂದೊಂದಾಗಿ ಪ್ರಸ್ತಾಪ ಮಾಡಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಮಟ್ಟದಲ್ಲಿ ಬಡತನವನ್ನು ಹೋಗಲಾಡಿಸುವುದಕ್ಕೆ ಪ್ರಾಮುಖ್ಯವಾಗಿ ಹಾಕಿಕೊಂಡಿರತಕ್ಕಂಥ ಒಂದು ಕಾರ್ಯಕ್ರಮವೆಂದರೆ ಅದು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ. ಯಾರು ಕಡುಬಡತನವನ್ನು ಅನುಭವಿಸುತ್ತಿದ್ದಾರೋ, ಅಂತಹ ಜನರ ಜೀವನವನ್ನು ಸುಧಾರಿಸುವುದಕ್ಕೆ ಅಂತಹವರಿಗೆ ಕೆಲವು ಸ್ಥಿರಾಸ್ತಿಗಳನ್ನು ಒದಗಿಸಿಕೊಟ್ಟು ಅವರ ಬಡತನವನ್ನು ನಿರ್ಮೂಲನ ಮಾಡುವುದೇ ಈ ಯೋಜನೆಯ ಮೂಲ ಉದ್ದೇಶ. ಯಾರು ಕಡು ಬಡತನದಲ್ಲಿ ಜೀವನ ನಡೆಸಿಕೊಂಡು ಬರುತ್ತಿದ್ದಾರೋ ಅಂತಹವರಿಗೆ ಈ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಸಹಾಯ ಮಾಡಬಹುದು. ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವಲ್ಲಿ ಅನೇಕ ಲೋಪದೋಷಗಳಾಗಿರುವುದನ್ನು ನಾವು ಗಮನಿಸಬಹುದು. ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಯೋಜನೆಗೆ ರಾಜ್ಯ ಸರ್ಕಾರ ಅರ್ಧ ಭಾಗದಷ್ಟು ಹಣವನ್ನು ಮತ್ತು ಕೇಂದ್ರ ಸರ್ಕಾರ ಅರ್ಧ ಭಾಗದಷ್ಟು ಹಣ ಭರಿಸುತ್ತವೆ. ಈ ಒಂದು ಕಾರ್ಯಕ್ರಮವನ್ನು ನಾವು ಅವಲೋಕಿಸಿದಾಗ ಈ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆಮಾಡುವ ಸಲುವಾಗಿ ಅಲ್ಲಲ್ಲಿ ಗ್ರಾಮ ಸಭೆಗಳೆಂದು ನಡೆಸುತ್ತಾರೆ. ಗ್ರಾಮಸಭೆಗಳಲ್ಲಿ ಯಾರ್ಯಾರಿಗೆ ಹಸಿರು ಕಾರ್ಡು ಕೊಡಬೇಕೆನ್ನುವ ಬಗ್ಗೆ ಫಲಾನುಭವಿಗಳನ್ನು ಗುರುತಿಸುವ ಕೆಲಸ ಮಾಡುತ್ತಾರೆ. ಆದರೆ ಈ ಹಸಿರು ಕಾರ್ಡುಗಳನ್ನು ಯಾರಿಗೆ ಕೊಟ್ಟಿದ್ದಾರೆ ಎನ್ನತಕ್ಕಂಥ ಪ್ರಶ್ನೆಯನ್ನು ಸದನದಲ್ಲಿರುವ ಎಲ್ಲಾ ಮಾನ್ಯ ಸದಸ್ಯರು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಖಾತೆ ಇರುವವರನ್ನು ಈ ಹಸಿರು ಕಾರ್ಡು ಕೊಡುವುದಕ್ಕೆ ಗುರುತಿಸಬಾರದೆಂದು ಸರ್ಕಾರದ ಆದೇಶ ಇದೆ. ಆದರೆ ದೊಡ್ಡ ದೊಡ್ಡ ಜಮೀನುದಾರರ ಮನೆಗಳಲ್ಲಿ ಯಾರ ಹೆಸರಿನಲ್ಲಿ ಖಾತೆಗಳು ಇರುವುದಿಲ್ಲವೋ ಅಂತಹವರ ಹೆಸರಿನಲ್ಲಿ ಇವತ್ತು ನಾವು ಹಸಿರುಕಾರ್ಡುಗಳನ್ನು ಕೊಟ್ಟಿರುವುದು ಕಾಣಬಹುದು. ಇಂತಹ ತಪ್ಪುಗಳು ಈ ಹಸಿರು ಕಾರ್ಡು ಕೊಡುವ ಕಾರ್ಯಕ್ರಮದಲ್ಲಿ ನಡೆದಿದೆ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಕಡು ಬಡವರು ಯಾರಿದ್ದಾರೆ ಅಂತಹವರನ್ನು ಗುರುತಿಸಿ ಅವರಿಗೆ ಸಹಾಯ ಮಾಡುವ ಕಳಕಳಿಯನ್ನು ಸರ್ಕಾರದವರು ಇಟ್ಟುಕೊಳ್ಳಬೇಕಾಗುತ್ತದೆ. ಆದರೆ ಇವತ್ತು ಆ ಕೆಲಸ ನಡೆದಿಲ್ಲ. ಗ್ರಾಮಸಭೆಗಳಲ್ಲಿ ಕೆಲವು ಗುಂಪುಗಳನ್ನಾಗಿ ವಿಂಗಡಣೆ ಮಾಡುತ್ತಾರೆ. ಎ. ಬಿ. ಸಿ. ಡಿ. ಗ್ರೂಪ್‌ಗಳು ಇದ್ದ ಹಾಗೆ ಮತ್ತು ಎಸ್. ಸಿ. ಎಸ್. ಟಿ. ಗ್ರೂಪ್‌ಗಳು ಇದ್ದಹಾಗೆ, ಈ ಗುಂಪುಗಳಲ್ಲಿ ನಾಲ್ಕೈದು ಜನರನ್ನು ಫಲಾನುಭವಿಗಳೆಂದು ಆಯ್ಕೆ ಮಾಡಬೇಕೆಂದು ಗ್ರಾಮಸಭೆಗಳಲ್ಲಿ ಸೂಚನೆ ಮಾಡುತ್ತಾರೆ. 'ಎ' ಗ್ರೂಪ್‌ನಲ್ಲಿ ಯಾರಾದರೂ ಒಬ್ಬ ಸದಸ್ಯರನ್ನು ಕರೆದು ನಿಮ್ಮ ಗ್ರೂಪ್‌ನಲ್ಲಿ ಯಾರಾದರೂ ನಾಲ್ಕೈದು ಜನರನ್ನು ಆಯ್ಕೆಮಾಡಿ ಎಂದು ಹೇಳುತ್ತಾರೆ. ಒಂದೊಂದು ಗ್ರೂಪ್‌ನಲ್ಲಿ ನಾಲ್ಕೈದು ಜನ ಫಲಾನುಭವಿಗಳನ್ನು ಆಯ್ಕೆ ಮಾಡುವ ಕಾರ್ಯಕ್ರಮವಿದ್ದು ತಾವು ನಾಲ್ಕೈದು ಜನರನ್ನು ಆಯ್ಕೆಮಾಡಿ ಎಂದು ಅಧಿಕಾರಿಗಳು ಹೇಳಿದಾಗ ಬಹುಶಃ ಆಯ್ಕೆ ಮಾಡುವವರು ಏನು ಮಾಡುತ್ತಾರೆಂದರೆ ಅವರ ಸಂಬಂಧಿಕರಿಗೆ ಅಥವಾ ದೂರದ ಸಂಬಧಿಕರಿಗೆ ಈ ಸೌಲಭ್ಯ ಸಿಗುವಂತೆ ಆಯ್ಕೆ ಮಾಡುತ್ತಾರೆ. ಇಂತಹ ತಪ್ಪುಗಳು ಇಂತಹ ತಪ್ಪು ನಡವಳಿಕೆಗಳನ್ನು ನಡೆಯ ತಕ್ಕಂತಾದ್ದನ್ನು ನಾವು ನೋಡುತ್ತಿದ್ದೇವೆ. ಈ ರೀತಿ ಮಾಡುವುದರಿಂದ ಕಡುಬಡವರನ್ನು ಗುರುತಿಸಿ ಅವರಿಗೆ ಈ ಸೌಲಭ್ಯವನ್ನು ಮುಟ್ಟಿಸಿ ಅವನ ಜೀವನ ಸುಧಾರಿಸುವಂತೆ ಮಾಡಲು ಸಾಧ್ಯವಾಗುವುದಿಲ್ಲ. ಇನ್ನು ಕೆಲವು ಕಡೆ ಜಾತಿಯ ಆಧಾರದ ಮೇಲೆ ಫಲಾನುಭವಿಗಳನ್ನು ಗುರುತಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ. ಸರ್ಕಾರಕ್ಕೆ ನಿಜವಾದ ಕಳಕಳಿ ಇದ್ದರೆ, ಕಡು ಬಡವರಿಗೆ ಸಹಾಯ ಮಾಡಬೇಕೆನ್ನುವ ಮನಸ್ಸು ಇದ್ದರೆ ತಾವೊಂದು ಸರ್ವೆಯನ್ನು ಕಂಡಕ್ಟ್ ಮಾಡಿ ಒಂದು ಪಟ್ಟಿಯನ್ನು ತಯಾರು ಮಾಡಿ ಕಡುಬಡತನದಲ್ಲಿ ಬರತಕ್ಕಂಥ ಜನರು ಯಾರ್ಯಾರು ಇದ್ದಾರೋ ಅಂತಹ ಜನರಿಗೆ ಈ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಅದು ಬಿಟ್ಟು ಗ್ರಾಮ ಸಭೆಗಳಲ್ಲಿ ಅಲ್ಲಿನ ಸದಸ್ಯರು ಫಲಾನುಭವಿಗಳನ್ನು ಆಯ್ಕೆ ಮಾಡುವುದಾದರೆ ನಾನು ಮೊದಲೇ ಹೇಳಿದಹಾಗೆ ತಮ್ಮ ಸಂಬಂಧಿಕರಿಗೆ ದೂರದ ಸಂಬಂಧಿಕರಿಗೆ ಜಾತಿಯ ಆಧಾರದ ಮೇಲೆ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಈ ಪ್ರಯೋಜನ ಸಿಗುವಂತಹ ವ್ಯವಸ್ಥೆ ಮಾಡುತ್ತಾರೆ. ಆದ್ದರಿಂದ ಕಡುಬಡವರನ್ನು ಗುರುತಿಸುವ

ಒಂದು ಸರ್ವೆಯನ್ನು ಸರ್ಕಾರದವರು ನೇರವಾಗಿ ಮಾಡತಕ್ಕಂಥ ಕೆಲಸ ಮಾಡಿದರೆ ಆಗ ಈ ಯೋಜನೆ ಸಫಲವಾಗುತ್ತದೆಂದು ನಾನು ಸಲಹೆ ಮಾಡುತ್ತೇನೆ. ಇವತ್ತು ಹಳ್ಳಿಗರ ದುಃಖ ದುಮ್ಮಾನಗಳನ್ನು ಬಗೆಹರಿಸಬೇಕೆಂದು ಸರ್ಕಾರ ಭಗೀರಥ ಪ್ರಯತ್ನ ಮಾಡುತ್ತಿದೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಜನರುಗಳಿಗೆ ಸರಿಯಾದ ರೀತಿಯಲ್ಲಿ ಈ ನಮ್ಮ ಯೋಜನೆಗಳ ಫಲ ಸಿಕ್ಕುತ್ತಿಲ್ಲ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಎಲ್ಲಾ ಬಡ ರೈತರುಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಯೋಜನೆಗಳನ್ನು ತಯಾರು ಮಾಡಲಾಗುತ್ತದೆ. ಆ ಯೋಜನೆಗಳ ಫಲ ಯಾರಿಗೆ ಸಿಕ್ಕುತ್ತಿವೆ ಎಂಬುದು ಎಲ್ಲರಿಗೂ ಅರ್ಥವಾಗಿದೆ. ಇವತ್ತು ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಬಡ ರೈತರುಗಳಿಗೆ ಹಸು, ಎಮ್ಮೆ ಮುಂತಾದ ಸಾಕು ಪ್ರಾಣಿಗಳನ್ನು ಕೊಟ್ಟು ಅವರು ಜೀವನ ಮಾಡುವುದಕ್ಕೆ ಅನುಕೂಲವಾಗುವಂತೆ ಮಾಡಲಾಗುತ್ತಿದೆ. ಆದರೆ, ಬಡವರು ಸರ್ಕಾರದಿಂದ ಸಾಲ ತೆಗೆದುಕೊಳ್ಳುವುದಕ್ಕಾಗಿ ನಾವು ಹಸು, ಎಮ್ಮೆಗಳನ್ನು ಸಾಕುತ್ತೇವೆಂದು ಹೇಳಿ ಸಾಲವನ್ನು ಪಡೆದು ಹಣವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಹಸು ಮತ್ತು ಎಮ್ಮೆಗಳಿಗೆ ಸಾಲ ಕೊಡುವುದಕ್ಕಿಂತ ಮುಂಚಿತವಾಗಿ ವೈದ್ಯರುಗಳು ಅವುಗಳ ಆರೋಗ್ಯದ ಬಗ್ಗೆ ಹಾಗೂ ಹಾಲು ಕರೆಯುವ ಬಗ್ಗೆ ಸರ್ಟಿಫಿಕೇಟ್‌ನ್ನು ಕೊಡಬೇಕಾಗುತ್ತದೆ. ಈ ವೈದ್ಯರುಗಳು ಏನು ಮಾಡುತ್ತಾರೆಂದರೆ, ಸಾಲ ಪಡೆಯುವವರಿಂದ ಹಣ ಪಡೆದುಕೊಂಡು ಹಾಲು ಕರೆಯುವ ಶಕ್ತಿ ಇಲ್ಲದೇ ಇರುವ ಹಸು ಮತ್ತು ಎಮ್ಮೆಗಳಿಗೆ ಉತ್ತಮವಾಗ ತಳಿಯ ಹಸುಗಳೆಂದು ಸರ್ಟಿಫಿಕೇಟ್ ಕೊಡುತ್ತಾರೆ. ಎಲ್ಲಾ ಫಲಾನುಭಿಗಳಿಂದಲೂ ಹಣ ಪಡೆಯುವ ಆಫೀಸರ್‌ಗಳು ಎಲ್ಲಾ ತಾಲ್ಲೂಕು ಬಿ. ಡಿ. ಒ., ಕಚೇರಿಗಳಲ್ಲಿ ಇದ್ದಾರೆ. ಸರ್ಕಾರ ಇದುವರೆಗೆ ಬಡವರಿಗಾಗಿ ಕೊಟ್ಟಿರತಕ್ಕ ಹಸು, ಎಮ್ಮೆಗಳು, ಇವತ್ತಿನ ದಿವಸ ಆ ಬಡವರ ಹತ್ತಿರ ಇಲ್ಲ ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಬಡವರಿಗೆ ಸಾಲ ಕೊಡುವ ಕಾರ್ಯಕ್ರಮದ ಜೊತೆಗೆ ಕೊಟ್ಟ ಸಾಲವನ್ನು ಯಾವ ರೀತಿ ಉಪಯೋಗಿಸಿಕೊಂಡಿದ್ದಾರೆಂದು ಸಹ ನಾವು ನೋಡಬೇಕಾಗುತ್ತದೆ. ಸಾಲವನ್ನು ಪಡೆದ ಫಲಾನುಭವಿಗಳು ಯಾವ ಕಾರಣಕ್ಕೆ ಸಾಲವನ್ನು ತೆಗೆದುಕೊಂಡಿದ್ದಾರೋ, ಆ ಉದ್ದೇಶಕ್ಕೆ ಹಣವನ್ನು ಬಳಸದೇ ಇದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಶಾಸನವನ್ನು ತರಬೇಕು. ಯಾರು ಸಾಲವನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಂಡಿರುತ್ತಾರೋ ಅಂಥವರುಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಹಾಗೆ ಮಾಡಿದರೆ ಮಾತ್ರ ಗ್ರಾಮೀಣ ಪ್ರದೇಶದ ಬಡವರು ಮುಂದುವರಿಯುವುದಕ್ಕೆ ಸಾಧ್ಯ, ಆಗ ಜನಗಳು ಅಭಿವೃದ್ಧಿ ಹೊಂದುತ್ತಾರೆ. ಮಾನ್ಯ ಅಧ್ಯಕ್ಷರೇ, ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯು ಒಂದು ವಿಶಿಷ್ಟವಾಗಿದೆಯೆಂದು ಎಲ್ಲರೂ ಅರ್ಥಮಾಡಿಕೊಂಡಿದ್ದಾರೆ. ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಡಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಸಾಲವನ್ನು ತೆಗೆದುಕೊಂಡರೆ, ಆ ಸಾಲದಲ್ಲಿ ೨೫ ಪರ್‌ಸೆಂಟ್‌ನಷ್ಟು ಹಣವನ್ನು ಸಹಾಯಧನವನ್ನಾಗಿ ಸರ್ಕಾರ ಕೊಡಬೇಕು. ೨೫ ಪರ್ಸೆಂಟಿನಷ್ಟು ಹಣವನ್ನು ಸರ್ಕಾರ ಸಹಾಯ ಧನವನ್ನಾಗಿ ಕೊಟ್ಟರೆ ಮಾತ್ರ ಬಡ ರೈತರುಗಳು ಅಭಿವೃದ್ಧಿ ಹೊಂದುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ಅಧ್ಯಕ್ಷರೇ, ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಡಿಯಲ್ಲಿ ೧೯೮೬–೮೭ನೇ ಸಾಲಿನಲ್ಲಿ ೮೭ ಸಾವಿರ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಧನ ಸಹಾಯವನ್ನು ಮಾಡಬೇಕೆಂದು ಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ಆದರೆ ೭೦ ಸಾವಿರದ ೩೫೦ ಜನರಿಗೆ ಮಾತ್ರ ಸರ್ಕಾರ ಧನ ಸಹಾಯವನ್ನು ಮಾಡುವುದಕ್ಕೆ ಸಾಧ್ಯವಾಗಿದೆ. ಇನ್ನು ಉಳಿದ ಫಲಾನುಭವಿಗಳನ್ನು ಸಹ ಸಕಾಲದಲ್ಲಿ ಗುರುತಿಸಿ ಧನ ಸಹಾಯವನ್ನು ಸರ್ಕಾರ ಮಾಡಬಹುದಾಗಿತ್ತು. ಈ ಯೋಜನೆಗಾಗಿ ಕೇಂದ್ರ ಸರ್ಕಾರವು ಯಾವ ಮಟ್ಟದಲ್ಲಿ ಹಣವನ್ನು ಕೊಡುತ್ತದೆಯೋ ಅದೇ ಮಟ್ಟದಲ್ಲಿ ರಾಜ್ಯ ಸರ್ಕಾರವೂ ಹಣವನ್ನು ಒದಗಿಸಿದ್ದಿದ್ದರೆ ಎಷ್ಟು ಗುರಿ ಇಟ್ಟುಕೊಳ್ಳಲಾಗಿತ್ತೋ ಅದನ್ನು ಪೂರೈಸಬಹುದಾಗಿತ್ತು. ರಾಜ್ಯ ಸರ್ಕಾರವು ತಕ್ಕ ಪ್ರಮಾಣದಲ್ಲಿ ಹಣವನ್ನು ಒದಗಿಸದೆ ಗುರಿಗೆ ತಕ್ಕಂತೆ ಫಲಾನುಭವಿಗಳಿಗೆ ಸಹಾಯವನ್ನು ಮಾಡಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ, ರಾಜ್ಯ ಸರ್ಕಾರದ ವತಿಯಿಂದ ಅಂತ್ಯೋದಯ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಯಾವ ಜನರಿಗೆ ತಿಂಗಳಿಗೆ ೧೫೦ ರೂಪಾಯಿಗಳಿಗಿಂತ ಕಡಿಮೆ ಆದಾಯ ಇರುತ್ತದೆಯೋ ಅಂದರೆ, ವಾರ್ಷಿಕ ವರಮಾನ ೧೮೦೦ ರೂಪಾಯಿಗಳಿಗಿಂತ ಕಡಿಮೆ ಆದಾಯ ಇದ್ದವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ಯೋಜನೆ ಇದರಲ್ಲಿ ಇದೆ. ಕುಶಲ ಕರ್ಮಿಗಳಿಗೆ ವಾರ್ಷಿಕ ೧೮೦೦೦ ರೂಪಾಯಿಗಳವರೆಗೆ ಆದಾಯ ಇದ್ದರೂ ಅವರುಗಳಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ಯೋಜನೆ ಇದೆ. ಈ ರೀತಿ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆ ಐ.ಆರ್.ಡಿ.ಪಿ.ನಲ್ಲಿ ಇರುವುದಿಲ್ಲ. ಈ ಅಂತ್ಯೋದಯ ಯೋಜನೆಯಡಿಯಲ್ಲಿ ಎಲ್ಲಾ ಬಡವರಿಗೂ ಮನೆಗಳನ್ನು ಕರಾರುವಕ್ಕಾಗಿ ಕಟ್ಟಿಸಿಕೊಡಲಾಗಿದೆಯೇ ಎಂದು ಆಯಾ ಜಿಲ್ಲೆಯ ಉಸ್ತುವಾರಿ

ಮಂತ್ರಿಗಳು ನೋಡಿಕೊಳ್ಳಬೇಕಾಗುತ್ತದೆ. ಇಲ್ಲವಿದ್ದರೆ ಇದು ರಾಜಕೀಯ ದುರ್ಲಾಭಕ್ಕೆ ಒಳಗಾಗುತ್ತದೆ ಎನ್ನತಕ್ಕಂಥಾದ್ದನ್ನು ತಾವು ಮನಗಾಣಬೇಕು. ೧೯೮೬-೮೭ನೇ ಇಸವಿಯಲ್ಲಿ ಸುಮಾರು ೧೭೪ ಕೋಟಿ ರೂ.ಗಳನ್ನು ಖರ್ಚು ಮಾಡಬೇಕೆಂದು ಗುರಿ ಇದ್ದರೆ, ೧೬೨.೪೫ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ೮,೭೦೦ ಫಲಾನುಭವಿಗಳೆಂದು ಗುರಿ ಇಟ್ಟುಕೊಂಡಿದ್ದರೆ, ಅದರಲ್ಲಿ ೨,೭೭೬ ಜನರಿಗೆ ಮಾತ್ರ ಅನುಕೂಲವಾಗಿದೆ. ೧೯೮೭-೮೮ನೇ ಇಸವಿಯಲ್ಲಿ ೧೫೧ ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡು ಅದರಲ್ಲಿ ಕೇವಲ ೯೧ ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೀರಿ. ಇದನ್ನು ನೋಡಿದರೆ ಇವರಿಗೆ ಆರ್ಥಿಕ ಮುಗ್ಗಟ್ಟು ಇದೆ ಎಂದು ಹೇಳತಕ್ಕಂಥಾದ್ದನ್ನು ಇವರು ಅಲ್ಲಗಳೆದರೂ ಇವರು ೧೯೮೭-೮೮ನೇ ಸಾಲಿನಲ್ಲಿ ಸಾಧಿಸಿದ ಗುರಿಯಿಂದ ತಿಳಿದುಕೊಳ್ಳಬಹುದು. ಅಂದರೆ ೧೫೫ ಕೋಟಿ ರೂಪಾಯಿಗಳಲ್ಲಿ ಅರ್ಧ ಭಾಗಕ್ಕಿಂತ ಸ್ವಲ್ಪ ಹೆಚ್ಚು ಖರ್ಚು ಮಾಡಿದ್ದಾರೆ. ಆದುದರಿಂದ ಇವರ ಆರ್ಥಿಕ ಚೇತನ ಸರಿಯಾಗಿಲ್ಲ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ಮತ್ತು ಇಂತಹ ಕಾರ್ಯಕ್ರಮಗಳನ್ನು ಸೂಕ್ತ ರೀತಿಯಲ್ಲಿ ಕಾರ್ಯಗತಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕರ್ನಾಟಕದಲ್ಲಿ ಭೂಸುಧಾರಣೆಯ ಮೂಲಕ ಒಂದು ಕ್ರಾಂತಿಕಾರಕ ಬದಲಾವಣೆಗಳಾದವು. ಭೂಸುಧಾರಣೆಯು ಜಾರಿಗೆ ಬಂದನಂತರ ಯಾರು ಗುತ್ತಿಗೆ ಭೂಮಿಯನ್ನು ಮಾರತಕ್ಕಂಥ ಮತ್ತು ಬೇರೆ ಬೇರೆಯವರ ಭೂಮಿಯಲ್ಲಿ ಕೂಲಿ ಕೆಲಸ ಮಾಡತಕ್ಕಂಥ ಒಂದು ಪದ್ಧತಿ ಏನಿತ್ತು ಅದನ್ನು ನಿವಾರಿಸಿ ಉಳುವವನೇ ಭೂಮಿಯ ಒಡೆಯನಾಗಬೇಕೆಂಬ ಕಾರ್ಯಕ್ರಮವು ಜಾರಿಗೆ ಬಂದ ನಂತರ, ಮತ್ತು ೫೪ ಎಕರೆಗಳಿಗಿಂತ ಹೆಚ್ಚಿಗೆ ಭೂಮಿ ಇರತಕ್ಕಂಥ ಭೂಮಾಲೀಕರಿಂದ ಹೆಚ್ಚುವರಿ ಭೂಮಿಯನ್ನು ಪಡೆದು ಕೃಷಿಕಾರ್ಮಿಕರಿಗೆ ಹಂಚತಕ್ಕಂಥ ಒಂದು ಕಾರ್ಯಕ್ರಮ ಜಾರಿಗೆ ಬಂತು. ಅದರ ಅನ್ವಯ ೧೯೮೨ನೇ ಇಸವಿಯಲ್ಲಿ "ನೇಗಿಲು ಭಾಗ್ಯ" ಎಂಬ ಕಾರ್ಯಕ್ರಮವೂ ಜಾರಿಗೆ ಬಂತು. ಯಾರ್‍ಯಾರು ಹೆಚ್ಚುವರಿ ಭೂಮಿಯನ್ನು ಪಡೆದಿರುತ್ತಾರೆ, ಮತ್ತು ಗೇಣಿದಾರರು ಆಗಿರುತ್ತಾರೆ, ಅಂತಹವರಿಗೆ ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೋಸ್ಕರವಾಗಿ ಒಂದು ಸಾವಿರ ರೂಪಾಯಿಗಳನ್ನು ಕೊಡುವಂಥ ಯೋಜನೆಯನ್ನು ಜಾರಿಗೆ ತಂದರು. ಮತ್ತು ೫೦೦ರೂ.ಗಳನ್ನು ವ್ಯವಸಾಯ ಇಲಾಖೆ ವತಿಯಿಂದ ಅವರಿಗೆ ವ್ಯವಸಾಯದ ಉಪಕರಣಗಳನ್ನು ಕೊಳ್ಳುವುದಕ್ಕೆ ಅವರಿಗೆ ಸಹಾಯ ಮಾಡಿದರು. ಅಂಥ ಒಂದು ಕಾರ್ಯಕ್ರಮದಲ್ಲಿ ೧೯೮೬-೮೭ರಲ್ಲಿ ಸುಮಾರು ೪೮.೯೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಉದ್ದೇಶ ಏತಕ್ಕೋಸ್ಕರವಾಗಿ ಅಂದರೆ, ಭೂಮಿಯನ್ನು ಆಗತಾನೆ ಪಡೆದಂಥವರಿಗೆ ಅದನ್ನು ಉಳುವುದಕ್ಕೆ ಶಕ್ತಿ ಇರುವುದಿಲ್ಲ, ಆದಕ್ಕೋಸ್ಕರವಾಗಿ ಒಂದು ಜೊತೆ ಎತ್ತು ಕೊಂಡುಕೊಂಡರೆ, ಅವರು ಅವಲಂಬಿಸಿರತಕ್ಕಂಥ ಭೂಮಿಯನ್ನು ಉಳಬಹುದು ಎಂಬುದು ಸರಕಾರದ ಕಾರ್ಯಕ್ರಮದ ಇಂಗಿತವಾಗಿತ್ತು. ಅದರಲ್ಲಿ ಇನ್ನೂ ಸರಿಯಾಗಿ ಫಲಾನುಭವಿಗಳನ್ನು ಗುರುತಿಸಿಲ್ಲ, ಎಲ್ಲರಿಗೂ ಆದರ ಉಪಯೋಗ ಆಗಬೇಕು ಮತ್ತು ಅನೇಕ ಜನಗಳಿಗೆ ಬ್ಯಾಂಕುಗಳು ಸರಕಾರದಿಂದ ಬರತಕ್ಕ ಸಬ್ಸಿಡಿ ಹಣವು ಬಂದೇ ಬರುತ್ತದೆ ಎಂದು ಬಿಡುಗಡೆ ಮಾಡಿದ ಸಾಲದ ಹಣದ ಮರುಪಾವತಿಗಾಗಿ ಕಾಯುವ ಪರಿಸ್ಥಿತಿಯು ಇದೆ. ಕಾರಣ ಸಬ್ಸಿಡಿ ಹಣವನ್ನು ಸರಿಯಾಗಿ ಬ್ಯಾಂಕ್‌ಗಳಿಗೆ ಸಂದಾಯ ಮಾಡಿಲ್ಲ.

ಈ ನೇಗಿಲು ಭಾಗ್ಯ ಯೋಜನೆಯಿಂದ ಬಹಳಷ್ಟು ಜನಗಳಿಗೆ ಉಪಯೋಗ ಆಗಬೇಕಾಗಿದೆ ಆದುದರಿಂದ ನಿಲುಗಡೆಯಾದ ಈ ಯೋಜನೆಯನ್ನು ಎಲ್ಲಾ ಗೇಣಿದಾರರಿಗೆ ಮತ್ತು ಹೆಚ್ಚುವ. ಭೂಮಿಯನ್ನು ಪಡೆದವರಿಗೆ ಉಪಯೋಗವಾಗುವಂಥ ರೀತಿಯಲ್ಲಿ ಜಾರಿ ಮಾಡಬೇಕು. ಭೂಸುಧಾರಣೆಯಲ್ಲಿ ಹೆಚ್ಚುವರಿ ಭೂಮಿಯನ್ನು ಪಡೆದಂತಹವರಿಗೆ ನೆರವನ್ನು ಕೊಡತಕ್ಕಂಥ ಒಂದು ಕಾರ್ಯಕ್ರಮ ಇದೆ.೧೯೮೦ರಲ್ಲಿ ಈ ಕಾರ್ಯಕ್ರಮ ಜಾರಿಗೆ ಬಂತು. ಇಲ್ಲಿ ಪ್ರತಿ ಹೆಕ್ಟಾರ್‌ಗೆ ೨,೫೦೦ ರೂ.ಗಳ ಸ್ವತ್ತನ್ನು ಕೊಡಿಸತಕ್ಕಂಥ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಅಲ್ಲಿ ಭೂಮಿಯನ್ನು ಅಭಿವೃದ್ಧಿ ಮಾಡತಕ್ಕಂಥಾದ್ದು, ಕೃಷಿ ಅಭಿವೃದ್ಧಿ ಮಾಡತಕ್ಕಂಥಾದ್ದು, ಈ ಎರಡೂ ದೃಷ್ಟಿಯನ್ನು ಇಟ್ಟುಕೊಂಡು ಎರಡೂವರೆ ಎಕರೆಗೆ ೨೫೦೦ ರೂ.ಗಳ ಆರ್ಥಿಕ ನೆರವನ್ನು ಕೊಡತಕ್ಕಂಥ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಈ ಉದ್ದೇಶದ ಅಡಿಯಲ್ಲಿ ೮೬-೮೭ನೇ ಇಸವಿಯಲ್ಲಿ ೩೩.೩೯ ಲಕ್ಷದಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಅಂದರೆ ಇಲ್ಲಿ ಬಡತನವನ್ನು ಮೂಲೋತ್ಪಾಟನೆ ಮಾಡುವಂತಹ ಉದ್ದೇಶವನ್ನು ಇಟ್ಟುಕೊಂಡರೆ, ಹಾಗೂ ಒಂದು ಗುರಿಯನ್ನು ಇಟ್ಟುಕೊಂಡು ಅದಕ್ಕೆ ಒಂದು ಯೋಜನೆಯನ್ನು ತಯಾರು ಮಾಡಿ, ತಕ್ಕಷ್ಟು ಹಣವನ್ನು ಸಂಗ್ರಹಿಸಿ ಜವಾಬ್ದಾರಿಯುತವಾಗಿ ಅದನ್ನು ಜಾರಿಯಲ್ಲಿ ತರಬೇಕಾಗುತ್ತದೆ. ಅದನ್ನು ಬಿಟ್ಟು ನಮಗೆ ನಾನಾ ತರಹದ ಕಷ್ಟಗಳು ಇವೆ ಎಂದು ಬಡವರಿಗೆ ಇಟ್ಟಂಥ ಕಾರ್ಯಕ್ರಮಗಳನ್ನು ನೀವು ಕಡಿಮೆ ಮಾಡಿದರೆ ಬಡತನವನ್ನು ಮೂಲೋತ್ಪಾಟನೆ ಮಾಡತಕ್ಕಂಥ ನಿಮ್ಮ ಮಾತುಗಳು ಬರಿ ಗಂಟುಗಳು ಆಗುತ್ತವೆ ಎನ್ನುವುದನ್ನು ಎಲ್ಲರೂ

ಅರ್ಥಮಾಡಿಕೊಳ್ಳಬೇಕು. ಇಂತಹ ಯೋಜನೆಗಳಿಗೋಸ್ಕರವಾಗಿ ಇಡುವ ಹಣವನ್ನು ಕಾಪು ದಾಸ್ತಾನಿನಲ್ಲಿ ಇಡಬೇಕು. ಬರಗಾಲ ಪರಿಸ್ಥಿತಿಗೋಸ್ಕರವಾಗಿ ನಾವು ತೆಗೆದುಕೊಳ್ಳುವ ಮುಂಜಾಗರೂಕತೆಯನ್ನು ಇವುಗಳ ಸಲುವಾಗಿಯೂ ತೆಗೆದುಕೊಳ್ಳಬೇಕು. ಅದಕ್ಕೆ ಬೇಕಾದ ಬೇರೆ ಬೇರೆ ಸವಲತ್ತುಗಳನ್ನು ಕೂಡ ಕೂಡಿ ಹಾಕತಕ್ಕಂಥ ವ್ಯವಹಾರಗಳನ್ನು ನಾವು ಇಟ್ಟುಕೊಳ್ಳಬೇಕು. ಇಲ್ಲದೇ ಹೋದರೆ ಇಂತಹ ಯೋಜನೆಗಳಿಂದ ರೈತರಿಗೆ ಭ್ರಮನಿರಸನವಾಗುತ್ತದೆ. ಇಂತಹ ಯೋಜನೆಗಳು ಬಂದು ತನ್ನ ಉದ್ಧಾರವಾಗಬಹುದು ಎನ್ನುವ ನಿರೀಕ್ಷೆಯನ್ನು ಆತನು ಇಟ್ಟುಕೊಂಡಿರುತ್ತಾನೆ. ಇದು ಆಗದಿದ್ದರೆ ರೈತನಿಗೆ ಬಹಳ ಬೇಸರ ತರತಕ್ಕಂಥ ಸಂದರ್ಭವೂ ಒದಗುತ್ತದೆ. ಆದುದರಿಂದ ಇಂತಹ ಕಾರ್ಯಕ್ರಮಗಳಿಗೆ ಆರ್ಥಿಕ ನೆರವನ್ನು ಪೂರ್ಣಪ್ರಮಾಣದಲ್ಲಿ ಒದಗಿಸತಕ್ಕಂಥಾದ್ದು ಸರಕಾರದ ಜವಾಬ್ದಾರಿ ಎಂದು ಹೇಳಬಯಸುತ್ತೇನೆ.

ಇನ್ನು ಬಡತನವನ್ನು ಕಡಿಮೆ ಮಾಡತಕ್ಕಂಥ ಕಾರ್ಯಕ್ರಮಗಳಲ್ಲಿ ಟ್ರೈಸಮ್ ಎನ್ನತಕ್ಕಂಥ ಒಂದು ಕಾರ್ಯಕ್ರಮ ಇತ್ತು. ಇದು ಹಳ್ಳಿಗಾಡಿನಲ್ಲಿರತಕ್ಕಂಥ. ೧೮ರಿಂದ ೩೫ ವರ್ಷಗಳವರೆಗೆ ಯುವಕರಿಗಾಗಿ ತಯಾರು ಮಾಡಿದ ಕಾರ್ಯಕ್ರಮವಾಗಿತ್ತು ೧೮ರಿಂದ ೩೫ವರ್ಷದವರೆಗಿನ ಯುವಕರು ಗ್ರಾಮೀಣ ಪ್ರದೇಶಗಳಲ್ಲಿ ಲಭ್ಯವಿರುವ ಸಾಮಗ್ರಿಗಳನ್ನು ಬಳಸಿಯೇ ಸ್ವಯಂ ಉದ್ಯೋಗ ಮಾಡುವ ಕಾರ್ಯಕ್ರಮ ಇದಾಗಿದೆ. ಇದರಡಿಯಲ್ಲಿ ಸರ್ಕಾರ ೮೬-೮೭ರಲ್ಲಿ ೩೦.೭೩ ಲಕ್ಷ ರೂ.ಗಳನ್ನು ಖರ್ಚು ಮಾಡಿದೆ. ೮೭-೮೮ರಲ್ಲಿ ೫೮೯೨ ಯುವಕರನ್ನು ಗುರುತಿಸಿ ೬೯.೬೫ ಲಕ್ಷ ರೂ.ಗಳನ್ನು ಖರ್ಚು ಮಾಡಿದೆ, ಅಂದರೆ ಇನ್ನೂ ಬಹಳಷ್ಟು ಯುವಕರಿಗೆ ಸ್ವಯಂ ಉದ್ಯೋಗ ಒದಗಿಸುವ ಭರವಸೆ ಇದೆ. ಏಕೆಂದರೆ ಇಂದಿನ ಯುವಕರಿಗೆ ಸರ್ಕಾರದ ಉದ್ಯೋಗ ಒಂದೇ ಸಿಗುತ್ತಿಲ್ಲ. ಆದ್ದರಿಂದ ಯುವಕರಿಗೆ ಬೇರೆ ಬೇರೆ ದುಡಿಮೆಯ ಮಾರ್ಗಗಳು ಬೇಕಾಗಿದೆ. ನಮ್ಮ ಪ್ರಕೃತಿಯ ವೈಪರೀತ್ಯಗಳನ್ನು ನೋಡಿದರೆ ಭೂಮಿಯಿಂದಲೇ ಬದುಕುವುದು ಕಷ್ಟವಾಗಿದೆ. ಆದ್ದರಿಂದ ಬೇರೆ ಕೆಲವು ಉದ್ಯೋಗಗಳ ಬಗ್ಗೆ ಅಭ್ಯಾಸ ಮಾಡಿದರೆ ತಮ್ಮ ಸ್ವಂತ ಕಾಲ ಮೇಲೆ ನಿಲ್ಲುವ ಸಾಮರ್ಥ್ಯ ಅವರಿಗೆ ಬರುತ್ತದೆ. ಆದ್ದರಿಂದ ಈ ಯೋಜನೆಗೆ ಇನ್ನೂ ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾಗಿದೆ. ಈ ಸಾಲಿನಲ್ಲಿ ಬಹಳ ಬೇಡಿಕೆಗಳಿದ್ದು ಹಿಂದಿನದರ ಎರಡರಷ್ಟು ಯುವಕರಿಗೆ ಪ್ರಯೋಜನವಾಗುವ ರೀತಿಯಲ್ಲಿ ಹಣ ಖರ್ಚು ಮಾಡಬೇಕೆಂದು ಹೇಳುತ್ತೇನೆ. ಕೃಷಿ ಉತ್ಪನ್ನವನ್ನು ಹೆಚ್ಚಿಸುವ ದೃಷ್ಟಿಯಿಂದ ಸಣ್ಣ ಮತ್ತು ಅತಿಸಣ್ಣ ರೈತರ ಬಗ್ಗೆ ಒಂದು ಕಾರ್ಯಕ್ರಮ ಹಮ್ಮಿಕೊಂಡಿದ್ದೀರಿ. ಅದಕ್ಕೆ ನೂರುಬಾವಿ ಯೋಜನೆ ಎಂದು ಕರೆಯುತ್ತೀರಿ. ಅಂದರೆ ಸಣ್ಣ ರೈತರ ಭೂಮಿಗಳಿಗೆ ನೀರನ್ನು ಓಪನ್ ವೆಲ್ ಅಥವಾ ಬೋರ್‌ವೆಲ್ ಮೂಲಕವಾಗಿ ಒದಗಿಸಿಕೊಡುವ ಕಾರ್ಯಕ್ರಮ ಇದಾಗಿದೆ. ಇದರಡಿಯಲ್ಲಿ ೮೬-೮೭ರಲ್ಲಿ ೧೫.೫೧ ಲಕ್ಷ ರೂ.ಗಳನ್ನು ೮೭-೮೮ರ ಸಾಲಿನಲ್ಲಿ ೧೯.೪೩ ರೂ.ಗಳನ್ನು ಖರ್ಚುಮಾಡಿ ಕೇವಲ ೫೯೦ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಪ್ರಯೋಜನ ಒದಗಿಸಿದ್ದೀರಿ. ಈಗಾಗಲೇ ಎಷ್ಟು ಜನ ಸಣ್ಣ ಮತ್ತು ಅತಿಸಣ್ಣ ರೈತರಿದ್ದಾರೆಂದು ನಮ್ಮ ಬಳಿ ಪಟ್ಟಿ ಇರಬಹುದು. ಅದಕ್ಕೆ ಹೋಲಿಸಿದರೆ ಮೇಲಿನ ಸಂಖ್ಯೆ ಬಹಳ ಕಡಿಮೆ. ಆದ್ದರಿಂದ ಇದನ್ನು ಇನ್ನೂ ಹೆಚ್ಚು ಮಾಡಬೇಕು. ನೂರುಬಾವಿ ಯೋಜನೆಯಲ್ಲಿ ಈಗಾಗಲೇ ಕಡತಗಳು ಬೇಕಾದಷ್ಟು ರೆಡಿಯಾಗಿವೆ. ಸಾಲದ ಸ್ಯಾಂಕ್ಷನ್‌ಗಾಗಿ ಬೇಕಾದಷ್ಟು ಅರ್ಜಿಗಳು ಬ್ಯಾಂಕಿಗೆ ಹೋಗಿವೆ. ನಿಮ್ಮ ಸರ್ಕಾರದಿಂದ ಕ್ಲಿಯರೆನ್ಸ್ ಸಿಗದಿದ್ದರೆ ಬ್ಯಾಂಕ್‌ನವರು ಒಂದೆರಡನ್ನು ಸಹ ಮಂಜೂರು ಮಾಡುವುದಿಲ್ಲ. ಅವರೂ ಸಹ ಒಟ್ಟಿಗೇ ಮಾಡುವುದು ವ್ಯಾವಹಾರಿಕವಾಗಿ ಒಳ್ಳೆಯದು, ಆದ್ದರಿಂದ ಒಟ್ಟಿಗೆ ಸ್ಯಾಂಕ್ಷನ್ ಮಾಡುವಂತೆ ನೀವು ಇರುವ ಸಮಸ್ಯೆಯನ್ನು ರಾಜ್ಯಮಟ್ಟದಲ್ಲಿ ಬಗೆಹರಿಸುವುದು ಒಳ್ಳೆಯದು. ಬಡವರಿಗಾಗಿ ನಾವು ಕಾರ್ಯಕ್ರಮ ರೂಪಿಸದಿದ್ದರೆ ಅನೇಕ ಸಮಸ್ಯೆಗಳನ್ನು ಜವಾಬ್ದಾರಿಯಿಂದ ಬಗೆಹರಿಸದಿದ್ದರೆ ರೈತರಿಗೆ ಉಪಕಾರವಾಗುವುದಿಲ್ಲ. ಆದ್ದರಿಂದ ನೇರ ಹಾಗೂ ಸಮಗ್ರವಾದ ಕಾನೂನನ್ನು ಜಾರಿಗೆ ತರಬೇಕು. ಹಾಗೆಯೇ ಗ್ರಾಮೀಣ ಮಹಿಳೆಯರಿಗೆಂದು ಒಂದು ಕಾರ್ಯಕ್ರಮವಿದೆ. ಇದು ಹಳ್ಳಿಗಳಲ್ಲಿರುವ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ ಮಾಡುವ ಕಾರ್ಯಕ್ರಮ ಇದಾಗಿದೆ. ಇದನ್ನು ನಮ್ಮ ರಾಜ್ಯದ ೫ ಜಿಲ್ಲೆಗಳಲ್ಲಿ ಜಾರಿಮಾಡಿದ್ದಾರೆ. ಮೈಸೂರು, ಧಾರವಾಡ ಚಿಕ್ಕಮಗಳೂರು, ಬಿಜಾಪುರ, ಗುಲ್ಬರ್ಗ ಈ ಜಿಲ್ಲೆಗಳಲ್ಲಿ ಈ ಯೋಜನೆ ಜಾರಿಯಲ್ಲಿದೆ. ಇದಕ್ಕೆಂದು ೧೯೮೭-೮೮ರಲ್ಲಿ ೧.೩೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಯೋಜನೆ ಕಾರ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ಹಾಕಿಕೊಳ್ಳಬೇಕು. ಈ ೫ ಜಿಲ್ಲೆಗಳ ಹೊರತಾಗಿ ಇನ್ನೂ ಅನೇಕ ಜಿಲ್ಲೆಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಯಾಗಬೇಕಾಗುತ್ತದೆ. . ಇದಕ್ಕೆ ಒಂದು ದೊಡ್ಡದಾದ ಸಮೀಕ್ಷೆಯನ್ನು ಕಂಡುಹಿಡಿಯಬೇಕಾದ ಅಗತ್ಯ ಇದೆ. ಆದಕೋಸ್ಕರ ಇನ್ನೂ ಕೆಲವು ಜಿಲ್ಲೆಗಳಿಗೆ ಈ ಕಾರ್ಯಕ್ರಮವನ್ನು ವಿಸ್ತರಿಸಬೇಕು. ಇದನ್ನು ಮಾಡದೇ ಕೇವಲ ೫ ಜಿಲ್ಲೆಗಳಲ್ಲಿ ಮಾತ್ರ ಈ ಯೋಜನೆ ಸೀಮಿತವಾದರೆ ಬೇರೆ ಕಡೆ ಇರತಕ್ಕಂತಹ ಮಹಿಳೆಯರಿಗೆ

ಮಕ್ಕಳಿಗೆ ಇದರಿಂದ ಅನುಕೂಲವಾಗುವುದಿಲ್ಲ. ಇದನ್ನು ಬೇರೆ ಕಡೆಗೂ ವಿಸ್ತರಿಸಬೇಕು. ಇನ್ನು ಜೀತ ವಿಮುಕ್ತರಿಗೆ ಪುನರ್ ವಸತಿ ಕಲ್ಪಿಸಿಕೊಟ್ಟು ಅವರನ್ನು ಬಡತನದ ರೇಖೆಯಿಂದ ಮೇಲೆ ಎತ್ತತಕ್ಕಂತಹ ಕಾರ್ಯಕ್ರಮ ಬಹುಶಃ ೭೬ರಲ್ಲಿ ಜಾರಿಗೆ ಬಂತು. ಈ ರಾಜ್ಯದಲ್ಲಿ ೬೨,೬೮೯ ಜನ ಜೀತ ವಿಮುಕ್ತರನ್ನು ಗುರುತಿಸಿದ್ದಾರೆ ಅವರಿಗೆ ಡಿ.ಐ.ಆರ್, ರೂಪದಲ್ಲಿ ೯,೮೮೨ ಜನರಿಗೆ ಸಾಲವನ್ನು ಒದಗಿಸಿದ್ದಾರೆ, ಈ ಮಧ್ಯೆ ಕೇಂದ್ರ ಸರಕಾರ ೪ ಸಾವಿರ ರೂಪಾಯಿಯನ್ನು ಸಬ್ಸಿಡಿ ರೂಪದಲ್ಲಿ ಕೊಡತಕ್ಕಂತಹ ಕಾರ್ಯಕ್ರಮದ ಅಡಿಯಲ್ಲಿ ೬೨,೭೮೨ ಜನರ ಪೈಕಿ ೪೪,೩೩೩ ಜನರಿಗೆ ಅನುಕೂಲ ದೊರಕಿದೆ. ಆದರೂ ಕೂಡ ಇನ್ನೂ ಸುಮಾರು ಜನ ಜೀತ ವಿಮುಕ್ತರನ್ನು ಕೈ ಬಿಟ್ಟಿದ್ದಾರೆ. ಅವರು ಸರಿಯಾದ ವಿಳಾಸ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ ಆದರೆ ಇಲ್ಲಿ ಇರತಕ್ಕಂಥಾದ್ದು ಏನೆಂದರೆ ಆ ವಿಳಾಸವನ್ನು ಪತ್ತೆ ಹಚ್ಚತಕ್ಕಂಥಾದ್ದು. ಅದನ್ನು ಇಂಪ್ಲಿಮೆಂಟ್ ಮಾಡತಕ್ಕಂತದ್ದು ಯಾವ ಅಧಿಕಾರಿ ಇದನ್ನು ಮಾಡಬೇಕಾಗಿದೆ ಆ ಅಧಿಕಾರಿ ಹೊಣೆಗಾರಿಕೆಯಿಂದ ಕೆಲಸ ಮಾಡದೆ ಇವರನ್ನು ಗುರುತಿಸುವುದಕ್ಕೆ ಆಗಲಿಲ್ಲವೆನ್ನುವ ಮಾತು ಏನು ಹೇಳುತ್ತಾರೆ, ಅದು ಸರಿಯಲ್ಲ. ಅವನು ಅರ್ಜಿಯನ್ನು ಹಾಕುವ ಸಂದರ್ಭದಲ್ಲಿ ಭೂಮಿಯ ಮೇಲಿದ್ದರೆ ಅವರ ವಿಳಾಸ ಇದ್ದೇ ಇರುತ್ತದೆ, ಅದನ್ನು ಪತ್ತೆ ಹಚ್ಚಬೇಕು ಮತ್ತು ಅವರಿಗೆ ಪುನರ್ ವಸತಿಯನ್ನು ಕಲ್ಪಿಸಿ ಕೊಡಬೇಕು ಅವರಿಗೆ ೪ ಸಾವಿರ ರೂಪಾಯಿಗಳ ಪ್ರಕಾರ ಕೊಡತಕ್ಕಂತಹ ಹಣವೇನು ಇದೆ, ಅದು ದುರುಪಯೋಗವಾಗಿದೆಯೇ ಇಲ್ಲವೇ ಎಂಬುದನ್ನೂ ವಿಚಾರ ಮಾಡಬೇಕು. ಯಾರದೋ ಮನೆಯಲ್ಲಿ ಊಳಿಗರಾಗಿ ಸೇರಿರತಕ್ಕಂತಹವರು ಯಾರಿದ್ದಾರೆ, ಅವ ಗೆ ಹಣ ಸಿಕ್ಕಿದಾಗ ಆದು ಮಧ್ಯವರ್ತಿಗಳ ಕೈಯಲ್ಲಿ ಸಿಕ್ಕಿ ಅವರನ್ನು ಇವರು ಸುಲಿಗೆ ಮಾಡಿ ನಂತರ ಅವರು ಅತ್ತ ಜೀತಕ್ಕೂ ಹೋಗುವ ಹಾಗೆ ಇಲ್ಲ ಇತ್ತ ಪುನರ್ ವಸತಿಯಾಗಿಲ್ಲ, ಪ್ರತ್ಯೇಕ ಜೀವನದ ನೆಲೆ ಗಂಟಿನ ಮೇಲೆ ನಿಲ್ಲತಕ್ಕಂತಹ ನೆಲೆಗಟ್ಟೂ ಕೂಡ ಸಿಗದೆ ತೊಂದರೆ ಪಡುತ್ತಾರೆ. ಅವರಿಗೆ ಪುನರ್‌ವಸತಿಯನ್ನು ಕಲ್ಪಿಸಿಕೊಟ್ಟು ಭೂಮಿಯನ್ನು ಕೊಡಿಸತಕ್ಕಂತಹ ಮತ್ತು ಆ ಭೂಮಿಗೆ ನೀರನ್ನು ಒದಗಿಸತಕ್ಕಂಥಾ ಕಾರ್ಯಕ್ರಮಗಳನ್ನೆಲ್ಲಾ ಮಾಡಿ, ವಸತಿಯನ್ನು ಸಹ ಕಲ್ಪಿಸುವುದರ ಕಡೆಗೆ ನಿಗಾ ಇಡಬೇಕು, ಇದನ್ನು ಮಾಡಿದರೆ ಅವರ ಜೀವನ ಹಸನಾಗುತ್ತದೆಯೇ ವಿನ: ಕೇಂದ್ರ ಸರಕಾರದಿಂದ ಬಂದಂತಹ ಸಬ್ಸಿಡಿ ಹಣವನ್ನು ಕೊಟ್ಟು ಪುನರ್ ವಸತಿಯನ್ನು ಕಲ್ಪಿಸಿಕೊಟ್ಟಿದ್ದೇವೆಂದು ಹೇಳತಕ್ಕಂತಹ ಮಾತು ಸರಿಯಾದುದಲ್ಲ. ಅವರಿಗೆ ಭರವಸೆಯ ಜೀವನವನ್ನು ಕೊಡಬೇಕು, ಅವರಿಗೆ ಮಾದರಿ ಬಾಳನ್ನು ಕೊಡತಕ್ಕಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಮೊನ್ನೆ ಮಾನ್ಯ ನಜೀರ್ ಸಾಬ್‌ರವರು ಡಿ.ಡಿ.ಪಿ. ಮೀಟಿಂಗ್ ಕರೆದಾಗ ಹಿರಿಯೂರಿನ ಹುಲಿವಿನಾಳುವಿನಲ್ಲಿ ೪೦೦ ಎಕರೆ ಲಭ್ಯವಿದೆ ಎಂದು ಹೇಳಿದ್ದರು. ಆ ಭೂಮಿಯನ್ನು ಇವರಿಗೆ ಕೊಡಬೇಕೆಂಬ ಕಾರ್ಯಕ್ರಮ ಅಲ್ಲಿಗೇ ನಿಂತಿದೆ. ಅಲ್ಲಿ ಹಸನಾದ ಕಾಡನ್ನು ಕಡಿದು ಬೇರೆ ಯಾರೋ ಆಕ್ರಮಣ ಮಾಡಿದ್ದಾರೆ. ಅಲ್ಲಿ ಜಮೀನು ಏನು ಲಭ್ಯವಿದೆ, ಅಲ್ಲಿ ಇವರಿಗೆ ಪುನರ್ ವಸತಿಯನ್ನು ಕಲ್ಪಿಸಿಕೊಟ್ಟರೆ ಖಾಯಂ ಜೀವನವನ್ನು ಒದಗಿಸಿಕೊಟ್ಟಂತೆ ಆಗುತ್ತದೆ. ಇಂತಹ ಶಾಶ್ವತವಾದ ಕಾರ್ಯಕ್ರಮಗಳನ್ನು ತೆಗೆದು ಕೊಂಡರೆ ಮಾತ್ರ ಇದು ಪರಿಹಾರವಾಗುತ್ತದೆ. ಇದರ ಜೊತೆಗೆ ಎನ್.ಆರ್.ಇ.ಪಿ. ಪ್ರೋಗ್ರಾಂ ಇದೆ. ಗ್ರಾಮೀಣ ಪ್ರದೇಶದಲ್ಲಿರತಕ್ಕಂತಹ ಬಡುಬಡವರಿಗೆ ಭೂಮಿ ಇಲ್ಲದೇ ಇರತಕ್ಕಂತಹವರಿಗೆ ಉದ್ಯೋಗ ನೀಡತಕ್ಕಂತಹ ಕಾರ್ಯಕ್ರಮವನ್ನು ಮೊದಲು ಪ್ರಾರಂಭ ಮಾಡಿ ನಂತರ ಕೂಲಿಗಾಗಿ ಕಾಳು ಅನ್ನತಕ್ಕಂತಹ ಯೋಜನೆ ಪ್ರಾರಂಭವಾಯಿತು. ೧೯೮೦ ಮಾರ್ಚ್ ೩೧ ರವರಿಗೆ ಕೇಂದ್ರ ಸರಕಾರ ತನ್ನ ಪೂರ್ಣ ವಹಿವಾಟಿನೊಂದಿಗೆ ನಡೆಸಿದ್ದು ನಂತರ ಕೇಂದ್ರ ಪುರಸ್ಕೃತ ಯೋಜನೆಯಾಗಿ ಪರಿವರ್ತನೆ ಮಾಡಿದ ಮೇಲೆ ರಾಜ್ಯ ಮತ್ತು ಕೇಂದ್ರ ಸರಕಾರ ಎರಡೂ ಇದಕ್ಕೆ ಸಮ ಪಾಲು ಹಾಕಿ ಇದಕ್ಕೆ ಕೆಲವು ಮೂಲೋದ್ದೇಶವನ್ನು ಇಟ್ಟುಕೊಂಡು ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದಾರೆ.

೪.೩೦ ಪಿ.ಎಂ.

ಇಲ್ಲಿಯೂ ಸಹಾ ಎನ್.ಆರ್.ಇ.ಪಿ. ಯೋಜನೆಯ ಅಡಿಯಲ್ಲಿ ಕೃಷಿಕರ ಒಂದು ಪಟ್ಟಿಯನ್ನು ಪ್ರತಿ ಪಂಚಾಯಿತಿಯಲ್ಲಿಯೂ ಸಹಾ ತಯಾರಿಸಿದ್ದಾರೆ. ಆದರೆ ಈ ಪಟ್ಟಿಯನ್ನು ತಯಾರಿಸಿದಾಗಲು ಸಹಾ ಯಾರು ಕೃಷಿಕರು ಇದ್ದಾರೆ, ಯಾರು ಕೃಷಿಯಿಂದಲೇ ಬಾಳುವೆಯನ್ನು ನಡೆಸಿದ್ದಾರೆ, ಅವರನ್ನು ಗುರುತಿಸತಕ್ಕಂಥ ಕೆಲಸ ಇಲ್ಲಿಯೂ ನಡೆದಿಲ್ಲ ಎಂದು ಹೇಳುತ್ತೇನೆ. ಇಲ್ಲಿಯೂ ಕೂಡಾ ಅನೇಕ ನ್ಯೂನತೆಗಳಾಗಿವೆ. ಆದ್ದರಿಂದ ಇವತ್ತು ಈ ಲೇಬರ್ ಫೋರ್ಸ್‌ನವರು ಬೇರೆ ಬೇರೆ ಎಲ್ಲಾ ಕಡೆಯಲ್ಲಿಯೂ ಸರಿಯಾದಂಥ ಪಟ್ಟಿಯನ್ನು ತಯಾರು ಮಾಡಿಕೊಳ್ಳಬೇಕು. ಪಟ್ಟಿ ಮಾಡಿ ಕೆಲಸಗಳನ್ನು ಕೊಡತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಆರನೇ ಪಂಚವಾರ್ಷಿಕಯೋಜನೆಯಲ್ಲಿ ಸುಮಾರು ೧೯೮೦-೮೫ ನೇ ಇಸವಿಯಲ್ಲಿ ೧೧, ೫೯೪. ೭೮೩ ಲಕ್ಷ ರೂಪಾಯಿ

ಗಳ ಒಂದು ಟಾರ್ಗೆಟ್‌ನ್ನು ಇಟ್ಟುಕೊಂಡಿದ್ದೆವು. ಆದರೆ ಆ ಒಂದು ಸಾಧನೆಯನು ಮಾಡಿರ ತಕ್ಕಂಥದ್ದು ೧೧, ೩೬೦. ೭೮೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹಿತ ಗುರಿಯನ್ನು ಮುಟ್ಟಲಿಕ್ಕೆ ಆಗುತ್ತಿಲ್ಲ. ೯೦, ೪೬೮ ಕೆಲಸದಷ್ಟು ಗುರಿಯನ್ನು ಮಾಡಬೇಕು ಎಂದು ಗುರಿ ಇಟ್ಟುಕೊಂಡರೂ ಕೂಡಾ ೬೦, ೪೨೧ ರಷ್ಟು ಕೆಲಸವನ್ನು ಮಾಡಿದ್ದೇವೆ. ಅಂದರೆ ಈ ರೀತಿ ಗುರುತಿಸುವಂಥ ಕೆಲಸವನ್ನು ಪಂಚಾಯಿತಿಗಳು ಸರಿಯಾಗಿ ಮಾಡಬೇಕು. ಆದರೆ ಸಾಕಷ್ಟು ಕೆಲಸವನ್ನು ಕೊಡುವುದಕ್ಕೂ ಇವರ ಕೈಯಲ್ಲಿ. ಸಾಧ್ಯವಾಗಲಿಲ್ಲ ಎನ್ನುತಕ್ಕಂಥ ಅಂಶವನ್ನು ಇದರಿಂದ ನಾವು ಕಾಣುತ್ತಿದ್ದೇವೆ. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ೮೫-೮೬ ಮತ್ತು ೮೬-೮೭ ರ ಹಿಂದೆ ಸುಮಾರು ೩೩, ೧೫೫. ೮೭ ಗುರಿಯನ್ನು ಇಟ್ಟುಕೊಂಡಿದ್ದು ೨೯೫೯. ೭೩ ಲಕ್ಷ ರೂಪಾಯಿಯನ್ನು ನಾವು ಖರ್ಚು ಮಾಡಿದ್ದೇವೆ. ೮೬-೮೮ ರಲ್ಲಿ ೩೦೪೮. ೭೧ ಲಕ್ಷ ರೂಪಾಯಿಯ ಗುರಿಯನ್ನು ಇಟ್ಟುಕೊಂಡಿದ್ದು ೩೯೨೨. ೯೩ ಲಕ್ಷ ರೂಪಾಯಿಯಷ್ಟು ಹಣವನ್ನು ನಾವು ಖರ್ಚು ಮಾಡಿದ್ದೇವೆ. ಅಂದರೆ ಇಲ್ಲಿ ಕೃಷಿ ಕಾರ್ಮಿಕರು ಹಳ್ಳಿಗಾಡಿನಲ್ಲಿ ಕೃಷಿ ಕಾರ್ಮಿಕರನ್ನು ಏನು ಗುರುತಿಸಿದ್ದಾರೆ, ಅವರಿಗೆ ಉದ್ಯೋಗವನ್ನು ಕೊಡತಕ್ಕಂಥ ಕೆಲಸ ಆಗಬೇಕು. ದುಡಿಯತಕ್ಕಂಥವರಿಗೆ ಜೀವನಕ್ಕೆ ಭರವಸೆಯನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ನಾವು ನೋಡಿದ್ದೇವೆ. ಕೇಂದ್ರದ ಸಮನಾದ ಪಾಲನ್ನು ಸಹಾ ಇಲ್ಲಿ ಕೊಟ್ಟಿದ್ದಾರೆ. ೮೬-೮೭ರಲ್ಲಿ ಕೇಂದ್ರ ಮತ್ತು ರಾಜ್ಯಗಳ ಒಟ್ಟು ಹಣ ೩೧೫೫. ೮೦೭ ಆದರಲ್ಲಿ ಖರ್ಚು ಮಾಡಿರತಕ್ಕಂಥ ಹಣದ ಪ್ರಮಾಣ ನೋಡಿದರೆ ಇನ್ನೂ ಹಲವಾರು ಸಾವಿರ ಲಕ್ಷ ರೂಪಾಯಿ ಇಲ್ಲಿ ಕಡಿಮೆಯಾಗಿದೆ ಎಂಬುದನ್ನು ನಾವು ಗಮನಿಸಬಹುದು. ಇದಕ್ಕೆ ರಾಜ್ಯದ ಒಂದು ಪಾಲನ್ನು ಏನು ಕೊಡಬೇಕು, ಅದು ಕುಂಠಿತವಾಗಿರುವುದರಿಂದ ಈ ಕಾರ್ಯಕ್ರಮದ ಸಾಧನೆ ಕಡಿಮೆಯಾಗಿದೆ ಎನ್ನತಕ್ಕಂಥದ್ದನ್ನು ನಾವು ಇಲ್ಲಿ ಕಾಣಬಹುದು. ಇಲ್ಲಿ ಕೃಷಿ ಕಾರ್ಮಿಕರು ಏನು ಇದ್ದಾರೆ, ಅವರಿಗೆ ಅನ್ಯಾಯವಾಗುತ್ತಿದೆ. ಕಳೆದ ಅನೇಕ ವರ್ಷಗಳಿಂದ ಭೀಕರ ಬರಗಾಲ ಇದ್ದುದನ್ನು ನಾವು ನೀವು ಎಲ್ಲರೂ ಮನಗಂಡಿದ್ದೇವೆ. ಅವರಿಗೆ ಭರವಸೆ ಇತ್ತು ಏನೆಂದರೆ, ನಮ್ಮಗಳಿಗೆ ರಾಜ್ಯದಲ್ಲಿ ಸರ್ಕಾರ ನಮ್ಮ ಪಾಲಿಗೆ ಉದ್ಯೋಗವನ್ನು ಕೊಡುತ್ತದೆ, ಎಂಬುದಾಗಿ ಎಲ್ಲರೂ ತಿಳಿದುಕೊಂಡಿದ್ದರು. ನಾವು ಹಾಕಿಕೊಂಡಂಥ ಗುರಿಯಲ್ಲಿ ಕಡಿಮೆ ಮಾಡಿದರೆ ಉದ್ಯೋಗವನ್ನು ಕೊಡಲಿಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯನ್ನು ನಾವು ನೀವು ಎಲ್ಲರೂ ತಿಳಿದುಕೊಂಡಿದ್ದೇವೆ. ಆದುದರಿಂದ ಈ ಒಂದು ಕೆಲಸಕ್ಕೆ ನಿಗಧಿತವಾಗಿ ಹಣವನ್ನು ಖರ್ಚು ಮಾಡಬೇಕು ಮತ್ತು ಅವರು ಏನು ಆಸೆಯನ್ನು ಇಟ್ಟುಕೊಂಡಿದ್ದಾರೋ ಅದನ್ನು ನೆರವೇರಿಸುವುದಕ್ಕೆ ಪ್ರಯತ್ನವನ್ನು ಮಾಡಬೇಕು. ಅವರು ದುಡಿಯುವುದಕ್ಕೆ ಕೆಲಸವನ್ನು ಕೇಳುತ್ತಿದ್ದಾರೆ, ಇನ್ನ್ಯಾವುದನ್ನೂ ಸಹ ಅವರು ಕೇಳುತ್ತಿಲ್ಲ. ಅವರಿಗೆ ನಾವು ಅದನ್ನು ಕಲ್ಪಿಸಿಕೊಡಬೇಕೆಂದು, ಆ ವ್ಯವಸ್ಥೆಯನ್ನು ಬಡ ಜನರಿಗೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ಕಾರ್ಯಕ್ರಮದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಭೂರಹಿತ ಕಾರ್ಮಿಕರಿಗೆ ಉದ್ಯೋಗ ಭರವಸೆ ಯೋಜನೆ ಏನಿದೆ, ಇದು ನೂರಕ್ಕೆ ನೂರರಷ್ಟು ಕೇಂದ್ರದ ಯೋಜನೆ. ಇದು ಯಾರು ದುಡಿಯತಕ್ಕಂಥ ಕೂಲಿಯಾಳುಗಳು ಇದ್ದಾರೆ, ಅವರಿಗೆ ವರ್ಷದಲ್ಲಿ ನೂರು ದಿವಸ ಕೆಲಸ ಕೊಡತಕ್ಕಂಥ ಯೋಜನೆ. ೩೬೫ ದಿವಸದಲ್ಲಿ ಒಂದು ನೂರು ದಿವಸ ಸರ್ಕಾರದ ಕೆಲಸ ಸಿಕ್ಕೇ ಸಿಗುತ್ತದೆ. ಎಂಬ ಭರವಸೆಯ ಕಾರ್ಯಕ್ರಮ. ಈ ಕಾರ್ಯಕ್ರಮವನ್ನು ನಾವು ಸ್ವಲ್ಪ ನೋಡುತ್ತಾ ಹೋದರೆ ೮೬-೮೭ ನೇ ಇಸವಿಯಲ್ಲಿ ಸುಮಾರು ೨೬೪೭. ೨೨೦ ಲಕ್ಷ ರೂಪಾಯಿಯಷ್ಟು ಹಣ ಕೇಂದ್ರದಿಂದ ರಿಲೀಸ್ ಆಗತಕ್ಕಂಥದ್ದು. ಇದು ನೂರು ಪಟ್ಟು ಕೇಂದ್ರಸರ್ಕಾರದ ಹಣ. ಇಷ್ಟು ಹಣ ಪೂರ್ತಿಯಾಗಿ ಖರ್ಚುಮಾಡಿದ್ದಾರೆ. ೧೮೦೨. ೮೧೪ ಲಕ್ಷ ರೂಪಾಯಿಯಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂದರೆ ಕೇಂದ್ರದಿಂದ ಬರತಕ್ಕಂಥ ಹಣವನ್ನು ಪೂರ್ತಿಯಾಗಿ ಖರ್ಚು ಮಾಡತಕ್ಕಂಥ ಜವಾಬ್ದಾರಿ ಇದೆ. ಆದರೆ ಕೇಂದ್ರ ಮತ್ತು ರಾಜ್ಯಸರ್ಕಾರಗಳಲ್ಲಿ ಸಮನಾದ ಪಾಲು ಬಂದಾಗ ಅವರಿಗೆ ಉದ್ಯೋಗ ಚೇತನ ಇಲ್ಲದೇ ಇರುವುದರಿಂದ ಈ ಕಾರ್ಯ ಕ್ರಮವನ್ನು ಸ್ವಲ್ಪ ಹಿಂದಕ್ಕೆ ಎಳೆದರು. ಎಸ್.ಆರ್.ಇ.ಪಿ, ಮತ್ತು ಆರ್.ಎಲ್.ಇ.ಜಿ.ಪಿ. ವ್ಯವಸ್ಥೆಗಳನ್ನು ತುಲನೆಯಿಂದ ಅರ್ಥಮಾಡಿಕೊಳ್ಳಬಹುದು. ಕೇಂದ್ರದಿಂದ ಬಂದ ಹಣವನ್ನು ಪೂರ್ತಿಯಾಗಿ ಖರ್ಚು ಮಾಡುವ ರೀತಿಯಲ್ಲಿ ಸಮನಾದ ಪಾಲನ್ನು ಕೊಡಬೇಕು. ಕೊಡುವಂಥಾದ್ದನ್ನು ಹೆಚ್ಚಿಗೆ ಕೊಡತಕ್ಕಂಥ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳಬೇಕು.

ಮಾನ್ಯ ಅಧ್ಯಕ್ಷರೇ, ಇದರ ನಂತರ ಕೇಂದ್ರ ಪುರಸ್ಕೃತ ಡಿಪಿ ಏಪಿ ಕಾರ್ಯಕ್ರಮ ಸಹ ಇವೆ. ಅದು ಸುಮಾರು ೪೬ ಬ್ಲಾಕುಗಳಲ್ಲಿ ೧೯೮೧-೮೨ರಲ್ಲಿ ಪ್ರಾರಂಭ ಆಯಿತು. ಹಂತದಲ್ಲಿ ಇನ್ನೂ ೨೪ ಬ್ಲಾಕುಗಳಿಗೆ ಇದನ್ನು ವಿಸ್ತರಣೆ ಮಾಡುತ್ತಾ ೮೪ನೇ ಸಾಲಿನಲ್ಲಿ ೭೦ ಬ್ಲಾಕುಗಳಲ್ಲಿ ಜಾರಿಗೆ ಬಂದಿತ್ತು. ಚಿಕ್ಕಮಗಳೂರು ತಾಲ್ಲೂಕಿನ ಕಡೂರ್‌ನಲ್ಲಿ ಹಾಗೂ ಇತರೇ ೧೧ ಜಿಲ್ಲೆಗಳಲ್ಲಿ ಸೆಂಟ್ರಲಿ ಸ್ಪಾನ್ಸರ್ಡ್ ಡಿ.ಪಿ

ಎ.ಪಿ. ಕಾರ್ಯಕ್ರಮ ಇದೆ. ಇದರ ವೈಶಿಷ್ಟ್ಯ ಏನು ಅಂದರೆ ಪ್ರತಿಬ್ಲಾಕ್‌ನಲ್ಲಿ ೧೧ಲಕ್ಷ ರೂಪಾಯಿಯನ್ನು ಖರ್ಚು ಮಾಡತಕ್ಕದ್ದು ಅದನ್ನು ಮತ್ತೆ ಪರಿಶೀಲನೆ ಮಾಡಿಬಿಟ್ಟು ೧೫ ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಯಿತು. ೮೬–೮೭ ಸಾಲಿನಲ್ಲಿ ಸುಮಾರು ೧೦೬.೫ ಲಕ್ಷದಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಔಟ್ ಲೇ ೧೫೮೧.೪೦ ಇದ್ದರೆ ೧೧೯.೭ ಲಕ್ಷದಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ೮೭–೮೮ರಲ್ಲಿ ೯೧೯.೭೪೨ ಲಕ್ಷದಷ್ಟು ಖರ್ಚು ಮಾಡಿದ್ದಾರೆ. ಕೇಂದ್ರವು ಬರಪೀಡಿತ ಪ್ರದೇಶಗಳಲ್ಲಿ ಜನರ ಒಂದು ನೆರವಿಗೋಸ್ಕರ ಈ ಕಾರ್ಯಕ್ರಮವನ್ನು ಇಟ್ಟುಕೊಂಡಿದೆ. ಅಲ್ಲಿ ಖರ್ಚು ಮಾಡಿರುವ ಹಣವನ್ನು ನಾವು ನೋಡಬಹುದು. ಅದೇ ರೀತಿ ಸ್ಟೇಟ್‌ನ ಒಂದು ಡಿಪಿ ಏಪಿ ಕಾರ್ಯಕ್ರಮ ಸಹ ಇದೆ. ೭೭–೭೮ರಲ್ಲಿ ಸುಮಾರು ೧೩ ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮವನ್ನು ಹಾಕಿಕೊಂಡರು. ಪ್ರಾರಂಭದಲ್ಲಿ ೨೨ ತಾಲ್ಲೂಕುಗಳಲ್ಲಿ ಕಾರ್ಯಕ್ರಮ ಹಾಕಿಕೊಂಡ ನಂತರ ಅನಿವಾರ್ಯವಾಗಿ ಕೇಂದ್ರ ಸರ್ಕಾರದ ಕಾರ್ಯಕ್ರಮದಲ್ಲಿ ಇದನ್ನು ಸೇರಿಸಿ ಮತ್ತೆ ೧೩ ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮವು ಜಾರಿಗೆ ಬಂದಿತು ನನ್ನ ಕ್ಷೇತ್ರದ ಎಲ್ಲಾ ತಾಲ್ಲೂಕುಗಳೂ ಸಹ ಕೇಂದ್ರ ಸರ್ಕಾರದ ಯೋಜನೆಯ ವ್ಯಾಪ್ತಿಗೆ ಬರುತ್ತದೆ. ಆದರೆ ಹಿರಿಯೂರು ಕ್ಷೇತ್ರ ಮಾತ್ರ ರಾಜ್ಯದ ಡಿಪಿ ಏಪಿ ಕಾರ್ಯಕ್ರಮದಲ್ಲಿ ಇದೆ. ಇಲ್ಲಿ ಬಹಳ ಕಡಿಮೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಇದರಿಂದ ಜನರಿಗೆ ಹೆಚ್ಚು ಉಪಯೋಗ ಆಗುವುದಿಲ್ಲ. ಅದನ್ನು ಅಂದರೆ ನನ್ನ ಕ್ಷೇತ್ರವನ್ನು ಕೇಂದ್ರ ವ್ಯಾಪ್ತಿಗೆ ಸೇರಿಸಬೇಕೆಂದು ಹೇಳುತ್ತೇನೆ. ಇವರು ಖರ್ಚು ಮಾಡಿರುವ ಹಣವನ್ನು ನೋಡಿದರೆ ೮೬–೮೭ ರಲ್ಲಿ ೧೨೫.೩೬ ಲಕ್ಷ ಖರ್ಚು ಮಾಡಿದ್ದಾರೆ. ೮೭–೮೮ನೇ ಸಾಲಿನಲ್ಲಿ ಕೇವಲ ೭೩.೫೨೧ ಲಕ್ಷ ಹಣವನ್ನು ಖರ್ಚು ಮಾಡಿದ್ದಾರೆ, ಈ ಒಂದು ಕಾರ್ಯಕ್ರಮ ಯಾರ ಪರವಾಗಿ ಇದೆ ಎಂದು ತೋರಿಸುತ್ತದೆ. ನಾನು ಆಗಲೇ ಹೇಳಿದ ಹಾಗೆ ಇವರು ಎಷ್ಟು ಗುರಿ ಇಟ್ಟುಕೊಂಡು ಎಷ್ಟು ಹಣ ಖರ್ಚು ಮಾಡಬೇಕಾಗಿತ್ತೊ ಅಷ್ಟು ಮಾಡುವುದಕ್ಕೆ ಆಗುವುದಿಲ್ಲ ಎಂದು ಕಾಣುತ್ತಿದೆ. ಇದಕ್ಕೆ ಕಾರಣ ಆರ್ಥಿಕ ಹಿನ್ನಲೆ ಏನು ರಾಜ್ಯದಲ್ಲಿ ಇದೆ, ಇದು ಅದರ ಪ್ರತಿರೂಪ ಎಂದು ಅನಿವಾರ್ಯವಾಗಿ ಹೇಳುತ್ತಿದ್ದೇನೆ. ಇನ್ನು ಪಶ್ಚಿಮ ಘಟ್ಟದ ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಹಣವನ್ನು ನೂರಕ್ಕೆ ನೂರರಷ್ಟು ಖರ್ಚು ಮಾಡಿದ್ದಾರೆ. ಇಲ್ಲಿ ಬೇರೆ ಬೇರೆ ಇಲಾಖೆಗಳಿಗೆ ಹಣ ಖರ್ಚು ಮಾಡತಕ್ಕ ವ್ಯವಸ್ಥೆಯನ್ನೂ ನಾವು ನೋಡುತ್ತಿದ್ದೇವೆ. ಇಂತಹ ಒಂದು ಕಾರ್ಯಕ್ರಮಗಳಲ್ಲಿ ಕೇಂದ್ರ ಸರ್ಕಾರ ಸುಮಾರು ಲಕ್ಷದಷ್ಟು ಹಣವನ್ನು ಖರ್ಚು ಮಾಡಿರುವುದನ್ನು ನಾವು ನೋಡುತ್ತಿದ್ದೇವೆ. ಇದರ ಜೊತೆಗೆ ರಾಜ್ಯ ಸರ್ಕಾರ ವಿಶೇಷವಾಗಿ ರೂರಲ್ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮ್ ಎಂದು ಹೇಳಿಬಿಟ್ಟು ಒಂದು ಯೋಜನೆಯನ್ನು ಕನ್ನಡ ರಾಜ್ಯೋತ್ಸವದ ಶುಭ ದಿವಸ 1985ನೇ ಇಸವಿಯಲ್ಲಿ ಜಾರಿಗೆ ತಂದರು, ಇದರಲ್ಲಿ ಕೇವಲ 5 ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡರು. 125 ಲಕ್ಷ ರೂಪಾಯಿಗಳ ಗುರಿಯನ್ನು ಇಟ್ಟುಕೊಂಡು ಇವರು ಕೇವಲ 5 ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡದ್ದು ಯಾವ ಆಧಾರದ ಮೇಲೆ ಎಂದು ನಾನು ಕೇಳುತ್ತಿದ್ದೇನೆ. ಇದರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರನ್ನು ಜಾಸ್ತಿ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಆದರೆ ತಮಗೆ ತಿಳಿದಹಾಗೆ ಕ್ಷೇತ್ರಗಳ ಹಾಗೂ ಮೀಸಲು ಕ್ಷೇತ್ರಗಳ ವಿಂಗಡಣೆ ಆದಾಗ ಎಲ್ಲಿ ಪರಿಶಿಷ್ಟ ವರ್ಗದವರು ಜಾಸ್ತಿ ಆಗುತ್ತಾರೆ. ಅದನ್ನು ಪ್ರತ್ಯೇಕ ಮೀಸಲು ಕ್ಷೇತ್ರವನ್ನಾಗಿ ಮಾಡಬೇಕು. ಆದರೆ ಈ ಕಾರ್ಯಕ್ರಮದಲ್ಲಿ ಇದನ್ನು ಹೊರತುಪಡಿಸಿ, ಬೇರೆ 5 ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡಿದ್ದು ಸೋಜಿಗದ ಬೆಳವಣಿಗೆ. ಸ್ಪೆಷಲ್ ರೂರಲ್ ಎಂಪ್ಲಾಯ್‌ಮೆಂಟ್ ಸ್ಕೀಮ್ ಅನ್ನು ಈ ಮೀಸಲು ಕ್ಷೇತ್ರಗಳಲ್ಲಿ ಜಾರಿಗೆ ತರಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಉಪಾಧ್ಯಕ್ಷರು.—ಸ್ವಲ್ಪ ಬೇಗ ಮುಗಿಸಿ, ಆರು ಗಂಟೆಗೆ ರಿಪ್ಲೈ ಕೊಡಬೇಕು, ಇನ್ನು ಒಂದು 5–10 ನಿಮಿಷಗಳಲ್ಲಿ ಮುಗಿಸಿ, ತಾವು ಪ್ರಾರಂಭಮಾಡಿ 40 ನಿಮಿಷ ಆಯಿತು.

ಶ್ರೀ ಆರ್. ರಾಮಯ್ಯ.—ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇಂಧನ ಶಕ್ತಿ ಅಥವಾ ಮನೆ ಬೆಳಕಿಗೆ ಹಾಗೂ ಬೇರೆ ಬೇರೆ ಉಪಯೋಗಕ್ಕೋಸ್ಕರ ಕಟ್ಟಿಗೆಯನ್ನು ಹಾಳು ಮಾಡುವುದರಿಂದ ಕಾಡು ನಾಶ ಆಗುತ್ತದೆ ಎಂಬುದನ್ನು ಸರ್ಕಾರ ಮನಗಂಡು ಕೆಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಇದರಲ್ಲಿ ಬಯೋಗ್ಯಾಸ್ ಯೋಜನೆ ಒಂದು ಪ್ರಾಮುಖ್ಯವಾದ ಯೋಜನೆ. ಅನಂತರ ರಾಷ್ಟ್ರೀಯ ಗ್ರಾಮೀಣ ಇಂಧನ ಶಕ್ತಿಯನ್ನು ಉಪಯೋಗ ಮಾಡತಕ್ಕಂಥದ್ದು ಇದೆಲ್ಲಾ ಪ್ರೋಗ್ರಾಂಗಳನ್ನು ಜಾರಿಗೆ ತಂದಿದೆ. ಇಲ್ಲಿ ಕೇಂದ್ರ ಸರ್ಕಾರ ಕೆಲವು ಕಡೆ ಪೂರ್ಣವಾಗಿ ಹಣವನ್ನು ಭರಿಸತಕ್ಕದ್ದು ಮತ್ತು 50 ಪರ್ಸೆಂಟ್ ಭರಿಸತಕ್ಕ ಯೋಜನೆಗಳನ್ನು ನಾವು ನೋಡುತ್ತಿದ್ದೇವೆ

ಈ ಬಯೋಗ್ಯಾಸ್ ಯೋಜನೆಗೆಂದು 1986–87ರಲ್ಲಿ 30 ಲಕ್ಷ ರೂಪಾಯಿಗಳನ್ನು ಅಲಾಟ್ ಮಾಡಿದ್ದರೆ, ಅದರಲ್ಲಿ 21.36 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದೇರೀತಿ 1987–88ರಲ್ಲಿ 60 ಲಕ್ಷ ರೂಪಾಯಿಗಳು ಅಲಾಟ್ ಆಗಿದ್ದರೆ ಅದರಲ್ಲಿ 26.38 ಲಕ್ಷ ರೂಪಾಯಿಗಳು ಖರ್ಚಾಗಿದೆ. ಇದರ ಒಂದು ನಿರ್ವಹಣೆಗಾಗಿ ಕೇಂದ್ರ ಸರ್ಕಾರದವರು 5 ಲಕ್ಷದ 35 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಜನರ ಮನವೊಲಿಸಿ ಜಾರಿಗೆ ತರುವಂತಹ ಕಾರ್ಯಕ್ರಮ ಆಗಿದೆ. ಈ ಯೋಜನೆಯನ್ನು ಜಾರಿಗೆ ತರಲು ನೇಮಕ ಮಾಡಿದ್ದ ಸಿಬ್ಬಂದಿಗಳ ಉದ್ಯೋಗ ಖಾಯಂ ಆದಮೇಲೆ. ಅವರುಗಳು ಈ ಬಗ್ಗೆ ಹೆಚ್ಚು ಲಕ್ಷ್ಯಕೊಟ್ಟು ಕೆಲಸ ನಿರ್ವಹಿಸುತ್ತಿಲ್ಲ. ಇದು ಸರಿಯಲ್ಲ. ಇದು ಮುಖ್ಯವಾಗಿ ಜನರ ಕಾರ್ಯಕ್ರಮ ಆಗಬೇಕಾಗಿದೆ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ಕೆಲಸ ಮಾಡಬೇಕಾಗುತ್ತದೆ.

ಇನ್ನು ಗ್ರಾಮೀಣ ಜನರ ಆರೋಗ್ಯ ಚೆನ್ನಾಗಿರಬೇಕಾದರೆ ಅವರಿಗೆ ಒಳ್ಳೆಯ ಕುಡಿಯುವ ನೀರನ್ನು ಒದಗಿಸಬೇಕಾಗುತ್ತದೆ. ಆದ್ದರಿಂದ ಈಗ ಸಾರ್ವಜನಿಕ ಇಂಜಿನಿಯರಿಂಗ್ ವಿಭಾಗದ ಮೂಲಕ ಗ್ರಾಮೀಣ ಜನರಿಗೆ ನೀರನ್ನು ಒದಗಿಸುವ ವ್ಯವಸ್ಥೆ ಮಾಡಲಾಗಿದೆ. ಈ ಜನರಿಗೆ ಕುಡಿಯುವ ನೀರನ್ನು ಒದಗಿಸಲು ನಾಲ್ಕು ಮುಖ್ಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅವುಗಳೆಂದರೆ, ''ಕೊಳವೆ ಮೂಲಕ ನೀರು ಸರಬರಾಜು ಮಾಡುವುದು, ಸಣ್ಣ ನೀರು ಸರಬರಾಜು, ಕೈಪಂಪು ಇರುವ ಕೊಳವೆ ಬಾವಿಗಳ ಮೂಲಕ ನೀರನ್ನು ಒದಗಿಸುವುದು ಹಾಗೂ ತೋಡಿದ ಬಾವಿಗಳ ಮೂಲಕ ನೀರನ್ನು ಒದಗಿಸುವುದು''. ಆಯಾ ಊರಿನ ಜನಸಂಖ್ಯೆ ಆಧಾರದ ಮೇಲೆ ಈ ಯೋಜನೆಗಳನ್ನು ಜಾರಿಗೆ ತರುತ್ತಾರೆ. ಈಗ ಒಂದು ಗ್ರಾಮದಲ್ಲಿ 250 ರಿಂದ 500 ರವರೆಗೆ ಜನರಿದ್ದರೆ ಅಲ್ಲಿಗೆ ಒಂದು ಬೋರ್‌ವೆಲ್ ಕೊಡುವ ಪದ್ಧತಿಯನ್ನಿಟ್ಟುಕೊಂಡಿದ್ದಾರೆ. ಈಗ ಯಾವ ಒಂದು ದೃಷ್ಟಿಯನ್ನಿಟ್ಟು ಕೊಂಡು ಸರ್ಕಾರದವರು ಈ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೋ, ಅದರಲ್ಲಿ ಸ್ವಲ್ಪ ವಿಪರ್ಯಾಸಗಳು ಆಗಿವೆ. ಅದೇನೆಂದರೆ, ಈಗ ಜಾತಿಗೊಂದು ಬೋರ್‌ವೆಲ್ ಕೇಳುವಂತಹ ಸಂಪ್ರದಾಯ ಬಂದಿದೆ. ಇದನ್ನು ಒಪ್ಪಿಕೊಂಡು ಜಾತಿಗೊಂದು ಬೋರ್‌ವೆಲ್ ಕೊಟ್ಟರೆ, ನಾವು ಅಂತರ್ ಜಲವನ್ನು ಕಾಯ್ದಿಟ್ಟುಕೊಳ್ಳುವುದು ಕಷ್ಟವಾಗುತ್ತದೆ. ಅಷ್ಟೇ ಅಲ್ಲ, ಭೂಮಿಯೊಳಗಡೆ ಇರುವಂತಹ ನೀರಿನ ಸಮತೋಲನ ಕೂಡ ತಪ್ಪಿಹೋಗುತ್ತದೆ. ಒಂದೇ ಗ್ರಾಮದಲ್ಲಿ ನಾಲ್ಕು ಬೋರ್‌ವೆಲ್‌ಗಳನ್ನು ತೆಗೆದರೆ, ಅದರಲ್ಲಿ ಎರಡು ಬತ್ತಿ ಹೋಗಿರುವುದನ್ನು ನಾವು ನೋಡಬಹುದಾಗಿದೆ. ಇದರ ಒಂದು ಕಹಿ ಅನುಭವ ನಮಗೆ ಈಗಾಗಲೇ ಆಗಿದೆ. ಆದ್ದರಿಂದ ನೀರನ್ನು ಒಂದೇ ಕಡೆ ಉಪಯೋಗ ಮಾಡುವಂತಹ ವ್ಯವಸ್ಥೆಯನ್ನು ನಾವು ಮಾಡಬೇಕಾಗಿದೆ. ಈಗ ನಮ್ಮ ರಾಜ್ಯದಲ್ಲಿ 1 ಲಕ್ಷದ 50 ಸಾವಿರ ಕೊಳವೆ ಬಾವಿಗಳನ್ನು ತೋಡಿದ್ದಾರೆ. ಈ ಬಗ್ಗೆ ಹಣದ ದುರುಪಯೋಗ ಆಗಿರುವುದನ್ನು ಮನಗಂಡು, ಅದನ್ನು ವಿಚಾರಣೆ ಮಾಡುವ ಸಲುವಾಗಿ ಸದನ ಸಮಿತಿ ಒಂದನ್ನು ರಚನೆ ಮಾಡಲಾಗಿದೆ. ನೂರು ಬಾವಿಗಳನ್ನು ತೆಗೆಸಿದಾಗ ಅದರಲ್ಲಿ ಹತ್ತು ಬಾವಿಗಳು ವಿಫಲವಾಗು ವುದು ಸಹಜ ಎಂದು ಅಧಿಕಾರಿಗಳು ಹೇಳುತ್ತಾರೆ. ಇವು ಏತಕ್ಕೆ ವಿಫಲವಾಗಬೇಕು? ಒಂದು ಬೋರ್‌ವೆಲ್ ತೆಗೆಸಲು 22 ಸಾವಿರ ರೂಪಾಯಿಗಳಷ್ಟು ಹಣದ ಖರ್ಚು ಬರುತ್ತದೆ. ಇಷ್ಟು ಖರ್ಚು ಮಾಡಿದ ಮೇಲೆ ನೀರು ಬರದಿದ್ದರೆ, ಅವರಿಂದ ಈ ರಾಜ್ಯದ ಬೊಕ್ಕಸಕ್ಕೆ ಹಾನಿಯಾಗುತ್ತದೆ. ಆದ್ದರಿಂದ ಎಲ್ಲಿ ಖರಾರುವಾಕ್ಕಾಗಿ ನೀರು ಸಿಗುತ್ತದೋ ಅಂತಹ ಸ್ಥಳದಲ್ಲಿಯೇ ಬೋರ್‌ವೆಲ್‌ಗಳನ್ನು ತೆಗೆಸಬೇಕು. ನಮ್ಮಲ್ಲಿ ಒಳ್ಳೆಯ ತಜ್ಞರು ಇದ್ದಾರೆ, ಒಳ್ಳೆಯ ತಂತ್ರಜ್ಞಾನ ಇದೆ. ಆದ್ದರಿಂದ ಹಣ ದುರುಪಯೋಗವಾಗದ ರೀತಿಯಲ್ಲಿ ಬೋರ್‌ವೆಲ್‌ಗಳನ್ನು ತೆಗೆಸಬೇಕಾಗುತ್ತದೆ. 1981ರ ಜನಗಣತಿಯ ಪ್ರಕಾರ ನಮ್ಮ ರಾಜ್ಯದಲ್ಲಿ 27,028 ರೆವಿನ್ಯೂ ಗ್ರಾಮಗಳು ಇವೆ ಮತ್ತು 52623 ಹ್ಯಾಮ್‌ಲೆಟ್‌ಗಳಿವೆ. ಇಲ್ಲೆಲ್ಲಾ ಕೊಳವೆ ಬಾವಿಗಳನ್ನು ತೆಗೆಸಲಾಗಿದೆ. ಈ ಕೆಲಸಕ್ಕಾಗಿ ಸ್ಟೇಟ್ ಬಡ್ಜೆಟ್ ನಲ್ಲಿ 1986–87ರಲ್ಲಿ 1898,7 ಲಕ್ಷ ರೂಪಾಯಿಗಳಷ್ಟು ಹಣವನ್ನು ಒದಗಿಸಿ ಇದಕ್ಕಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆ. ಇದೇ ಯೋಜನೆಗೆಂದು ಕೇಂದ್ರದಿಂದ ಬಂದಿದ್ದ 2044.60 ಲಕ್ಷ ರೂಪಾಯಿಗಳ ಪೈಕಿ 1682,35 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದೇ ಸ್ಕೇರ್ಸಿಟಿ ಏರಿಯಾದಲ್ಲಿ 886.58 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಖರ್ಚು ಮಾಡಿದ್ದಾರೆ. ಅದೇ ರೀತಿ ೧೯೮೭–೮೮ರಲ್ಲೂ ಸಹ ಕೇಂದ್ರ ಸರ್ಕಾರದಿಂದ ೨೫೪೯.೨೫ ಲಕ್ಷದಷ್ಟು ಹಣ ನಿರೀಕ್ಷೆ ಮಾಡಿದ್ದರೆ ೧೭೫೦.೮೩ ಲಕ್ಷದಷ್ಟು ಮಾತ್ರ ಬಿಡುಗಡೆಯಾಗಿದೆ. ಮತ್ತೆ ಬರಗಾಲದ ಹಣ ಸುಮಾರು ೪೫೦.೦೦ ಲಕ್ಷದಷ್ಟು ಕೇಳಿದ್ದರ ಬಗ್ಗೆ ೩೭೫.೧೨ ಲಕ್ಷವಷ್ಟು ಬಿಡುಗಡೆಯಾಗಿದೆ. ಇಷ್ಟು ಹಣವನ್ನು ಉಪ ಯೋಗಿಸಿಕೊಂಡು ಇವರು ೧೯೮೭–೮೮ನೇ ಸಾಲಿನಲ್ಲಿ ೫೭೦೧ ಬೋರ್‌ವೆಲ್‌ಗಳನ್ನು ತೋಡಿಸಿದ್ದಾರೆ. ಜೊತೆಗೆ ಇಷ್ಟು ಗುರಿ ಇಟ್ಟುಕೊಂಡು ೩೯೭೨ ಬೋರ್‌ವೆಲ್‌ಗಳನ್ನು ಮಾತ್ರ ಇವರು ತೋಡಿಸಿದ್ದಾರೆ.

ಇನ್ನೂ ಕೆಲವು ಪ್ರಾಬ್ಲಮ್ಯಾಟಿಕ್ ವಿಲೇಜಸ್‌ನಲ್ಲಿ ಏನು ಗುರುತುಮಾಡಿದ್ದಾರೆ ಅಲ್ಲಿ ಇನ್ನೂ ಕೆಲಸ ಆಗಬೇಕಾಗಿದೆ. ಅವುಗಳನ್ನು ತ್ವರಿತವಾಗಿ ಮಾಡಬೇಕು ಎಂದು ನಾನು ಸರ್ಕಾರಕ್ಕೆ ಸೂಚನೆ ಮಾಡಬಯಸುತ್ತೇನೆ. ಇನ್ನು ಮಿನಿ ವಾಟರ್‌ಸಪ್ಲೈ ಸ್ಕೀಂ, ಸಣ್ಣ ಗಾತ್ರದ ನೀರಿನ ಯೋಜನೆ ಏನಿದೆ ೧೯೮೪-೮೫ರಲ್ಲಿ ಜಾರಿಗೆ ಬಂತು. ಇದರಲ್ಲಿ ೫೦೦ರಿಂದ ಸಾವಿರದ ಒಳಗೆ ಜನಸಂಖ್ಯೆ ಎಲ್ಲಿ ಇರುತ್ತದೋ ಅಲ್ಲಿ ಈ ಪ್ರೋಗ್ರಾಮ್‌ಗಳನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಕಾರ್ಯಕ್ರಮ ಇದೆ. ೧೯೮೭-೮೮ರಲ್ಲಿ ೧೨೮೭ ಸ್ಕೀಮುಗಳನ್ನು ೯೦೨.೫೭ ಲಕ್ಷದಷ್ಟು ಹಣದಲ್ಲಿ ಮಾಡಿದ್ದಾರೆ. ಮೊನ್ನೆ ಬಂದಂಥ ಬರಗಾಲದಲ್ಲಿ ಇವರು ಕೇವಲ ೫ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಪೈಪ್ಡ್ ವಾಟರ್ ಸಪ್ಲೈಯನ್ನು ಅಂದರೆ ಕೊಳವೆಗಳ ಮೂಲಕ ನೀರು ಕೊಡತಕ್ಕದ್ದನ್ನು, ಟ್ಯಾಪ್ ವಾಟರ್‌ಸಿಸ್ಟಂ ಏನಿದೆ ಅದನ್ನು ಎರಡು ಸಾವಿರದ ಮೇಲೆ ಜನಸಂಖ್ಯೆ ಇರತಕ್ಕಂಥ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕು ಎಂದು ನಿಯಮ ಮಾಡಿದ್ದಾರೆ. ೭೯೪ ಹಳ್ಳಿಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂಬ ಗುರಿ ಇಟ್ಟುಕೊಂಡಿದ್ದರು. ಆದರೆ ಈಗ ಕೇವಲ ೩೭೮ ಹಳ್ಳಿಗಳಿಗೆ ಸಂಬಂಧಪಟ್ಟಂತೆ ಈ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಅಂದರೆ ಈ ಒಂದು ಪ್ರೋಗ್ರಾಮಿಗೆ ಬೇಕಾದಷ್ಟು ಹಣವನ್ನು ಖರ್ಚು ಮಾಡಲಾರದಷ್ಟು ಶಕ್ತಿ ಇಲ್ಲದೇ ಇದ್ದು ಅದಕ್ಕೋಸ್ಕರ ಇವರು ಏನು ಗುರಿಯನ್ನು ಇಟ್ಟುಕೊಂಡಿದ್ದರು ಆ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇವತ್ತು ರಾಜ್ಯಾದ್ಯಂತ ತೋಡಿಸತಕ್ಕಂಥ ಕೊಳವೆ ಬಾವಿಗಳು ಏನಿವೆ ಅವಕ್ಕೆ ಉಪಯೋಗಿಸತಕ್ಕಂಥ ಪೈಪುಗಳು ಮತ್ತು ಅವುಗಳ ಜೋಡಣೆ ಇವುಗಳಲ್ಲಿ ಒಂದು ಕರ್ಮಕಾಂಡ ಆಗಿದೆ ಎನ್ನತಕ್ಕಂಥಾದ್ದನ್ನು ನೀವು ಅರ್ಥಮಾಡಿಕೊಂಡಿದ್ದೀರಿ. ಎಲ್ಲೆಲ್ಲಿ ದುರುಪಯೋಗವಾಗಿದೆ, ಅದನ್ನು ಕಂಡುಹಿಡಿಯಲು ಸದನದ ಒಂದು ಸಮಿತಿಯನ್ನು ನೇಮಕ ಮಾಡಿದ್ದೀರಿ. ಇದರಿಂದ ಕೆಲವು ನ್ಯೂನತೆಗಳು ನಿಮಗೆ ತಿಳಿದಾಗ ಸರಿಯಾದ ಕ್ರಮವನ್ನು ನೀವು ತೆಗೆದುಕೊಳ್ಳಬೇಕಾಗುತ್ತವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಜೊತೆಗೆ ಗ್ರಾಮ ನೈರ್ಮಲ್ಯೀಕರಣ ಮಾಡತಕ್ಕಂಥಾದ್ದು ಇದೆ. ಅಂಡರ್ ಸೆಕ್ಷನ್ ೪೨ ಆಫ್ ದಿ ಕರ್ನಾಟಕ ಪಂಚಾಯಿತ್ ಅಂಡ್ ಲೋಕಲ್ ಬಾಡೀಸ್ ೧೯೮೫ ಆಕ್ಟ್ ಪ್ರಕಾರ ಅದು ಒಂದು ಆಬ್ಲಿಗೇಟರಿ ವರ್ಕ್. ಅದು ಮಾಡಲೇಬೇಕಾದಂಥ ಒಂದು ಕರ್ತವ್ಯ. ಏನೇನು ಕರ್ತವ್ಯ ಮಾಡತಕ್ಕದ್ದು ಅಂದರೆ, ಕೊಳಚೆ ನಿರ್ಮೂಲಕ್ಕೋಸ್ಕರ ಡ್ರೈನೇಜ್ ಮಾಡತಕ್ಕದ್ದು ಸ್ಯಾನಿಟೇಷನ್ ಮೇಂಟನೆನ್ಸ್‌ಗೋಸ್ಕರ ಲೆಟ್ರಿನ್ ಕಟ್ಟಿಸತಕ್ಕದ್ದು. ಇವು ಗ್ರಾಮ ನೈರ್ಮಲ್ಯೀಕರಣದಲ್ಲಿ ಬಂದಿವೆ. ಈ ಒಂದು ಕಾರ್ಯಕ್ರಮದಲ್ಲಿ ನಾವು ಸ್ಟೇಟ್ ಸೆಕ್ಟರಿನಲ್ಲಿ ೧೯೮೮ರ ಫೆಬ್ರವರಿವರೆಗೆ ೩೦ಲಕ್ಷ ರೂಪಾಯಿ ಖರ್ಚು ಮಾಡಿರತಕ್ಕಂಥಾದ್ದನ್ನು ನೋಡಿದ್ದೇವೆ, ಆದರೆ ಸೆಂಟ್ರಲ್‌ನಲ್ಲಿ ಈ ಯೋಜನೆಗೋಸ್ಕರ ಈ ಒಂದು ಸ್ಯಾನಿಟೇಷನ್‌ಗೋಸ್ಕರ ೪೬ ಲಕ್ಷ ರೂಪಾಯಿ ಖರ್ಚು ಮಾಡಿರುವುದನ್ನು ನಾವು ನೋಡಿದ್ದೇವೆ. ಇನ್ನು ೧೯೮೬-೮೭ರಲ್ಲಿ ಆರ್.ಎಲ್.ಇ.ಜಿ.ಪಿ. ಪ್ರೋಗ್ರಾಮಿನಲ್ಲಿ ಸುಮಾರು ೧೧೮.೭೬ ಲಕ್ಷದಷ್ಟು ಖರ್ಚುಮಾಡಿರತಕ್ಕದ್ದು ಮತ್ತು ಎನ್.ಆರ್.ಇ.ಪಿ.ಯಲ್ಲಿ ೨೭.೭ ಲಕ್ಷದಷ್ಟು ಖರ್ಚುಮಾಡಿರತಕ್ಕದ್ದನ್ನು ನಾವು ನೋಡುತ್ತಾ ಇದ್ದೇವೆ. ಈ ಕಾರ್ಯಕ್ರಮಗಳಲ್ಲಿ ಏನಾದರೂ ಲೋಪದೋಷಗಳು ಇದ್ದರೆ, ನ್ಯೂನತೆಗಳು ಇದ್ದರೆ ಅವುಗಳೆಲ್ಲವನ್ನೂ ಸರಿ ಮಾಡುವುದಕ್ಕೆ ನಾವು ಅಧಿಕಾರ ವಿಕೇಂದ್ರೀಕರಣ ಮಾಡಿಬಿಟ್ಟು ಪಂಚಾಯತ್ ರಾಜ್ ವ್ಯವಸ್ಥೆಯನ್ನು ನಿರ್ಮಾಣ ಮಾಡಿದ್ದೇವೆ, ಆದುದರಿಂದ ಪೂರ್ಣ ಅಧಿಕಾರ ಮಂಡಲ ಪಂಚಾಯತ್ ಮತ್ತು ಜಿಲ್ಲಾಪರಿಷತ್‌ಗೆ ಇದೆ ಎಂದು ಆ ಕಡೆ ತೋರಿಸತಕ್ಕ ಒಂದು ಕಾರ್ಯಕ್ರಮ ಮಾಡಿದ್ದೀರಿ. ಇವತ್ತು ಸುಮಾರು ೧೩ ಇಲಾಖೆಗಳನ್ನು ಜಿಲ್ಲಾಪರಿಷತ್‌ಗೆ ವರ್ಗಾವಣೆ ಮಾಡಿದ್ದಾರೆ. ಇದರಲ್ಲಿ ಅನೇಕ ಲೋಪದೋಷಗಳಿರುವುದನ್ನು ಇವತ್ತು ಸದಸ್ಯರೆಲ್ಲರೂ ಮನಗಂಡಿದ್ದಾರೆ. ಕೆಲವು ಇಲಾಖೆಗಳು ಸ್ಥಳಾಂತರವಾಗಿವೆ. ಅವುಗಳಲ್ಲಿ ಎರಡು ಇಲಾಖೆಗಳನ್ನು ರಾಜ್ಯಸರ್ಕಾರ ಇಟ್ಟುಕೊಂಡರೆ ಸೂಕ್ತ. ಇವತ್ತು ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಅಂದರೆ ಅಗತ್ಯವಸ್ತುಗಳ ವಿತರಣೆ ಏನಿದೆ ಅದು ಜಿಲ್ಲಾ ಪರಿಷತ್ತಿಗೆ ಹೋಗಿರುವುದರಿಂದ ಅಲ್ಲಿ ಅನೇಕ ರಾಜಕೀಯ ದುರ್ಲಾಭ ಆಗುತ್ತಿರುವುದನ್ನು ನಾವು ನೋಡುತ್ತಾ ಇದ್ದೇವೆ. ಹಿಂದಿನ ವ್ಯವಸ್ಥೆಯಲ್ಲಿ ಫುಡ್‌ಅಂಡ್ ಸಿವಿಲ್‌ಸಪ್ಲೈಸ್ ಇಲಾಖೆಯಲ್ಲಿ ಇದು ಏನಿತ್ತು, ಅದೇ ಇಲಾಖೆಗೆ ತಂದರೆ ಇಲ್ಲಿ ಜನಗಳು ಸ್ವಲ್ಪ ನೆಮ್ಮದಿಯಾಗಿ ಜೀವನವನ್ನು ನಡೆಸಲಿಕ್ಕೆ ಸಾಧ್ಯ. ಏತಕ್ಕೋಸ್ಕರ ಅಂದರೆ, ಇವತ್ತು ಪಕ್ಷದ ಆಧಾರದಮೇಲೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಮೇಲೆ ಇಲ್ಲಿ ರಾಜಕೀಯ ವೈಷಮ್ಯ ನಡೆಯುವುದನ್ನು ನಾವೆಲ್ಲರೂ ನೋಡುತ್ತಾ ಇದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಶ್ರೀಮಾನ್ ಡೇ ಅವರನ್ನು ಹಾಗೂ ಬೇರೆ ಪ್ರತಿನಿಧಿಗಳನ್ನು ಕರೆಸಿ ದೊಡ್ಡ ಭಾಷಣವನ್ನು ಮಾಡಿಸಿದರು. ಆದರೆ ಚೇತನ ಏನೂ ಕಂಡುಬಂದಿಲ್ಲ. ಶ್ರೀಮಾನ್ ಡೇ ಅವರು ಪ್ರಾಯೋಗಿಕವಾಗಿ ರಾಜ್ಯಾದ್ಯಂತ ಟೂರ್ ಮಾಡಿದರು. ಅಲ್ಲೂ ಸಹ ಅವರಿಗೆ ಅನುಕೂಲತೆಗಳು ಕಾಣಲಿಲ್ಲ. ಈ ಒಂದು ಪ್ರಯೋಗ ಅವರು ಕಂಡಷ್ಟು ಸಂತೋಷವನ್ನು

ತಂದಿಲ್ಲ ಎನ್ನುವ ಮಾತನ್ನು ಅವರೇ ಹೇಳಿದ್ದಾರೆ. ಈ ಒಂದು ಇಲಾಖೆ ೭೦ ಪರ್ಸೆಂಟ್ ಹಳ್ಳಿಗಾಡಿನಲ್ಲಿ ವಾಸ ಮಾಡುತ್ತಿರತಕ್ಕಂತಹ ಜನರ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಸಿದ್ಧವಾಗಬೇಕು. ಇದಕ್ಕೆ ರಾಜ್ಯದ ಬೊಕ್ಕಸ ಸರ್‌ಪ್ಲಸ್ ಆಗಿರಬೇಕು. ಆದರೆ ಹಣ ಮಾತ್ರ ಜಾಸ್ತಿ ಖರ್ಚಾಗುತ್ತಿದೆ ವಿನಃ ಅದರಿಂದ ಬಯಸಿದಷ್ಟು ಹೆಚ್ಚು ಅನುಕೂಲಗಳಾಗಿಲ್ಲ. ಇಂತಹ ಕಾರ್ಯಕ್ರಮಗಳನ್ನು ರಾಜಕೀಯ ಲಾಭಕೋಸ್ಕರ ಮಾಡಿದೆಯೇ ವಿನಃ ಬೇರೆ ಯಾವುದಕ್ಕೂ ಅಲ್ಲ ಎನ್ನತಕ್ಕ ಮಾತನ್ನು ಹೇಳಬೇಕಾಗುತ್ತದೆ. ಕೆಲಸದಲ್ಲಿ ಆಗಿರತಕ್ಕ ಅನೇಕ ನ್ಯೂನತೆಗಳ ಬಗ್ಗೆ ಬೇರೆ ಬೇರೆ ಸಂದರ್ಭದಲ್ಲಿ ಮಾತನಾಡಿದ್ದೇವೆ. ಅದರ ಬಗ್ಗೆಯೇ ಪುನಃ ಪ್ರಸ್ತಾಪ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಈಗ ಮಂಡಲ್ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ತಿಗೆ ಸಣ್ಣ ನೀರಾವರಿ ಯೋಜನೆಗಳನ್ನು ವರ್ಗಾಯಿಸಿದ್ದೀರಿ. ಇದರಿಂದ ಹೆಚ್ಚಿನ ಪ್ರಯೋಜನವಾಗಲಾರದು. ಅದನ್ನು ಮಾಡುವುದಕ್ಕೆ ಬದಲಾಗಿ ಸಣ್ಣ ನೀರಾವರಿ ಯೋಜನೆಯನ್ನು ಹಾಗೂ ಇರತಕ್ಕ ಕೆರೆಪಟ್ಟೆಗಳನ್ನು ರಕ್ಷಣೆ ಮಾಡುವುದಕ್ಕಾಗಿ ಸರ್ಕಾರದ ಹತ್ತಿರವೇ ಇಟ್ಟುಕೊಳ್ಳುವುದು ಸೂಕ್ತ. ಇಲ್ಲದಿದ್ದರೆ ನೀವು ಕೊಡುವಂತಹ ಹಣದಲ್ಲಿ ಅವರು ಸಣ್ಣ ನೀರಾವರಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಇದರಿಂದಾಗಿ ಒಂದಕ್ಕೊಂದು ಸರಿಹೋಗುವುದಿಲ್ಲ. ಬೇಡಿಕೆ ಅನಂತವಾಗಿ ಉಳಿದುಕೊಳ್ಳುತ್ತವೆ. ಅದನ್ನು ಪೂರೈಸುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದೇ ಕಡೆ ಕೆರೆ ಒಡೆದರೂ ಸಹ ಇವತ್ತು ನೀವು ಕೊಡತಕ್ಕಂತಹ ಹಣದಲ್ಲಿ ಜಿಲ್ಲಾಪರಿಷತ್ತಿನವರು ಆ ರೀತಿ ಒಡೆದಂತಹ ಕೆರೆಗಳನ್ನೂ ಸಹ ದುರಸ್ತಿ ಮಾಡುವುದಕ್ಕಾಗುವುದಿಲ್ಲ. ಅಷ್ಟೊಂದು ಭಾರಿ ಮೊತ್ತದ ಹಣವನ್ನು ಖರ್ಚು ಮಾಡತಕ್ಕ ಶಕ್ತಿ ಜಿಲ್ಲಾಪರಿಷತ್ತಿಗೆ ಇರುವುದಿಲ್ಲ. ಅವರಿಗೆ ಸೀಮಿತ ಕಾರ್ಯಕ್ರಮಗಳನ್ನು ಕೊಟ್ಟು ಅವರಿಂದ ಕೆಲಸವನ್ನು ಮಾಡಿಸುವ ವ್ಯವಸ್ಥೆಯನ್ನು ಮಾಡಬೇಕು. ಜಿಲ್ಲಾಪರಿಷತ್ತಿನ ಅಸ್ತಿತ್ವದ ಬಗ್ಗೆ ಪೂರ್ವಭಾವಿಯಾಗಿ ಯಾವ ಒಂದು ಆಶಾಭಾವನೆಯನ್ನು ಹೊಂದಲಾಗಿತ್ತೋ, ಆ ಒಂದು ಆಶಾಭಾವನೆ ಈಗ ಉಳಿದಿಲ್ಲ. ಇದರಿಂದ ಜನರ ಉಪಯೋಗ ನಾವು ಎಣಿಸಿದಷ್ಟು ಆಗಿಲ್ಲ ಎಂಬ ಮಾತನ್ನು ಹೇಳಬಯಸುತ್ತೇನೆ.

ಇದರ ಜೊತೆಗೆ ಭೂ ಸೇನಾ ನಿಗಮದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಭೂ ಸೇನಾ ನಿಗಮವನ್ನು ೧೯೭೪ರಲ್ಲಿ ಕಂಪನಿ ಆಕ್ಟ್ ೧೯೫೬ರ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸ್ಥಾಪನೆ ಮಾಡಲಾಯಿತು. ಈ ಸಂಸ್ಥೆಯನ್ನು ಸ್ಥಾಪನೆ ಮಾಡಿದ ಮುಖ್ಯ ಉದ್ದೇಶವೇನೆಂದರೆ ದಳ್ಳಾಳಿಗಳನ್ನು ಹಾಗೂ ಮಧ್ಯವರ್ತಿಗಳನ್ನು ತಪ್ಪಿಸಿ ಅವರಿಗೆ ವಹಿಸಿದಂತಹ ಕೆಲಸವನ್ನು ಮಾಡಿ ಅವರಿಗೆ ಕೊಟ್ಟಂತಹ ಹಣದಲ್ಲಿ ಶೇ ೧೦ ರಿಂದ ೧೫ರಷ್ಟು ಲಾಭಾಂಶವನ್ನು ಇಟ್ಟುಕೊಂಡು ಆ ಕೆಲಸಕಾರ್ಯಗಳನ್ನು ಮಾಡಿ ತಮ್ಮ ವಹಿವಾಟನ್ನು ನಡೆಸಬೇಕೆಂಬ ಉದ್ದೇಶದಿಂದ ಈ ಭೂಸೇನಾ ನಿಗಮವನ್ನು ಸ್ಥಾಪನೆ ಮಾಡಿದರು. ಆ ಒಂದು ಉದ್ದೇಶವನ್ನು ಇಟ್ಟುಕೊಂಡು ಅವರು ಕೆಲಸ ಮಾಡಿರುವ ಕಡೆ ಕೆಲವು ಸಫಲವಾಗಿರಬಹುದು. ಆದರೆ ಕೆಲವು ಕಡೆ ಸಫಲವಾಗಿಲ್ಲ. ಈ ಭೂ ಸೇನಾ ನಿಗಮದ ಇಂಜಿನೀಯರ್‌ಗಳು ಇವತ್ತೂ ಸಹ ಕಂಟ್ರಾಕ್ಟರ್‌ಗಳನ್ನು ಇಟ್ಟುಕೊಂಡೇ ಕೆಲಸ ಮಾಡುತ್ತಿರತಕ್ಕದ್ದನ್ನು ನಾವು ನೋಡಿದ್ದೇವೆ. ಅವರು ಕೆಲವು ಕಳಪೆ ಕೆಲಸ ಮಾಡುವುದರ ಬಗ್ಗೆ ಕೂಡ ಪತ್ರಿಕೆಗಳ ಮೂಲಕ ಜನರ ಗಮನಕ್ಕೆ ತಂದಿರುವುದನ್ನು ಗಮನಿಸಬೇಕಾಗಿದೆ. ಅದೊಂದು ಕಂಪನಿ ಆಕ್ಟ್ ಕೆಳಗೆ ರಿಜಿಸ್ಟರ್ ಆಗಿದ್ದರೂ ಇದೊಂದು ಪಬ್ಲಿಕ್ ಅಂಡರ್‌ಟೇಕಿಂಗ್ ಇದ್ದ ಹಾಗೇ. ಇದೊಂದು ಸರಕಾರದ ಸ್ವಾಮ್ಯತ್ವದಲ್ಲಿರತಕ್ಕ ಸಂಸ್ಥೆ. ಮಧ್ಯವರ್ತಿಗಳನ್ನು ತಪ್ಪಿಸಿ ಸರ್ಕಾರದ ಕಾರ್ಯಕ್ರಮಗಳು ಏನು ಇವೆ, ಅವುಗಳನ್ನು ಅವರು ಸೀಮಿತ ಲಾಭಾಂಶವನ್ನು ಇಟ್ಟುಕೊಂಡು ಆ ಕೆಲಸಗಳನ್ನು ಮಾಡಿ ಜನರಿಗೆ ಅನುಕೂಲವಾಗತಕ್ಕಂತಹ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಪಟ್ಟು ಸರ್ಕಾರದ ನಿರ್ಧಿಷ್ಟ ಗುರಿ ಏನು ಇದೆ, ಅದನ್ನು ಪೂರ್ಣ ಮಾಡುವುದಕ್ಕೆ ಸಹಕಾರ ಮಾಡಬೇಕು. ಮತ್ತು ಪ್ರಯತ್ನ ಮಾಡಬೇಕು ಅದನ್ನು ಮಾಡದೆ ಕೇವಲ ಕಾಗದ ಪತ್ರದಲ್ಲಿ ಮಧ್ಯವರ್ತಿಗಳನ್ನು ಇಟ್ಟಿರುವುದಿಲ್ಲ, ಕಳಪೆ ಕೆಲಸ ಮಾಡಿಲ್ಲವೆಂದು ಹೇಳತಕ್ಕ ಮಾತು ಸರಿಯಾದುದಲ್ಲ. ಇನ್ನೂ ಏನಾದರೂ ಲೋಪದೋಷಗಳು ಇದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕೇ ವಿನಃ ಮಾಡಿದ್ದನ್ನೇ ಸರಿ ಎಂಬುದಾಗಿ ಹೇಳುವುದಕ್ಕೆ ಪ್ರಯತ್ನ ಮಾಡಬಾರದು. ಸರ್ಕಾರ ಈ ಒಂದು ಸಂಸ್ಥೆಗೆ ನಾನಾ ಕೆಲಸ ಕಾರ್ಯಗಳಿಗಾಗಿ ೧೯೮೭–೮೮ನೇ ಸಾಲಿನಲ್ಲಿ ೬೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಬೇರೆ ಬೇರೆ ಇಲಾಖೆಯವರು ಬೇರೆ ಬೇರೆ ರೀತಿಯ ಕೆಲಸಗಳನ್ನು ಇವರಿಗೆ ವಹಿಸಿದ್ದಾರೆ. ಆ ಕೆಲಸಗಳನ್ನು ಮಾಡುವಾಗ ಕೇವಲ ಲಾಭಾಂಶ ಒಂದನ್ನೇ ಗುರಿಯಾಗಿ ಇಟ್ಟುಕೊಳ್ಳದೇ ಈ ರಾಜ್ಯಕ್ಕೆ ಸ್ಥಿರವಾದ ಬಹಳ ಚೆಂದವಾದ ಸ್ವತ್ತನ್ನು ಸೃಜನೆ ಮಾಡತಕ್ಕದ್ದು ಕರ್ನಾಟಕ ಭೂ ಸೇನಾ ನಿಗಮದ ಆದ್ಯ ಕರ್ತವ್ಯ. ಅನೇಕ ಕಡೆ ಆರ್.ಎಲ್.ಇ.ಜಿ.ಪಿ. ಕಾರ್ಯಕ್ರಮದಡಿಯಲ್ಲಿ ಜಮೀನುಗಳಿಗೆ ಬಂಡ್ ಹಾಕಿರುವಂತಹದ್ದು ಹಾಗೂ ರಸ್ತೆ ಮಾಡಿರುವುದನ್ನು

ನೋಡಿದ್ದೇವೆ. ಆದರೆ ಇವರ ಲೆಕ್ಕದಲ್ಲಿ ರಸ್ತೆಯ ಕೆಲಸಗಳನ್ನು ಮಾಡಲಾಗಿದೆ ಎಂಬುದಾಗಿ ತಿಳಿಸಿದ್ದರೂ ವಾಸ್ತವವಾಗಿ ರಸ್ತೆಯ ಕೆಲಸಗಳಾಗಿಲ್ಲದಿರುವಂತಹ ನಿದರ್ಶನಗಳನ್ನು ನೋಡಿದ್ದೇವೆ. ಆದೇ ರೀತಿ ಪಿಕಪ್ ಕೆಲಸ ಮಾಡಿಲ್ಲದೇ ಇರುವುದನ್ನು, ಡ್ರೈನೇಜ್ ಕೆಲಸವನ್ನು ಮಾಡದೇ ಇರತಕ್ಕಂತಹ ನಿದರ್ಶನಗಳನ್ನು ನಾವು ನೋಡಿದ್ದೇವೆ. ಈ ಬಗ್ಗೆ ಅವರನ್ನು ಕೇಳಿದರೆ ಸರ್ಕಾರದಿಂದ ನಮಗೆ ಬರಬೇಕಾದ ಹಣ ಬಂದಿಲ್ಲ, ಅದಕ್ಕಾಗಿ ಆ ಕೆಲಸವನ್ನು ಮಾಡುವುದಕ್ಕಾಗಿಲ್ಲ ಎಂಬುದಾಗಿ ಆ ಅಧಿಕಾರಿಗಳು ಹೇಳುತ್ತಿದ್ದಾರೆ. ಮತ್ತೆ ವಹಿಸಿರುವಂತಹ ಕೆಲಸ ಕೂಡ ಲಾಭಾಂಶವನ್ನು ಇಟ್ಟುಕೊಂಡು ಯಾರಿಗೋ ಕಂಟ್ರಾಕ್ಟರ್‌ಗೆ ವಹಿಸಿಕೊಟ್ಟಿರುವುದರಿಂದ ಹಣದುರುಪಯೋಗವಾಗುತ್ತಿದೆ. ಕೆಲಸ ಸರಿಯಾಗಿ ಆಗುತ್ತಿಲ್ಲ. ಇಂತಹ ಒಂದು ಉದಾಹರಣೆಯನ್ನು ನೀಡುವುದಾದರೆ, ನಮ್ಮ ಹಿರಿಯೂರು ತಾಲ್ಲೂಕು ಮಸ್ಕಲ್ ಎಂಬ ಗ್ರಾಮದೊಳಗೆ ಡ್ರೈನೇಜ್ ಮಾಡಿಯೇ ಇಲ್ಲ. ಆ ಕೆಲಸವನ್ನು ಇವರಿಗೆ ವಹಿಸಲಾಗಿತ್ತು. ಅದೇ ರೀತಿ ಹಿರಿಯೂರಿನಲ್ಲಿ ಇವರು ಕಟ್ಟಿದಂತಹ ಮನೆಗಳಿಗೆ ಡ್ರೈನೇಜನ್ನೇ ಮಾಡಿಲ್ಲ. ಆದ್ದರಿಂದ, ಇವರು ಲಾಭಾಂಶವನ್ನು ಹೆಚ್ಚು ಗಣನೆಗೆ ತೆಗೆದುಕೊಳ್ಳದೆ ಯಾವ ಉದ್ದೇಶದಿಂದ ಈ ನಿಗಮವನ್ನು ಸ್ಥಾಪನೆ ಮಾಡಿದ್ದಾರೆ. ಆ ಉದ್ದೇಶದ ಕಡೆ ಗಮನ ಕೊಡಬೇಕು. ಈ ಒಂದು ಇಚ್ಛಿತ ಗುರಿಯನ್ನು ಪೂರ್ಣಗೊಳಿಸುವುದಕ್ಕೆ ಅವರು ದುಡಿಯಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಈ ಗ್ರಾಮಾಭಿವೃದ್ಧಿಯನ್ನು ಉಳಿದ ಬೇರೆ ಬೇರೆ ಕಾರ್ಯಕ್ರಮದಡಿಯಲ್ಲಿ ನೋಡಿದ್ದೇವೆ. ಇವೆಲ್ಲವನ್ನೂ ಮಾಡಬೇಕಾದರೆ, ಒಂದು ವಿಶ್ವಾಸ ಇರಬೇಕು. ಏಕೆಂದರೆ ನಾವು ಇಲ್ಲಿ ದೇಶಕ್ಕೋಸ್ಕರ ತ್ಯಾಗ ಮಾಡಿದವರ ಭಾವಚಿತ್ರಗಳನ್ನು ಇಲ್ಲಿ ಹಾಕಿಕೊಂಡಿದ್ದೇವೆ. ನಾವು ಪ್ರತಿಯೊಬ್ಬರೂ, ಭಾಷಣ ಮಾಡಬೇಕಾದರೆ ಬಹಳ ಶುದ್ಧವಾಗಿ ಮಾತನಾಡುತ್ತೇವೆ. ನನಗನ್ನಿಸುತ್ತದೆ. ನಿಮ್ಮ ಚಿಂತನೆಯ ಚಿಲುಮೆ ಏನು ಇದೆ ಅದರಲ್ಲಿ ಅವರು ಹಾಕಿಕೊಟ್ಟ ಕಾರ್ಯಕ್ರಮದಲ್ಲಿ ಬಹುತೇಕ ಹಣ ಪೋಲಾಗುವುದಕ್ಕೆ ಆಸ್ಪದ ಇದೆ. ನೀವು ಯಾವುದೇ ಏಜೆನ್ಸಿ ಫಿಕ್ಸ್ ಮಾಡಬೇಕಾದರೆ ಅಲ್ಲಿ ಹಣ ಸೋರಿ ಹೋಗತಕ್ಕಂಥ ವ್ಯವಸ್ಥೆ ಮಾಡಿದ್ದಾರೆ, ಆದ್ದರಿಂದ, ಅಂತಹ ಕಡೆ ತಾವು ಗಮನವನ್ನು ಕೊಡಬಾರದು, ಬಡವರಿಗಾಗಿ ಕೆಲಸ ಮಾಡುವಂಥ ಸಂದರ್ಭದಲ್ಲಿ ನೀವು ನಿಗದಿತ ಗುರಿಗೆ ಏನು ಹಣವನ್ನು ಇಟ್ಟುಕೊಂಡಿದ್ದೀರಿ ಅದು ಮಧ್ಯವರ್ತಿಗಳಿಂದ ನಿಲುಗಡೆಯಾಗಬೇಕು, ಶೋಷಣೆ ಮಾಡತಕ್ಕವರಿಂದ ಮುಕ್ತವಾಗಬೇಕು, ಆ ರೀತಿಯಲ್ಲಿ ಮಾಡಿದರೆ ಮಾತ್ರ ಹಂತ ಹಂತವಾಗಿ ಬಡತನವನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಮೂಲೋತ್ಪಾಟನೆ ಮಾಡುತ್ತೇವೆಂದು ಹೇಳುವ ಪದ ಕೇವಲ ಹಾಸ್ಯಾಸ್ಪದವಾಗುತ್ತದೆ. ೧೯೮೮-೮೯ನೇ ಸಾಲಿಗೆ ಈ ಪೂರಕ ಬೇಡಿಕೆಗಳನ್ನು ಇಟ್ಟಿದ್ದೀರಿ, ಈ ಅವಧಿಯಲ್ಲಾದರೂ ಸಹ ನೀವು ಗುರಿಯನ್ನು ಏನು ಇಟ್ಟಿದ್ದೀರಿ, ಆ ಒಂದು ಗುರಿಯನ್ನು ಮುಟ್ಟಲಿಕ್ಕೆ ಪ್ರಯತ್ನ ಮಾಡಬೇಕು. ಇದರಲ್ಲಿ ಹಿಂಜರಿತ ನಡೆದರೆ ಆಗುವುದಿಲ್ಲ. ನೀವು ಮೊದಲು ಏನು ಹೇಳುತ್ತಿದ್ದೀರಿ ಎಂದರೆ, ಈ ರಾಜ್ಯದ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಾಗಿದೆ, ಆದರೆ ಅನಿವಾರ್ಯವಾಗಿ ನಮಗೆ ಬರ ಬಂದಿದೆ ಎಂದು ಹೇಳುತ್ತಿದ್ದೀರಿ. ಆದರೆ ಈಗ ಮಳೆ ಬಂದಿದೆ ಎಂದು ಕಂದಾಯ ವಸೂಲು ಮಾಡುತ್ತಿದ್ದೀರಿ. ಈಗ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾದರೆ ಬೇರೆ ಬೇರೆ ಕಡೆ ನಿಂತಿರುವ ಬಾಕಿ ಹಣವನ್ನು ವಸೂಲು ಮಾಡಬೇಕಾಗುತ್ತದೆ. ನಿಮ್ಮ ಸರ್ಕಾರದ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಂಡು ಈ ಒಂದು ಕಾರ್ಯಕ್ರಮದ ಗುರಿ ಏನು ಇಟ್ಟುಕೊಂಡಿದ್ದೀರಿ ಅದಕ್ಕೆ ಹಣವನ್ನು ಕೂಡಿ ಹಾಕಿಕೊಂಡು ಆ ಗುರಿಯನ್ನು ಮುಟ್ಟಬೇಕು. ಆಗ ಮಾತ್ರ ಬಡವರಿಗೆ ಬಡತನದ ರೇಖೆಯಿಂದ ಮೇಲೆ ತರಲಿಕ್ಕೆ ಸಾಧ್ಯವಾಗುತ್ತದೆ. ತಾವು ಬಡತನ ಮೂಲೋತ್ಪಾಟನೆ ಮಾಡುತ್ತೇವೆಂದು ಹೇಳುವ ಮಾತು ಸ್ವಲ್ಪ ಸಂಶಯಾಸ್ಪದವಾಗಿದೆ ಎಂದು ನನಗನ್ನಿಸುತ್ತದೆ, ಇವೊತ್ತು ಈ ಕಾರ್ಯಕ್ರಮಗಳಲ್ಲಿ ಬೇರೆ ಬೇರೆ ಬೇಜವಾಬ್ದಾರಿ ಕೈವಾಡಗಳು ನಡೆಯತಕ್ಕಂಥಾದ್ದು ಏನು ಇದೆ ಅದನ್ನು ಸರ್ಕಾರ ತಪ್ಪಿಸಬೇಕಾಗಿದೆ ಇವೊತ್ತು ಐಆರ್‌ಡಿಪಿ ಯಲ್ಲಿ ಆಗಲಿ, ಅಂತ್ಯೋದಯದಲ್ಲಾಗಲಿ, ಬೇರೆ ಬೇರೆ ಕಾರ್ಯಕ್ರಮಗಳ ಯೋಜನೆಗಳಲ್ಲಿ ಆಗಲಿ, ಅಧಿಕಾರಿಗಳ ಮಟ್ಟದಲ್ಲಿ ಯಾವರೀತಿ ಅನ್ಯಾಯ ಆಗುತ್ತದೆ ಎನ್ನುವುದನ್ನು ಸರ್ಕಾರ ಮನಗಾಣಬೇಕು. ನಾವು ಕೇವಲ ಯಾವುದಾದರೂ ಒಂದು ಹಣ ದುರುಪಯೋಗದ ಬಗ್ಗೆ ಮಾತನಾಡಿದರೆ ಅದಕ್ಕೆ ಆಧಾರ ತಂದುಕೊಟ್ಟರೆ ನೋಡುತ್ತೇನೆ ಎಂದು ಹೇಳತಕ್ಕ ಮಾತು ಜವಾಬ್ದಾರಿಯುತವಾದ ಮಾತು ಆಗುವುದಿಲ್ಲ. ಕೇವಲ ಈ ರೀತಿ ನಡೆದಿದೆ ಎಂದು ಹೇಳತಕ್ಕ ಅಧಿಕಾರ ನಮಗೆ ಇದೆಯೇ ಹೊರತು ಎಲ್ಲವನ್ನು ನೋಡತಕ್ಕ ಅಧಿಕಾರ ನಮಗೆ ಇರುವುದಿಲ್ಲ. ಎಲ್ಲಿ ದೂರುಗಳ ಬಗ್ಗೆ ಸಂಶಯ ಬರುತ್ತದೆ ಸರ್ಕಾರ ಅಲ್ಲಿಗೆ ಹೋಗಿ ನೋಡಬೇಕು. ಆ ರೀತಿ ತಾವು ಹೋಗಿ ನೋಡಿದಾಗ ಮಾತ್ರ ಕೆಟ್ಟದ್ದು ಮಾಡತಕ್ಕ ಜನರು ಸಿಕ್ಕುತ್ತಾರೆ. ಅಂಥಾದ್ದನ್ನು ತಾವು ನಿಲ್ಲಿಸಿದರೆ, ಆಗ ಬಡವರ ಕಾರ್ಯಕ್ರಮಗಳ ಅಭಿವೃದ್ಧಿಯನ್ನು ಮುನ್ನಡೆಸಲಿಕ್ಕೆ ಸಾಧ್ಯವಾಗುತ್ತದೆ. ಬಡವರೂ ಸಹ ತಮ್ಮ ಬಗ್ಗೆ ಇಟ್ಟುಕೊಂಡಿರತಕ್ಕ ಭರವಸೆಗೂ ಪ್ರಯೋಜನ ದೊರೆತಂತಾಗುತ್ತದೆಂದು ಹೇಳಿ, ಈ ಒಂದು ಬೇಡಿಕೆಗಳ ಮೇಲೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ದೊಡ್ಡ ಮೇಟಿಯವರು ೧೦ ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

† ಶ್ರೀ ಜಿ.ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಅಧ್ಯಕ್ಷರೆ, ತಾವು ಕೊಟ್ಟಂಥ ಒಂದು ಸೀಮಿತ ವೇಳೆಯಲ್ಲಿ ನಾನು ನನ್ನ ಭಾಷಣ ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ ಮತ್ತು ಮುಂಚೆಯೇ ಮುಗಿಸುತ್ತೇನೆ. ಈಗ ಸಮಗ್ರ ಗ್ರಾಮೀಣ ಅಭಿವೃದ್ಧಿಯ ಎರಡು ಕಣ್ಣುಗಳು ಅಂದರೆ ಒಂದು ಜಿಲ್ಲಾಪರಿಷತ್ ಮತ್ತೊಂದು ಮಂಡಲ್ ಪಂಚಾಯತಿ, ಇವುಗಳ ಕಾರ್ಯವ್ಯಾಪ್ತಿ ಹೇಗೆ ಇರುತ್ತದೆಯೋ ಹಾಗೆ ಅಭಿವೃದ್ಧಿ ಕಾರ್ಯಗಳು ಚುರುಕುಗೊಳ್ಳುತ್ತವೆ, ಒಂದು ವೇಳೆ ಅಧಿಕಾರದ ಮಧದಿಂದಾಗಿ ಅವು ಕುರುಡಾಗಿ ನಡೆದರೆ,

''ಕುರುಡು ಕಾಂಚಣ ಕುಣಿಯುತ್ತಿತ್ತು,
ಬಡಬಗ್ಗರನ್ನು ತುಳಿಯುತಲಿತ್ತು.''

ಎನ್ನುವ ಮಾತು ಅನ್ವಯಿಸುತ್ತದೆ. ಆದರೆ ಆ ರೀತಿ ಆಗಬಾರದೆಂದು ತಿಳಿದುಕೊಂಡು ಗ್ರಾಮ ಸಭೆಯ ಖಡ್ಗವನ್ನು ಮೇಲೆ ಇಟ್ಟಿದ್ದಾರೆ. ಅದು ಏನೇ ಇರಲಿ, ವ್ಯವಸ್ಥೆ ಈ ಅಧಿಕಾರದ ಆರ್ಥಿಕ ವಿಕೇಂದ್ರಿಕರಣ ಸಂಕಿರಣ ಸಮಯದಲ್ಲಿ, ಪ್ರಯೋಗ ಮಾಡುವಾಗ ಅನೇಕ ಗೊಂದಲದೊಳಗೆ ಸಿಲುಕಿ ಅಭಿವೃದ್ಧಿಯ ಕಾರ್ಯಗಳ ಬಗ್ಗೆ ನಾವು ಎಷ್ಟು ಆಸೆಯನ್ನು ಮಾಡಿದ್ದೇವೋ, ಅಷ್ಟು ತ್ವರಿತಗತಿಯಲ್ಲಿ

೫.೦೦ ಪಿ.ಎಂ.

ಸಾಗಲಿಲ್ಲ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಇದೆಲ್ಲ ವ್ಯವಹಾರ ಸರಿಯಾಗಿಲ್ಲವೆಂದು ಏನು ಹೇಳಿದ್ದಾರೆ, ಇದನ್ನು ಸರಿಪಡಿಸಲಿಕ್ಕೇಬೇಕು. ''ಮೂಗುತಿ ಸರಿಯಾಗಿ ಕೊಡಲಿಲ್ಲವೆಂದು ಮೂಗನ್ನೆ ಕೊಯ್ಯಲು ಹೋಗಬಾರದು'' ಮತ್ತೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ವ್ಯಾಪ್ತಿಯೊಳಗೆ ಅನೇಕ ಯೋಜನೆಗಳು ಬರುತ್ತವೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಅಂತ್ಯೋದಯ ಯೋಜನೆ, ತುಂತುರು ನೀರಾವರಿ ಯೋಜನೆ ಬರಗಾಲಪೀಡಿತ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳು, ರಾಷ್ಟ್ರೀಯ ಅಭಿವೃದ್ಧಿ ಯೋಜನೆ ಇವೇ ಮುಂತಾದವು ಬರುತ್ತವೆ. ಗ್ರಾಮೀಣಾಭಿವೃದ್ಧಿ ಯೋಜನೆ ರಾಜ್ಯ ವಲಯದಲ್ಲೂ ಇದೆ, ಕೇಂದ್ರ ವಲಯದಲ್ಲೂ ಇದೆ. ಇಷ್ಟೆಲ್ಲ ಏತಕ್ಕೆಂದರೆ ಬಡತನದ ರೇಖೆಯಿಂದ ಕೆಳಗೆ ಇರತಕ್ಕಂಥ ಎಲ್ಲ ಬಡವರನ್ನು ಮೇಲಕ್ಕೆ ಎತ್ತಬೇಕು ಎನ್ನುವ ವ್ಯವಸ್ಥಿತವಾದ ಯೋಜಿತ ಕಾರ್ಯಕ್ರಮಗಳು, ಇವುಗಳು ಸರಿಯಾಗಿ ನಡೆಯಬೇಕಾದರೆ ಮೊದಲು ಆಡಳಿತ ಏನು ಇದೆ ಅದು ಬಹಳ ವ್ಯವಸ್ಥಿತವಾಗಿ ಇರಬೇಕು. ಕ್ಷೇತ್ರದ ಆಡಳಿತ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಮಂಡಲ್‌ಗಳಿಗೆ ಬರತಕ್ಕಂಥ ಅಧಿಕಾರಿಗಳು ಏನು ಇದ್ದಾರೆ ಅವರು ತಮ್ಮ ಈ ಇಲಾಖೆಯ ಅಭಿವೃದ್ಧಿಯ ಸ್ವಂತ ನೇಮಕಾತಿಯಿಂದಲ್ಲ. ಅವರನ್ನು ಬೇರೆ ಕೈಗಡದ ಇಲಾಖೆಗಳಿಂದ ತೆಗೆದುಕೊಂಡವರು ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ, ಈ ಕೈಗಡದ ಅಧಿಕಾರಿಗಳು ತಮ್ಮ ಮೂಲ ಸ್ಥಳದಿಂದ ಬಂದಿರುವ ಕಡೆ ಹೆಚ್ಚು ಲಕ್ಷ ಇರುತ್ತದೆಯೋ ಹೊರತು ಇದು ತಮ್ಮ ಖಾತೆ ಎಂದು ತಿಳಿದುಕೊಳ್ಳತಕ್ಕಂಥ ಅನಿಸಿಕೆ ಆ ಅಧಿಕಾರಿಗಳಿಗೆ ಬರುವುದಿಲ್ಲವೆಂದು ನನಗನ್ನಿಸುತ್ತದೆ. ವಿಶೇಷವಾಗಿ ಈಗ ತೆಗೆದುಕೊಳ್ಳುತ್ತಿರುವುದೆಂದರೆ ಬರಗಾಲ ಪೀಡಿತ ಪ್ರದೇಶ, ಆರ್.ಎಲ್.ಇ.ಜಿ.ಪಿ. ಎನ್.ಆರ್.ಇ.ಪಿ. ಯಿಂದ ಕಾರ್ಮಿಕರಿಗೆ ಉದ್ಯೋಗ ಪೂರ್ಣವಾಗಿ ಕೊಡುತ್ತಿದ್ದಾರೆ. ಅರೆ ಉದ್ಯೋಗ ಕೊಡುತ್ತಿದ್ದಾರೆ. ಆದರೆ ಪೂರ್ಣ ಉದ್ಯೋಗ ಕೊಡುವ ಕೆಲಸ ತುಂತುರು ನೀರಾವರಿ ಕೆಲಸಗಳನ್ನು ಸ್ವಚ್ಛವಾಗಿ ತ್ವರಿತವಾಗಿ ಚುರುಕುಗೊಳಿಸಬೇಕು. ಇದಕ್ಕೆ ಎಷ್ಟು ಖರ್ಚು ಮಾಡಿದ್ದಾರೆ ಎನ್ನುವುದನ್ನು ನೋಡಿದರೆ ತಾವು ಎಷ್ಟು ಬಜೆಟ್‌ನ್ನು ಇಟ್ಟಿರುತ್ತೀರಿ ಅಷ್ಟು ಹಣವನ್ನು ನಿಗದಿತ ವೇಳೆಯಲ್ಲಿ ಪೂರ್ಣವಾಗಿ ಖರ್ಚುಮಾಡದೆ ಮಾರ್ಚ್ ೩೧ನೇ ತಾರೀಖು ಯಾವಾಗ ಬರುತ್ತದೆ ಆಗ ೧೦ ದಿವಸ ಮುಂಚಿತವಾಗಿ ಎಲ್ಲ ಹಣವನ್ನು ಖರ್ಚು ಮಾಡುವುದಕ್ಕೆ ಶುರುಮಾಡುತ್ತಾರೆ. ಅಲ್ಲಿಯವರೆಗೆ ಹಾಸಿಗೆಯನ್ನು ಹಾಸಿಕೊಂಡು ಆರಾಮವಾಗಿ ಮಲಗಿಕೊಂಡಿರುತ್ತಾರೆ. ಹೀಗಾಗಬಾರದು, ಯೋಜಿತ ಕಾರ್ಯಕ್ರಮಗಳು ಅವಧಿಯೊಳಗೆ ಮುಗಿಯಬೇಕು. ಇಂದಿನದು ನಾಳೆ, ನಾಳೆಯದು ಆಚೆ ನಾಡಿದ್ದು ಎಂದು ಮುಂದೂಡಿಕೊಂಡು ಹೋದಲ್ಲಿ ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳು ಕುಂಠಿತಗೊಳ್ಳುತ್ತದೆ. ೧೯೮೭-೮೮ರ ಕಾರ್ಯಕ್ರಮಗಳು ಅದರೊಳಗೆ ಮುಗಿಯಬೇಕೆಂದಿದ್ದರೆ ಅದರೊಳಗೆ ಮುಗಿಸಬೇಕು. ಅದನ್ನು ಮುಗಿಸದ ಆ ಅಧಿಕಾರಿ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಯಾರೇ ಇರಲಿ ಆ ಅಧಿಕಾರಿಯನ್ನು ತಪ್ಪಿತಸ್ಥರನ್ನಾಗಿಮಾಡಿ ಶಿಕ್ಷೆಗೆ ಗುರಿಪಡಿಸಬೇಕು. ಆಗ ಆಡಳಿತದಲ್ಲಿ ಬಿಗಿ ಬರುತ್ತದೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಈ ತುಂತುರು ನೀರಾವರಿ ಯೋಜನೆಗೆ ಸುಮಾರು ೫೦ ಲಕ್ಷ ರೂಪಾಯಿಗಳನ್ನು ಇಟ್ಟಿರುವುದರಲ್ಲಿ ಕೇವಲ ೧೯ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿದ್ದಾರೆ. ಇದು ಎಲ್ಲದರಲ್ಲೂ ಹೀಗಿಯೇ ಇದೆ. ಆದರೆ ಇದರಲ್ಲಿ ಒಂದು ಒಳ್ಳೆಯ ಕಾರ್ಯಕ್ರಮ ವೆಂದರೆ ಮಹಿಳಾಉದ್ಯೋಗ ಕಾರ್ಯಕ್ರಮ. ಮಹಿಳೆಯರಿಗೆ ಉದ್ಯೋಗ ಒದಗಿಸುವುದರಲ್ಲಿ ಇದು ಬಹಳ ಮಹತ್ವದ ಪಾತ್ರ ವಹಿಸುತ್ತಿದೆ. ಡ್ವಾಕಾ ಯೋಜನೆ ಬಹುತೇಕ ಎಲ್ಲ ಪಟ್ಟಣಗಳಲ್ಲಿರತಕ್ಕಂಥವರೇ ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಹಳ್ಳಿಗಾಡಿನ ಮಹಿಳೆಯರಿಗೆ ಇದರ ಪ್ರಯೋಜನ ಸಿಗುತ್ತಿಲ್ಲ. ಗ್ರಾಮೀಣ ಮಹಿಳೆಯರಿಗೆ ಸ್ವಯಮ್ ಉದ್ಯೋಗದಲ್ಲಿ ತೊಡಗಿಸುವ ಕಾರ್ಯಕ್ರಮ ಯೋಜಿತವಾಗಿ ಗ್ರಾಮಾಂತರ ಪ್ರದೇಶದ ಮಹಿಳೆಯರಿಗೆ ಗೊತ್ತಾಗುವುದೇ ಇಲ್ಲ. ಹೀಗಾಗಿ ಏನಾಗಿದೆ ಎಂದರೆ ವ್ಯವಸ್ಥಿತವಾಗಿ ಮಹಿಳೆಯರಿಗೆ ಉದ್ಯೋಗ ಸಿಕ್ಕುತ್ತಿಲ್ಲ. ಪತ್ತುಗಜ ಬಟ್ಟೆ ತರಿಸಿ ರೆಡಿಮೇಡ್ ಬಟ್ಟೆಗಳನ್ನು ತರಿಸಿ ಮಹಿಳಾ ಮಂಡಲಿಗಳಿಗೆ, ಅದೇ ಊರಲ್ಲಿ ಹತ್ತು ಪಟ್ಟು ರೆಡಿಮೇಡ್ ಬಟ್ಟೆಗಳನ್ನು ಹಾಕಿ ಎಲ್ಲರಿಗೂ ಉದ್ಯೋಗ ಅಭಾವವನ್ನು ಉಂಟುಮಾಡತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಇನ್ನೂ ಒಂದು ವಿಚಾರ ಎನೆಂದರೆ, ಬರಗಾಲ ಪೀಡಿತ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಕೇಂದ್ರ ಹಾಗೂ ರಾಜ್ಯ ವಲಯಗಳ ಹೆಚ್ಚಾಗಿ ನೀರಾವರಿ ಕೆಲಸಗಳನ್ನು ಅಂದರೆ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿಸುವುದು, ಬಾಂದಾರಗಳನ್ನು ಕಟ್ಟಿಸುವುದು ಇವೆಲ್ಲವನ್ನು ಮಾಡಿದರು. ಕೇಂದ್ರ ವಲಯದಲ್ಲಿ ಮತ್ತು ರಾಜ್ಯವಲಯದಲ್ಲಿ ತೆಗೆದುಕೊಂಡ ಕಾರ್ಯಕ್ರಮಗಳ ಬಗ್ಗೆ ನನ್ನ ತಾಲ್ಲೂಕಿನ ಉದಾಹರಣೆಯನ್ನು ಕೊಡಬಯಸುತ್ತೇನೆ. ಅಲ್ಲಿ ಅನೇಕ ಬಾಂದಾರಗಳನ್ನು ತೆಗೆದುಕೊಳ್ಳಿ ಎಂದು ನಾನು ಹೋದ ಸಾರಿಯೇ ಹೇಳಿದ್ದೆ. ಇವರು ಮಾರ್ಚ್ ೩೧ಕ್ಕೆ ಇನ್‌ಫೀಸಿಬಲ್ ಎಂದು ಹಣೆಪಟ್ಟಿ ಕಟ್ಟಿ ಕಳುಹಿಸಿದ ಕಾರಣ ನನ್ನ ತಾಲ್ಲೂಕಿನಲ್ಲಿ ೧೮ ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಯಿತು. ಇದನ್ನು ಕೇಳಿದರೆ, ಲ್ಯಾಪ್ಸ್ ಆಗಿಲ್ಲ, ಮುಂದಕ್ಕೆ ಹೋಗಿದೆ ಅನ್ನುತ್ತಾರೆ. ಅದು ಸರಿಯಲ್ಲ. ಹೊಸ ಕೆಲಸಗಳನ್ನು ತೆಗೆದುಕೊಳ್ಳುವ ಬಗ್ಗೆ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ವಿಶೇಷ ಗ್ರಾಮೀಣ ಉದ್ಯೋಗ ಭರವಸಾ ಯೋಜನೆ ಏನಿದೆ, ಇದು ಸಂಪೂರ್ಣ ರಾಜ್ಯ ಸರ್ಕಾರದು. ಇದಕ್ಕಾಗಿ ಕೇವಲ ೬ ತಾಲ್ಲೂಕುಗಳನ್ನು ತೆಗೆದುಕೊಂಡಿದ್ದಾರೆ. ನಮ್ಮ ರೋಣ ತಾಲ್ಲೂಕು ಬರಗಾಲಪೀಡಿತ ಪ್ರದೇಶ, ಅಲ್ಲಿ ಪರಿಶಿಷ್ಟ ಜಾತಿಯವರು ಮತ್ತು ಪರಿಶಿಷ್ಟ ವರ್ಗದವರು ಹೆಚ್ಚಾಗಿ ಇದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಕೂಡ ಪತ್ರ ಬರೆದಿದ್ದೇನೆ. ಆ ಯೋಜನೆಗೆ ರೋಣ್ ತಾಲ್ಲೂಕನ್ನು ಸೇರಿಸಿ ಎಂದು ಅವರು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆದಿದ್ದಾರೆ. ೧೯೮೮-೮೯ರ ಪರ್‌ಫಾರಮೆನ್ಸ್ ಬಡ್ಜೆಟ್ಟಿನಲ್ಲಿ ನಮ್ಮ ತಾಲ್ಲೂಕು ಇಲ್ಲ. ಈಗಲಾದರೂ ಆ ತಾಲ್ಲೂಕನ್ನು ಸೇರಿಸುವ ಪ್ರಯತ್ನವನ್ನು ಮಾನ್ಯ ಸಚಿವರು ಮಾಡಬೇಕು. ಸೇರಿಸುವುದು ಅಷ್ಟೇ ಅಲ್ಲ. ಅದಕ್ಕೆ ಅನುದಾನ ಒದಗಿಸುವ ಕಾರ್ಯಕ್ರಮವನ್ನು ಇಟ್ಟುಕೊಳ್ಳಬೇಕು. ಕುಡಿಯುವ ನೀರಿನ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳುವುದಿಲ್ಲ. ಎಲ್ಲಾ ಕಡೆ ಏನೂ ಕೊಡದಿದ್ದರೂ ಕುಡಿಯುವ ನೀರನ್ನು ಕೊಟ್ಟಿದ್ದೇವೆಂಬ ಸಮಾಧಾನ ನಮಗೆ ಇದೆ. ಎಷ್ಟೋ ಕಡೆ ಸವಳು ಭೂಮಿ, ಸವಳು ನೀರು ಇದೆ, ಕುಡಿಯಲೂ ಅಯೋಗ್ಯವಾದ ನೀರು ಇದೆ. ಅದನ್ನು ತಿಳಿಗೊಳಿಸಿ, ಶುದ್ಧೀಕರಣ ಮಾಡುವ ಯೋಜನೆ ಇದರಲ್ಲಿದೆ ಎಂದು ತಿಳಿದುಕೊಂಡಿದ್ದೇನೆ. ಇದರಲ್ಲೂ ಹೆಚ್ಚಿಗೆ ರೊಕ್ಕ ಖರ್ಚು ಮಾಡಿಲ್ಲ. ೩೦ ಲಕ್ಷ ರೂಪಾಯಿಗಳ ಹಣ ಬಿಡುಗಡೆ ಆದರೂ ಎಷ್ಟು ಖರ್ಚಾಗಿದೆ ಎಂಬುದು ಇದರಲ್ಲಿ ಇಲ್ಲ. ಇನ್ನೊಂದು ತಾಂತ್ರಿಕ ದೋಷ ಇದೆ. ಏನೆಂದರೆ. ಮಂಡಲ ಪಂಚಾಯ್ತಿಗಳಿಗೆ ಕೇವಲ ೨ ಸಾವಿರ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಆಸ್ಪದ ಇದೆ. ಹೆಚ್ಚಾದರೆ ಅದನ್ನು ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ವಿಭಾಗಕ್ಕೆ ಹೊತ್ತು ಹಾಗಬೇಕು. ಇಲ್ಲಿ ಏನು ತೊಂದರೆಯಾಗಿದೆ ಎಂದರೆ, ಒಂದು ಮಂಡಲದ ಉದಾಹರಣೆಯನ್ನು ತೆಗೆದುಕೊಂಡರೆ ಅಲ್ಲಿ ೨೫-೩೦ ಸಾವಿರ ರೂಪಾಯಿನ ಅಂದಾಜು ಪಟ್ಟಿಯನ್ನು ತಯಾರು ಮಾಡಿದರೆ ಅಷ್ಟು ರೊಕ್ಕವನ್ನು ಜಿಲ್ಲಾಪರಿಷತ್ತಿನ ಇಂಜಿನಿಯರಿಂಗ್ ವಿಭಾಗಕ್ಕೆ ಮಂಡಲದವರು ಜಮಾ ಮಾಡಿರಬೇಕು. ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ವಿಭಾಗದವರು ತಮ್ಮ ಮನಸ್ಸಿಗೆ ಬಂದಾಗ ಹಣವನ್ನು ಬಿಡುಗಡೆ ಮಾಡುತ್ತಾರೆ. ಹೀಗಾಗಿ ತೊಂದರೆಯಾಗುತ್ತಿದೆ. ಮಂಡಲ ಪಂಚಾಯ್ತಿಯವರು ತುಂಬಿದ ಹಣ ಇಂಜಿನಿಯರಿಂಗ್ ವಿಭಾಗದಲ್ಲಿ ಕೊಳೆಯುತ್ತಾ ಬಿದಿದ್ದೆ. ಏನೂ ಕೆಲಸ ನಡೆದಿಲ್ಲ. ಅವರು ರೊಕ್ಕ ತುಂಬಿಸಿಕೊಳ್ಳುತ್ತಾರೆಯೇ ಹೊರತು ಕೆಲಸ ಮಾಡಬೇಕೆಂಬ ಕಳಕಳಿ ಇಲ್ಲ. ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್

ವಿಭಾಗಕ್ಕೆ ಜಮಾ ಮಾಡುವುದಕ್ಕಿಂತ ತಾಲ್ಲೂಕು ಪಂಚಾಯ್ತಿಗೆ ಜಮಾ ಮಾಡಿದರೆ ಆರ್ಥಿಕ ವಿಕೇಂದ್ರೀಕರಣವಾಗಿ, ಜಾಗ್ರತೆ ನೆರವು ಕೊಟ್ಟಂತಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಅದನ್ನು ತಾಲ್ಲೂಕು ಪಂಚಾಯ್ತಿಯ ವ್ಯಾಪ್ತಿಗೆ ಒಳಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಬಡತನ ಹೋಗಬೇಕೆಂದು ಎಲ್ಲರೂ ಹೇಳುತ್ತಾರೆ. ಈ ಬಡತನ ಎಷ್ಟಿದೆ ಎಂದು ಅಳೆಯುವುದಕ್ಕಾಗಿಯೇ ಹೆಚ್ಚು ರೊಕ್ಕ ಖರ್ಚಾಗಿದೆ. ಬಡವರು ಎಷ್ಟೆಷ್ಟು ಮಂದಿ ಇದ್ದಾರೆಂದು ಸಮೀಕ್ಷೆ ನಡೆಸಿ ಅಳತೆ ಮಾಡುತ್ತಾ ಹೋಗುವುದನ್ನು ಬಿಟ್ಟು ಬಡತನವನ್ನು ಹೋಗಲಾಡಿಸಲು ತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳತಕ್ಕ ಕೆಲಸ ಆಗಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರ ಏನೆಂದರೆ ರಾಜ್ಯ ವಲಯದ ಬರಗಾಲಪೀಡಿತ ಪ್ರದೇಶದಲ್ಲಿ ನರಗುಂದ ಮತ ಕ್ಷೇತ್ರ ಇತ್ತು. ಅದನ್ನು ಈಗ ತೆಗೆದು ಒಗೆದಿದ್ದಾರೆ. ನರಗುಂದ ಮತ ಕ್ಷೇತ್ರದಲ್ಲಿ ನನ್ನ ತಾಲ್ಲೂಕಿನ ೨೮ ಹಳ್ಳಿಗಳು ಸೇರಿವೆ. ಅವನ್ನು ಅಚ್ಚುಕಟ್ಟು ಪ್ರದೇಶ ಎಂದು ತೆಗೆದಿದ್ದಾರೆ. ಅಲ್ಲಿ ನೀರಿನ ಸೌಕರ್ಯ ಇಲ್ಲ. ಆದ್ದರಿಂದ ನನ್ನ ತಾಲ್ಲೂಕಿನ ೨೮ ಹಳ್ಳಿಗಳಲ್ಲಿ ತೊಂದರೆ ಇದೆ. ಮಾನ್ಯ ಉಪಾಧ್ಯಕ್ಷರಾದ ಯಾವಗಲ್ ಅವರ ಕ್ಷೇತ್ರಕ್ಕೆ ಇದು ಬರುತ್ತದೆ. ಅವರು ಹೇಳುವುದಕ್ಕಾಗದಿರುವುದರಿಂದ ನಾನು ಹೇಳುತ್ತಿದ್ದೇನೆ. ರಾಜ್ಯ ವಲಯದ ಕ್ಷಾಮಪೀಡಿತ ಪ್ರದೇಶದಲ್ಲಿ ನರಗುಂದ ಮತ ಕ್ಷೇತ್ರದ ನನ್ನ ತಾಲ್ಲೂಕಿನ ೨೮ ಹಳ್ಳಿಗಳನ್ನಾದರೂ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮ ನೈರ್ಮಲ್ಯದ ವಿಷಯಕ್ಕೆ ಬರಬೇಕೆಂದು ಇದರಲ್ಲಿ ಶೌಚಾಲಗಳನ್ನು ಕಟ್ಟುವ ಕೆಲಸ ಮಾಡಿದ್ದಾರೆ. ಪ್ರಸಕ್ತ ವರ್ಷ ೪೨ ಲಕ್ಷ ರೂಪಾಯಿಯೊಳಗೆ ೪೨೦೦ ಶೌಚಾಲಯಗಳನ್ನು ನಿರ್ಮಿಸಬೇಕು ಎಂಬ ಅಂದಾಜಿದೆ. ಅದಕ್ಕಾಗಿ ಕೇಂದ್ರಸರ್ಕಾರ ೨೩ ಲಕ್ಷ ರೂಪಾಯಿಗಳನ್ನು ಮೊದಲನೇ ಕಂತಾಗಿ ಬಿಡುಗಡೆ ಮಾಡಿದೆಯೆಂದು ಈ ವರದಿಯಲ್ಲಿದೆ. ಆದರೆ ೨೩ ಲಕ್ಷ ರೂಪಾಯಿಗಳನ್ನು ಸಹ ಬಿಡುಗಡೆ ಮಾಡಿಲ್ಲ. ಸುಮಾರು ೪ ಲಕ್ಷ ರೂಪಾಯಿಗಳನ್ನು ಪ್ರಯೋಗಕ್ಕಾಗಿ ಬಿಡುಗಡೆ ಮಾಡಿದ್ದಾರೆ. ಈ ನಾಲ್ಕು ಲಕ್ಷ ರೂಪಾಯಿಗಳನ್ನಾದರೂ ಶೌಚಾಲಯ ನಿರ್ಮಾಣಕ್ಕೆ ಖರ್ಚು ಮಾಡಬೇಡವೆ ? ಅದು ಕೂಡ ಕೆಲಸ ಆಗಿಲ್ಲ. ಏತಕ್ಕೆ ಆಗಿಲ್ಲ ಎಂಬುದನ್ನು ಪರಾಮರ್ಶಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಂಡಲ ಪಂಚಾಯಿತಿ ಕಾರ್ಯದರ್ಶಿಗಳಿಗೆ ತರಬೇತಿ ಕೊಟ್ಟಿದ್ದಾರೆ. ಅದಕ್ಕಾಗಿ ೪,೮೩,೦೦೦ ರೂಪಾಯಿ ಇಟ್ಟಿದ್ದು ಖರ್ಚು ಮಾಡಿರುವುದು ೨,೭೫,೦೦೦ ರೂಪಾಯಿಗಳನ್ನು ಮಾತ್ರ ಮಂಡಲ ಪಂಚಾಯಿತಿ ಕಾರ್ಯದರ್ಶಿಗಳಿಗೆ ಯಾವರೀತಿಯ ತರಬೇತಿ ಕೊಟ್ಟಿದ್ದಾರೋ ಗೊತ್ತಿಲ್ಲ. ಕಾರ್ಯದರ್ಶಿಗಳಿಗೂ ಮಂಡಲ ಪ್ರಧಾನರಿಗೂ ಎಣ್ಣೆ ಶೀಗೆಕಾಯಿ. ಏಕೆಂದರೆ ಕಾರ್ಯದರ್ಶಿ ಅರ್ಧಂಬರ್ಧ ಶಾಣೆ ಇದ್ದರೆ ಮಂಡಲ ಪ್ರಧಾನರು ಪೂರ್ಣ ಶಾಣೆ ಇರುತ್ತಾರೆ. ಹೀಗಿದ್ದರೂ ಕಷ್ಟವಾಗಿದೆ. ಆದ್ದರಿಂದ ಕಾರ್ಯದರ್ಶಿಗಳು ಏನೇನು ಕೆಲಸ ಮಾಡಬೇಕು ಎಂಬುದನ್ನು ನಿರ್ದಿಷ್ಟವಾಗಿ ಹೇಳಬೇಕು. ಏನಾದರೂ ಕೆಲಸ ಇದ್ದರೆ ಅದನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು ಪ್ರಧಾನರಿಗೆ ಹೇಳಿಬಿಡುತ್ತಾರೆ. ಹಣ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಹೀಗಾಗಿ ಅಲ್ಲಿ ಬರೀ ಪಗಾರಕ್ಕೆ ಮಾತ್ರ ಹಣ ಖರ್ಚು ಮಾಡುವ ಪರಿಸ್ಥಿತಿ ಇದೆ. ಮಂಡಲ ಪಂಚಾಯಿತಿಗಳಲ್ಲಿ ಸಾಕಷ್ಟು ಹಣ ಇದೆ. ಆದರೆ ಅದನ್ನು ಹೇಗೆ ವಿನಿಯೋಗ ಮಾಡಬೇಕು ಎನ್ನುವ ಸಲಹೆಯ ಅಭಾವ ಮಂಡಲದಲ್ಲಿ ಕಾಣುತ್ತಿದೆ. ಅದನ್ನು ದಯವಿಟ್ಟು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರು ನನಗೆ ಕೇವಲ ೧೦ ನಿಮಿಷ ಮಾತ್ರ ಅವಕಾಶ ಕೊಟ್ಟಿರುವುದರಿಂದ ಹೆಚ್ಚಿಗೆ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ಆ ರೀತಿ ಮಾಡಿದರೆ ಅವರ ಮಾತಿನ ಉಲ್ಲಂಘನೆಯಾಗುತ್ತದೆ. ಆದ್ದರಿಂದ ಕೆಲವು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಆಡಳಿತದಲ್ಲಿ ಸ್ವಚ್ಛ ಆಡಳಿತ ಇರಬೇಕು. ಭ್ರಷ್ಟಾಚಾರ ಕಡಿಮೆ ಮಾಡಬೇಕು ಎಂದು ಹೇಳುತ್ತಿಲ್ಲ. ಏಕೆಂದರೆ ನನ್ನ ತಿಳಿವಳಿಕೆ ಮಟ್ಟಿಗೆ ಜಿಲ್ಲಾ ಪರಿಷತ್ತು ಮತ್ತು ಮಂಡಳ ಪಂಚಾಯಿತಿಗಳು ಬಂದಮೇಲೆ ಭ್ರಷ್ಟಾಚಾರ ಎಷ್ಟೋ ಮಟ್ಟಿಗೆ ಕಡಿಮೆಯಾಗಿದೆ. ಇದನ್ನು ಒಪ್ಪಿಕೊಳ್ಳಬೇಕು. ಕೊನೆಯದಾಗಿ ಒಂದು ಮಾತು ಹೇಳಿ ಮುಗಿಸುತ್ತೇನೆ. ಐ. ಆರ್. ಡಿ. ಪಿ. ಯೋಜನೆಗಳು ಸಾಲಮೇಳದಷ್ಟೇ ಸಕ್ಸಸ್‌ಫುಲ್ ಆಗಿವೆ. ಸಾಲ ಮೇಳಗಳು ಎಷ್ಟು ಯಶಸ್ವಿಯಾಗಿವೆಯೋ ಅಷ್ಟೇ ಯಶಸ್ವಿಯಾಗಿ ಐ. ಆರ್. ಡಿ. ಪಿ. ಯೋಜನೆಯೂ ಆಗಿದೆ. ಎಮ್ಮೆ, ಕುರಿ, ಎತ್ತು, ಕತ್ತೆ ಕೊಡಿಸುವ ಈ ಯೋಜನೆಯನ್ನು ದಯವಿಟ್ಟು ತೆಗೆದು ಒಗೆಯಿರಿ. ಈ ಹಣವನ್ನು ಪರಿಶಿಷ್ಟ ಜನಾಂಗದವರ ಹೊಲದಲ್ಲಿ ಬೋರ್ ಹಾಕಿಸುವುದಕ್ಕೆ ಖರ್ಚು ಮಾಡಿ. ಅವರಿಗೆ ಉದ್ಯೋಗ ಹಚ್ಚಿ. ಕೇವಲ ಹಣವನ್ನು ಹಂಚುವುದರಿಂದ ಅಭಿವೃದ್ಧಿ ಕಾರ್ಯಗಳು ಆಗುವುದಿಲ್ಲ. ಅದನ್ನು ಸದುಪಯೋಗಪಡಿಸಿಕೊಂಡು ಯೋಜನೆಗಳನ್ನು ಮಾಡಿದರೆ ಯಶಸ್ವಿಯಾಗುತ್ತದೆಂದು ಹೇಳುತ್ತೇನೆ. ಈಗ ೧೦ ನಿಮಿಷ ಆಯಿತು. ಇದ್ದರಿಂದ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

† ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್). —ಸನ್ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿರಾಜ್ ಈ ಇಲಾಖೆಗಳ ಮೇಲೆ ಕೆಲವು ಮಾತುಗಳನ್ನು ಆಡಲು ತಾವು ಪರವಾನಗಿ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ಒಂದೆರಡು ಮಾತುಗಳನ್ನು ಹೇಳುತ್ತೇನೆ, ಮುಖ್ಯವಾಗಿ ಈ ಇಲಾಖೆ ಈ ರಾಜ್ಯದ ಶೇಕಡ ೮೦ ರಷ್ಟು ಜನರಿಗೆ ಸಂಬಂಧಪಟ್ಟದ್ದು. ಅದರಲ್ಲೂ ಗ್ರಾಮೀಣ ಭಾಗದಲ್ಲಿರುವಂತಹ ರೈತರ, ಕೃಷಿ ಕಾರ್ಮಿಕರ ಮತ್ತು ದೊಡ್ಡ ಹಿಡುವಳಿದಾರರು ಮೊದಲ್ಗೊಂಡು ಎಲ್ಲರಿಗೂ ಬೇಕಾದಂತಹ ಇಲಾಖೆ ಇದು. ಆದ್ದರಿಂದ ಅವರಿಗೆ ಬೇಕಾದ ಒಳ್ಳೆಯ ಪರಿಸರವನ್ನು ನಾವು ಕಲಿಸಿ ಕೊಡಬೇಕು. ಅವರಿಗೆ ಬೇಕಾದ ಸವಲತ್ತುಗಳನ್ನು ಒದಗಿಸಿ ಕೊಡಬೇಕು. ನಗರಗಳಿಂದ ಹಳ್ಳಿಗಳಿಗೆ ಬೇಕಾದ ಸಾರಿಗೆ ಸಂಪರ್ಕವನ್ನು ಮಾಡಿಕೊಡಬೇಕು. ನಗರದಲ್ಲಿದ್ದಂತಹ ವಿದ್ಯಾಭ್ಯಾಸ ಮತ್ತು ನಗರದಲ್ಲಿರುವಂತಹ ಪ್ರತಿಯೊಂದು ಹೊಸ ಹೊಸ ಸಾಧನೆಗಳು ಏನಿದೆ, ಆ ಒಂದು ವ್ಯವಸ್ಥೆ ಪ್ರತಿಯೊಂದು ಹಳ್ಳಿಯ ರೈತನಿಗೂ ಕೊಡಬೇಕೆಂಬ ಇಲಾಖೆ ಇದು. ಇದು ಬಹಳ ಮುಖ್ಯವಾದಂತಹ ಇಲಾಖೆ. ಪಂಚಾಯಿತಿರಾಜ್ (ಜಿಲ್ಲಾಪರಿಷತ್) ವ್ಯವಸ್ಥೆ ಬಂದ ನಂತರ ನಾವು ಎಲ್ಲರೂ ನಮ್ಮ ರಾಜ್ಯದಲ್ಲಿ ರಾಮರಾಜ್ಯ ಬರಬಹುದೆಂಬ ಆಸೆಯನ್ನು ಇಟ್ಟುಕೊಂಡಿದ್ದೆವು. ಆ ಉದ್ದೇಶದಿಂದ ಜಿಲ್ಲಾಪರಿಷತ್ತು ವ್ಯವಸ್ಥೆಯನ್ನು ನಾವು ಈ ರಾಜ್ಯದಲ್ಲಿ ಒದಗಿಸಿ ಕೊಟ್ಟಿದ್ದೇವೆ. ೧೯೮೩ರಲ್ಲಿ ಜಿಲ್ಲಾಪರಿಷತ್ತಿನ ಮಸೂದೆಯು ಚರ್ಚೆಗೆ ಬಂದಂತಹ ಸಂದರ್ಭದಲ್ಲಿ ಮಾನ್ಯ ನಜೀರ್ ಸಾಬ್ ರವರು ಸುಮಾರು ೮೦೦ ಕೋಟಿ ರೂಪಾಯಿಗಳನ್ನು ಜಿಲ್ಲಾಪರಿಷತ್ತಿಗೆ ಕೊಡುತ್ತೇವೆ. ಆ ಬಗ್ಗೆ ಅದರಲ್ಲಿರತಕ್ಕ ಲೆಕ್ಕಪತ್ರ ನೋಡುತ್ತೇವೆ ಎಂಬ ಮಾತನ್ನು ಹೇಳಿದ್ದರು. ನಮ್ಮ ರಾಜ್ಯದಲ್ಲಿರುವ ೧೯ ಜಿಲ್ಲೆಗಳನ್ನು ಆವರೇಜ್ ಮಾಡಿದಾಗ ಪ್ರತಿಯೊಂದು ಜಿಲ್ಲೆಗೂ ೪೦ ಕೋಟಿ ರೂಪಾಯಿಗಳು ಬರುತ್ತದೆ. ಅವುಚಿಕ್ಕವು ಇರಲಿ, ದೊಡ್ಡವು ಇರಲಿ, ಅದೇ ರೀತಿ ಮಂಡಲ್ ಪಂಚಾಯಿತಿ ಬಗ್ಗೆ ಏನು ಮಾಡಿದ್ದೀವಿಎಂದರೆ. ೧೯೮೧ರ ಜನಗಣತಿಯ ಪ್ರಕಾರ ಪ್ರತಿಯೊಂದು ಮಂಡಲಕ್ಕೂ ಅಲ್ಲಿಯ ಜನಸಂಖ್ಯೆಯ ಆಧಾರದ ಮೇಲೆ ಒಬ್ಬರಿಗೆ ೧೦ ರೂಪಾಯಿಗಳಂತೆ ಕೊಡುತ್ತೇವೆಂದು ಆ ಮಸೂದೆಯಲ್ಲೇ ಹೇಳಿದ್ದರು. ಈಗ ಈ ಒಂದು ವ್ಯವಸ್ಥೆ ಬಂದು ಒಂದೂವರೆ ವರ್ಷಗಳಾಗಿವೆ. ಈ ಅವಧಿಯಲ್ಲಿ ಅವರ ಕಾರ್ಯಾಚರಣೆಯ ಬಗ್ಗೆ ಅವಲೋಕನೆ ಮಾಡಿದಾಗ ಇಲ್ಲಿಯತನಕ ನೋಡುವುದಾದರೆ ಅದು ಅಷ್ಟರ ಮಟ್ಟಿಗೆ ಸಫಲವಾಗಲಿಲ್ಲ. ಜಿಲ್ಲಾಪರಿಷತ್ತಿಗೆ ಟ್ಯಾಕ್ಸ್ ಹಾಕುವ ಅಧಿಕಾರವನುನ್ನ ಕೊಟ್ಟಿಲ್ಲ. ಆದರೆ ಆ ಒಂದು ಅಧಿಕಾರವನ್ನು ಮಂಡಲ ಪಂಚಾಯಿತಿಗೆ ಕೊಟ್ಟಿದ್ದೇವೆ ಜಿಲ್ಲಾಪರಿಷತ್ತು ಇವತು ನಾವು ಇಲ್ಲಿಂದ ಕೊಟ್ಟಂತಹ ಹಣವನ್ನು ಖರ್ಚು ಮಾಡುವುದಕ್ಕೆ ಇರುವಂತಹ ಸಂಸ್ಥೆ. ಈ ಸಂಸ್ಥೆಗಳು ಯಾವ ಪ್ರಕಾರ ತಮ್ಮ ಕಾರ್ಯಕ್ರಮವನ್ನು ಮಾಡಿವೆ ಎಂಬುದನ್ನು ನೋಡೋಣ.

ಮೊದಲು ಆ ಒಂದು ಅಧಿಕಾರ ರಾಜ್ಯ ಮಟ್ಟದಲ್ಲೇ ಇದ್ದಾಗ ನಮ್ಮ ಭಾಗದ ಕೆಲಸಗಳನ್ನು ವಿಧಾನಸೌಧದಲ್ಲಿರುವ ಸಂಬಂಧಪಟ್ಟ ಮಂತ್ರಿಗಳ ಮುಖಾಂತರವಾಗಿ ಮಾಡಿಸಿಕೊಳ್ಳುತ್ತಿದ್ದೆವು. ಆ ಪ್ರಕಾರವಾಗಿ ಕೆಲಸಗಳಾಗುತ್ತಿದ್ದವು. ನಂತರ ಜಿಲ್ಲಾಪರಿಷತ್ತು ಅಸ್ತಿತ್ವಕ್ಕೆ ಬಂದ ನಂತರ ಏನಾಗಿದೆ ಎಂದು ಹೇಳುವುದಾದರೆ, ಸುಮಾರು ೩/೨ ಭಾಗದಷ್ಟು ನಮ್ಮ ಸಬ್ಜೆಕ್ಟ್ಸ್ we have diverted to Zilla Parishads and also funds. ಈ ಹಣವನ್ನು ಕೊಟ್ಟ ನಂತರ ತಾವು ಏನು ಮಾಡಿದ್ದೀರಿ? ಅವರ ತೊಂದರೆಗಳನ್ನು ಇಲ್ಲಿ ಹೇಳುತ್ತಿದ್ದೇನೆ. Please see that their problems are solved. ೧೯೮೭-೮೮ನೇ ಸಾಲಿಗೆ ನಮ್ಮ ಗುಲ್ಬರ್ಗದಲ್ಲಿ ನಾವೇ ನಮ್ಮದೇ ಆದ ಯೋಜನೆಯನ್ನು ಮಾಡಿದ್ದೇವೆ. ಆದರೆ ೨೭ ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿಕೊಡಬೇಕೆಂದು ಇಲ್ಲಿಂದ ಜಿಲ್ಲಾಪರಿಷತ್ತಿನ ಕಾರ್ಯದರ್ಶಿಯವರಿಗೆ ಬರೆಸಿದರು. ಅಂದರೆ ನೀವು ಏನು ಹಣವನ್ನು ಕೊಡುತ್ತೀರಿ ಅದರ ಆಧಾರದ ಮೇಲೆ ಅಲ್ಲಿ ಪ್ಲಾನ್ ಮಾಡಬೇಕೆಂದು ಗುಲ್ಬರ್ಗ ಹಾಗೂ ಬೇರೆ ಬೇರೆ ಜಿಲ್ಲೆಯವರಿಗೆ ಬರೆದಿದ್ದೀರಿ. ಈ ಜಿಲ್ಲಾಪರಿಷತ್ತುಗಳು ಅಸ್ತಿತ್ವಕ್ಕೆ ಬಂದ ಮೇಲೆ ಅನೇಕ ಜನರಲ್ಲಿ ಆಂಬಿಷನ್ಸ್ ಬದಲಾವಣೆ ಆಗಿದೆ. ಸುಮಾರು ಶೇಕಡಾ ೫೧-೫೨ ಜನ ಜಿಲ್ಲಾಪರಿಷತ್ ಸದಸ್ಯರು ತಮ್ಮ ಭಾಗದ ಜನರ ಕೆಲಸ ಮಾಡಬೇಕೆಂಬ ಸದುದ್ದೇಶದಿಂದ ಅಲ್ಲಿಗೆ ಬಂದಿರುತ್ತಾರೆ. ಆದರೆ ತಾವು ಲಕ್ಷ್ಮಣಗೆರೆಯನ್ನು ಹಾಕಿದ್ದೀರಿ. ೨೭ ಕೋಟಿ ರೂಪಾಯಿಯಲ್ಲಿ ನಿಮ್ಮ ಬಜೆಟ್ ಪೂರ್ತಿ ಮಾಡಬೇಕೆಂದು ಹೇಳಿದ್ದೀರಿ. ಇವತ್ತು ಹೈದರಾಬಾದ್ ಕರ್ನಾಟಕ ಏರಿಯಾ ಬಹಳ ಬ್ಯಾಕ್‌ವರ್ಡ್ ಇದೆ. ಅಲ್ಲಿ ಅನೇಕ ರೀತಿಯ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಾದರೆ ಹೆಚ್ಚು ಹಣ ಬೇಕಾಗುತ್ತದೆ. ಇವತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ೫೫೦ ಕೋಟಿ ರೂಪಾಯಿ ಖರ್ಚು ಮಾಡಿ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದರೂ ಅಲ್ಲಿ ಇರುವ ಪ್ರತಿಯೊಂದು ಹಳ್ಳಿಗೂ ಸರ್ವಋತು ರಸ್ತೆಗಳನ್ನು ಮಾಡುವುದಕ್ಕಾಗುವುದಿಲ್ಲ. ಇಂತಹ ಸ್ಥಿತಿಯಲ್ಲಿ ಒಂದು ಸಾವಿರ ಹಳ್ಳಿಗಳು ಇವೆ. ಜಿಲ್ಲಾಪರಿಷತ್ತಿಗೆ ಆರಿಸಿ ಬಂದ ಸದಸ್ಯರು ಆ ಜಿಲ್ಲೆಯ ಹಳ್ಳಿಗಳಿಗೆ ೫ ವರ್ಷದ ಅವಧಿಯಲ್ಲಿ ರಸ್ತೆಗಳನ್ನು ಕೊಡದೇ ಹೋದರೆ ಈ ಜನರನ್ನು ಅವರು ಹಾಗೇ ಬಿಡುವುದಿಲ್ಲ. ತಾವು ಕೊಟ್ಟ ೭೨ ಕೋಟಿ ರೂಪಾಯಿಗಳಲ್ಲಿ ಆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇನ್ನು ಎರಡನೆಯದಾಗಿ ಮಂಡಲ ಪಂಚಾಯಿತಿಗಳಿಗೆ ಏನು ಅಧಿಕಾರ ಕೊಟ್ಟಿದ್ದೀರಿ. ಮಂಡಲ ಪಂಚಾಯಿತಿ ಸದಸ್ಯರು ತಮ್ಮ ಕಾರ್ಯಕ್ಷೇತ್ರದಲ್ಲಿ ಒಳಚರಂಡಿ ವ್ಯವಸ್ಥೆ ಒಳ ರಸ್ತೆ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಅಲ್ಲಿನ ಆಡಳಿತಾತ್ಮಕ ಕೆಲಸಕಾರ್ಯಗಳನ್ನು ಅವರೇ ಅಲ್ಲಿ ನೋಡಿಕೊಳ್ಳಬೇಕಾಗುತ್ತದೆ. ಅದು ಯಾವಾಗ ಆಗುತ್ತದೆ? ಸಣ್ಣ ಸಣ್ಣ ಟ್ಯಾಕ್ಸ್ ಹಾಕಿ ತಾವು ಕೊಟ್ಟ ಗ್ರಾಂಟ್‌ನಿಂದ ಅದನ್ನು ಮಾಡಬೇಕು. ನೀರಿನ ಸಮಸ್ಯೆಯನ್ನು ಅವರು ನೋಡಬೇಕು. ಈ ವ್ಯವಸ್ಥೆಗಾಗಿ ತಮ್ಮ ಹಾಗೂ ಕೇಂದ್ರ ಸರ್ಕಾರದ ಕೆಲವಾರು ಸ್ಕೀಮ್‌ಗಳು ಇವೆ. ಕೆಲವೊಂದು ಕೆಲಸಗಳಿಗೆ ಕೇಂದ್ರ ಸರ್ಕಾರದ ಗ್ರಾಂಟ್ ೫೦ ಪರ್ಸೆಂಟ್, ೭೫ ಪರ್ಸೆಂಟ್, ೩೦ ಪರ್ಸೆಂಟ್ ನಷ್ಟು ಇದೆ. ಇವತ್ತು ಎನ್‌ಆರ್‌ಇಪಿ, ಡಿಪಿಎಪಿ, ಆರ್‌ಎಲ್‌ಇಜಿಪಿ, ಮಿನಿವಾಟರ್ ಸ್ಕೀಮ್ಸ್, ಲ್ಯಾಂಡ್ ಆರ್ಮಿ ಎಲ್ಲಾ ಇದೆ. ಇವತ್ತು N.R.E.P. and R.L.E.G.P. are amalgamated. ಕೇಂದ್ರ ಸರ್ಕಾರದವರು ಒಂದೇ ಒಂದು ಹೆಡ್ ಮಾಡಬೇಕೆಂದು ಅವರು ಒಂದು ನಿರ್ಣಯ ತೆಗೆದುಕೊಂಡಿದ್ದಾರೆ. ಎರಡರ ನೇಚರ್ ಆಫ್ ವರ್ಕ್ ಒಂದೇ ಇದೆ. ಆದಕ್ಕಾಗಿ ಒಂದೇ ಹೆಡ್‌ನಲ್ಲಿ ನಡೆಸಬೇಕು. ಇನ್ನು ಅಂತ್ಯೋದಯ ಸ್ಕೀಮನ್ನು ೧೯೮೩-೮೪ರಲ್ಲಿ ಜಾರಿಗೆ ತಂದಿದ್ದೀರಿ. ಈ ಸ್ಕೀಮ್‌ನಲ್ಲಿ ಎಷ್ಟು ಜನ ಲಾಭ ಪಡೆದುಕೊಂಡಿದ್ದಾರೆ ಎನ್ನುವ ಬಗ್ಗೆ ಚರ್ಚೆ ಇಲ್ಲ. ಪಾವರ್ಟಿ ಲೈನ್ ಕೆಳಗೆ ಇದ್ದ ಜನರನ್ನು ೫ ಸಾವಿರ, ೬ ಸಾವಿರ ಬಾಂಡೆಡ್ ಲೇಬರರ್ಸ್‌ನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ಇವತ್ತು ಸ್ಕೀಮ್‌ಗಳನ್ನು ಜಾರಿಗೆ ಕೊಡುವಾಗ ಬಡವರ ಸಲುವಾಗಿ ಅನೇಕ ಸ್ಕೀಮ್‌ಗಳನ್ನು ಮಾಡಿದ್ದೀರಿ. ನೇಗಿಲು ಭಾಗ್ಯ ಯೋಜನೆ ಜಾರಿ ಮಾಡಿದ್ದೀರಿ. ಈ ಸ್ಕೀಮ್‌ಗಳನ್ನು ಜಾರಿಗೆ ಕೊಡುವಾಗ, ಬಡತನದ ರೇಖೆಯ ಕೆಳಗೆ ಇರುವ ಸಂಸಾರವನ್ನು ಮೇಲಕ್ಕೆ ಎತ್ತಬೇಕಾದರೆ ಏನು ಸೌಕರ್ಯವನ್ನು ಕೊಟ್ಟಿದ್ದೀರೋ ಅವರ ಬಗ್ಗೆ ಮಾಸ್ಟ ದೊಡ್ಡಮೇಟಿಯವರು ಹೇಳಿದ್ದಾರೆ. ಮತ್ತೆ ಐಆರ್‌ಡಿಪಿ ಬಗ್ಗೆ ಒಬ್ಬರು ಹೇಳಿದ್ದಾರೆ. "I don't like this I.R.D.P." Whether they like it or not, I don't like it. ಇಲ್ಲಿ ಕನ್ನಡಪ್ರಭಾದ ೧೨ನೇ ಜನವರಿ ೧೯೮೭ರ ಸಂಚಿಕೆಯಲ್ಲಿ "ಐಆರ್‌ಡಿಪಿ ಕಡು ಬಡವನಿಗೆ ಶಾಪ" ಎಂದು ಬರೆದಿದ್ದಾರೆ. They have invested into all the problems of the villagers. ಯಾರು ಯಾರು ಈ ಲೋನ್ ತೆಗೆದುಕೊಂಡಿದ್ದಾರೆ ಅವರು ಏನು ಉಪಯೋಗ ಮಾಡಿಕೊಂಡಿದ್ದಾರೆ? ಇದರಿಂದ ಔಟ್ ಪುಟ್ ಏನು? ಸ್ವಾಮಿ ಇವತ್ತು ಆ ರೈತರು ಎಷ್ಟು ಎಷ್ಟು ಸಾಲಗಾರರು ಆಗಿದ್ದಾರೆಂದರೆ, ಆ ಬಡವರು ಮೊದಲು ಲೋನ್ ತೆಗೆದುಕೊಳ್ಳಬೇಕಾದರೆ ಜಿಲ್ಲಾಪರಿಷತ್ ಸದಸ್ಯರು, ಎಂ.ಎಲ್.ಎ. ಯವರ ಹಿಂದೆ ತಿರುಗಿ ಬ್ಯಾಂಕಿನವರಿಂದ ಸಾಲವನ್ನು ತೆಗೆದುಕೊಳ್ಳಬೇಕಾಗಿದೆ. ಆತ ಮೊದಲೇ ಬಡವ. ಇವತ್ತು ಆತನಲ್ಲಿ ಇರುವ ೩ ಎಕರೆ, ೪ ಎಕರೆ ಭೂಮಿಯಲ್ಲಿ ಆ ಸಾಲದಿಂದ ಯಾವುದೇ ರೀತಿಯ ಉತ್ಪಾದನೆಯನ್ನು ಸಾಕಷ್ಟು ಮಾಡುವುದಕ್ಕೆ ಸಾಧ್ಯವಿಲ್ಲ ಒಂದು ವರ್ಷದ ನಂತರ ಲೋನ್ ತೆಗೆದುಕೊಂಡವನು ಅದನ್ನು ತುಂಬಬೇಕಾಗುತ್ತದೆ. ಇವತ್ತು ಆತ ಎಮ್ಮೆ ತೆಗೆದುಕೊಂಡಿರುತ್ತಾನೆ, ಕುರಿ ತೆಗೆದುಕೊಂಡಿರುತ್ತಾನೆ. ಆತನ ಒಂದು ಪರಿಸರದಲ್ಲಿ ಆತನ ಪಶುಗಳಿಗೆ ಬೇಕಾದಂತಹ, ಆ ಪಶುಗಳನ್ನು ರಕ್ಷಣೆ ಮಾಡಬೇಕಾದಂತಹ ಔಷಧಿಗಳು ಆತನಿಗೆ ಸಿಗುವುದಿಲ್ಲ. ಇದರಿಂದಾಗಿ ಅವುಗಳು ಸತ್ತುಹೋಗಿವೆ. ನಂತರ ಅವುಗಳ ಕಿವಿಗಳನ್ನು ತಂದು ಬ್ಯಾಂಕುಗಳ ಹತ್ತಿರ ಇಡುತ್ತಾರೆ. ಎಮ್ಮೆ ಕಿವಿಗೆ ಮುರಾವು ಹಾಕಿದ್ದೆವು, ಅದು ಸತ್ತುಹೋಗಿದೆ ನನ್ನ ಸಾಲ ಮಾಫಿ ಮಾಡಿಯೆಂದು ಕೇಳುತ್ತಾರೆ. ಅವನನ್ನು ಪುನಃ ಸಾಲಗಾರರನ್ನಾಗಿ ಮಾಡಿದ್ದೀರಿ. How can you do that? ಐಆರ್‌ಡಿಪಿ ಯೋಜನೆಯಲ್ಲಿ ಯಾರ್ಯಾರು ಸಾಲ ತೆಗೆದುಕೊಂಡಿದ್ದಾರೆ, ಅಲ್ಲೆಲ್ಲಾ ಅವರು ಸಾಲ ತೆಗೆದುಕೊಳ್ಳುವುದಕ್ಕೆ ಮುಂಚೆ ಸಾಲಗಾರರಾಗಿರಲಿಲ್ಲ. ಇವತ್ತು ಅವರು ಸಾಲಗಾರರಾಗಿ ಹಳ್ಳಿ ಬಿಟ್ಟು ಹೋಗುವ ಪರಿಸ್ಥಿತಿ ಬಂದಿದೆ. ಸಾಲ ಕೊಡುವಾಗ ವೈಜ್ಞಾನಿಕವಾಗಿ ಅನಾಲೀಸಸ್ ಮಾಡಿ ಸಾಲ ಕೊಟ್ಟರೆ ಆ ಜನರಿಗೆ ಅನುಕೂಲವಾಗುತ್ತದೆ, ಅದರಿಂದ ಉಪಯೋಗವಾಗುತ್ತದೆ. ಕಡು ಬಡವರು ಯಾರಿದ್ದಾರೆ ಅವರನ್ನು ಬಡತನ ರೇಖೆಯಿಂದ ಮೇಲೆ ತಂದಿದ್ದೇವೆ ಎನ್ನುವ ಬಗ್ಗೆ ಅಂಕಿಸಂಖ್ಯೆ ನಿಮ್ಮಲ್ಲಿ ಇಲ್ಲ. ನಮ್ಮ ಕ್ಷೇತ್ರದಲ್ಲಿ ಹೋದಾಗ ಈ ಸಮಸ್ಯೆ ಅನೇಕ ಸಾರಿ ಬರುತ್ತದೆ. ಸರ್ಕಾರದವರು ಒಳ್ಳೆಯ ಕೆಲಸಗಳನ್ನು ಮಾಡಬೇಕೆಂದು ಹೇಳಿ ಸೆಲ್ಫ್ ಎಂಪ್ಲಾಯಿಮೆಂಟ್ ಸ್ಕೀಮ್ ಜಾರಿಗೆ ತಂದಿದ್ದಾರೆ. ಸರ್ಕಾರದ ಉದ್ದೇಶವೇನೋ ಸರಿಯಾಗಿದೆ. ಸರ್ಕಾರ ಒಳ್ಳೆಯ ಕೆಲಸ ಮಾಡಬೇಕೆಂದು ಹೇಳಿದರೂ ಬ್ಯಾಂಕರು

ಗಳು ಸಾಲ ಕೊಡುವುದಿಲ್ಲ. ಜನಾರ್ಧನ ಪೂಜಾರಿಯವರು ಇರುವ ತನಕ ಬ್ಯಾಂಕ್‌ನವರು ಲೋನ್ ಕೊಡುತ್ತಿದ್ದರು. ಈಗ ಕೊಡುತ್ತಿಲ್ಲ, ಅದರ ಬಗ್ಗೆ ದಯಮಾಡಿ ನೋಡಿ. ನಮ್ಮ ಕರ್ನಾಟಕ ರಾಜ್ಯದವರೇ ಗ್ರಾಮೀಣಾಭಿವೃದ್ಧಿ ಮಂತ್ರಿಗಳಾಗಿ ಕೇಂದ್ರದಲ್ಲಿದ್ದಾರೆ, ಅವರಿಂದ ತಾವು ಎಷ್ಟರ ಮಟ್ಟಿಗೆ ಉಪಯೋಗ ಪಡೆದುಕೊಂಡಿದ್ದೀರಿ ಎಂಬುದನ್ನು ತಾವು ಹೇಳಬೇಕು. ತಾವು ರೂರಲ್ ಡೆವಲಪ್‌ಮೆಂಟ್‌ಗಾಗಿ ಯಾವ್ಯಾವ ಸಹಾಯ ಬೇಕೆಂದು ಪತ್ರ ಬರೆದಿದ್ದೀರಿ ಎಂಬುದನ್ನು ದಯಮಾಡಿ ಹೇಳಬೇಕು. ಕರ್ನಾಟಕ ರಾಜ್ಯದವರು ಕೇಂದ್ರದಲ್ಲಿರುವುದರಿಂದ ಯಾವ್ಯಾವ ಸೌಕರ್ಯ ಕೇಳಿದ್ದೀರಿ ಎಂಬುದನ್ನು ದಯಮಾಡಿ ಹೇಳಬೇಕು. ನಮ್ಮ ರಾಜ್ಯದವರು ನಮಗೆ ಆದಷ್ಟು ಮಟ್ಟಿಗೆ ಉಪಯೋಗ ಮಾಡುತ್ತಾರೆನ್ನುವ ಭರವಸೆ ನನಗಿದೆ, ತಾವು ದಯಮಾಡಿ ಅಲ್ಲಿಂದ ಉಪಯೋಗವನ್ನು ಪಡೆಯಬೇಕು. ನಾನು ಬಹಳ ವಿಸ್ತಾರವಾಗಿ ಮಾತನಾಡುವುದಿಲ್ಲ, ಕೆಲವು ವಿಷಯಗಳನ್ನು ಮಾತ್ರ ಹೇಳುತ್ತೇನೆ. ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಮ್ಮ ರಾಜ್ಯ ಸರ್ಕಾರದವರು ಪ್ರಯತ್ನ ಪಟ್ಟಿದ್ದಾರೆ. ಮಾನ್ಯ ನಜೀರ್‌ಸಾಬ್‌ರವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದರೆ ಬೋರ್‌ವೆಲ್‌ಗಳನ್ನು ಹಾಕಿದರೆ ನೀರಿನ ಸಮಸ್ಯೆ ಬಗೆಹರಿಯುವುದಿಲ್ಲ. ಎಲ್ಲಿ ನದಿ ದಂಡೆಗಳಿವೆ ಅಲ್ಲಿಯೇ ನೀರು ಬಿದ್ದಿಲ್ಲ. ಅಲ್ಲಿ ೧೦-೧೫ ಬೋರ್‌ವೆಲ್‌ಗಳನ್ನು ಹಾಕಿದರೂ ನೀರು ಬಿದ್ದಿಲ್ಲ. ಅದಕ್ಕಾಗಿ ಟೆಕ್ನಾಲಜಿ ಮಿಷಿನ್ ಬೇಕೆಂದು ಗುಲ್ಬರ್ಗಾಕ್ಕೆ ಕೇಂದ್ರದಿಂದ ೨ ಕೋಟಿ ರೂಪಾಯಿ ಮಂಜೂರು ಮಾಡಿದ್ದಾರೆ. ಇಂತಹ ತೊಂದರೆಯಿರತಕ್ಕ ಹಳ್ಳಿಗಳನ್ನು ಕಂಡುಹಿಡಿಯಬೇಕು, ಆದರೆ ಆ ಕೆಲಸ ಇನ್ನೂ ಕಾರ್ಯಗತವಾಗಿಲ್ಲ. ತಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚಿತವಾಗಿ ಅನೇಕ ಎನ್‌ಆರ್‌ಡಬ್ಲ್ಯೂಎಸ್ ಸ್ಕೀಮ್‌ಗಳನ್ನು ತೆಗೆದುಕೊಂಡಿದ್ದಾರೆ. ಆ ಎನ್‌ಆರ್‌ಡಬ್ಲ್ಯೂಎಸ್ ಸ್ಕೀಮ್‌ಗಳು ಇನ್ನೂ ಕಂಪ್ಲೀಟ್ ಆಗಿಲ್ಲ. ತಾವು ಅಧಿಕಾರಕ್ಕೆ ಬಂದ ಹೊಸದರಲ್ಲಿ ೧೯೮೩-೮೪, ೧೯೮೪-೮೫ರಲ್ಲಿ ಬಹಳ ತೀವ್ರಗತಿಯಲ್ಲಿ ಕೆಲಸ ಮಾಡಿದ್ದೀರಿ. ಹೊಸದಾಗಿ ಬಂದಂತಹ ಹುರುಪಿನಲ್ಲಿದ್ದು ಜನ ನಮ್ಮನ್ನು ಆರಿಸಿ ಕಳುಹಿಸಿದ್ದಾರೆ ಒಳ್ಳೆಯ ಕೆಲಸವನ್ನು ಜನರಿಗೆ ಮಾಡಬೇಕೆಂದು ಹುಬ್ಬಿ ಕೆಲಸ ಮಾಡಿದ್ದೀರಿ. ನಮ್ಮ ಕ್ಷೇತ್ರದಲ್ಲಿಯೂ ಸಾವಿರಾರು ನೂರಾರು ಕೆಲಸ ಮಾಡಿದ್ದಾರೆ. ಜನರಿಗೆ ಬೇಕಾದ ರಸ್ತೆ, ನೀರು, ದೀಪ ಇಂತಹ ಕೆಲಸವನ್ನು ತಾವು ಮಾಡಿದ್ದೀರಿ. ದುರ್ದೈವ ೧೯೮೫ರ ನಂತರ ಏತಕ್ಕೆ ಆ ಕೆಲಸವನ್ನು ಮಾಡಲಿಲ್ಲ? ಇದಕ್ಕೆ ಕಾರಣ ನನಗನ್ನಿಸುತ್ತದೆ ನಿಮ್ಮ ಹತ್ತಿರ ಹಣ ಇಲ್ಲ. ಬಜೆಟ್ ವಿಚಾರದಲ್ಲಿ ಹೇಳುವುದಾದರೆ ನಮ್ಮ ಗುಲ್ಬರ್ಗಾಕ್ಕೆ ೩೮ ಕೋಟಿ ರೂಪಾಯಿ ಬಜೆಟ್ ಮಾಡಿ ಕಳುಹಿಸಿದರೆ ನೀವು ಅದನ್ನು ೨೭ ಕೋಟಿ ರೂಪಾಯಿಗೆ ಇಳಿಸಿದ್ದೀರಿ. ಯಾವುದೇ ಬಜೆಟ್ ಅಲಾಟ್ ಮಾಡುವಾಗ ಆ ಭಾಗದ ಜನಸಂಖ್ಯೆ ಅಲ್ಲಿನ ಪರಿಸರ ಆ ಪ್ರದೇಶ ಹಿಂದುಳಿದಿದೆಯೋ ಹೇಗೆ ಎಂಬುದನ್ನು ನೋಡಿಕೊಂಡು ತಾವು ಬಜೆಟ್ ಅನ್ನು ತಯಾರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆದರೆ ದುರ್ದೈವ, ಆ ಪ್ರಕಾರ ಆಗಿಲ್ಲ. ಅಲ್ಲಿಯ ಜನ ಯಾವ ರೀತಿ ಇದ್ದಾರೆ, ಅಲ್ಲಿನ ರೈತ ಹಾಗೂ ರೈತ ಕಾರ್ಮಿಕರ ಸಮಸ್ಯೆಯನ್ನು ಕಣ್ಣಿನಿಂದ ನೋಡಿದಾಗ ಗೊತ್ತಾಗುತ್ತದೆ. ರೂರಲ್ ಡೆವಲಪ್‌ಮೆಂಟ್ ಹಾಗೂ ಪಂಚಾಯತಿ ರಾಜ್ ವ್ಯವಸ್ಥೆ ಜಾರಿಗೆ ಬಂದಮೇಲೆ ಎಷ್ಟರಮಟ್ಟಿಗೆ ಉಪಯೋಗವಾಗಿದೆ ಅಂದರೆ ಕಮಟಗಿ ಹಾಗೂ ಸುಳಗಿಯ ಎನ್‌ಆರ್‌ಡಬ್ಲ್ಯೂಎಸ್ ಸ್ಕೀಮ್ ೧೯೮೨ರ ಬಜೆಟ್‌ನಲ್ಲಿದೆ. ಅದನ್ನು ಬಜೆಟ್‌ನಲ್ಲಿ ಹಾಕಿದರೂ ಇವತ್ತು ೧೯೮೮ನೇ ಇಸವಿ ಬಂದರೂ ಕಮಟಗಿ-ಸುಳಗಿ ಹಳ್ಳಿಗೆ ಕೊಡಬೇಕಾದ ವಾಟರ್‌ಸಪ್ಲೈ ಪ್ಲಾಸ್ಟಿಕ್ ಪೈಪನ್ನು ೧೯೮೪ರಲ್ಲಿ ಹಾಕಿದ್ದಾರೆ. ಅವುಗಳೆಲ್ಲಾ ಇವತ್ತು ಒಡೆದುಹೋಗಿವೆ. ವಾಟರ್ ಟ್ಯಾಂಕನ್ನು ರೆಡಿ ಮಾಡದೇ ಪೈಪನ್ನು ಏತಕ್ಕೆ ಹಾಕಿದ್ದಾರೆ? They wanted to flow water. Unfortunately all the pipes have been broken. Who is responsible for it? ತಮಗೆ ಯಾರೂ ಕೊಡಿ ಯೆಂದು ಹೇಳಲಿಲ್ಲ, ಟ್ಯಾಂಕ್ ರೆಡಿಯಾಗದೆ, ಪೈಪುಗಳನ್ನು ಏತಕ್ಕೆ ಹಾಕಿದರು?

೫-೩೦ ಪಿ.ಎಂ.

ನೀವು ಕೆಲಸದ ಕಂಟ್ರಾಕ್ಟ್ ಕೊಟ್ಟುಬಿಡುತ್ತೀರಿ. ಅವರು ಆರು ಫೀಟು ಹೊಡೆಯುತ್ತಾರೆ ಮತ್ತು ಪೈಪ್ ಹಾಕಿಬಿಡುತ್ತಾರೆ. ಅದಕ್ಕೆಲ್ಲಾ ನಾರ್ಮ್ಸ್ ಇದೆ. ಎಷ್ಟು ಡೀಪ್ ಆಗಿ ಹೊಡೆಯಬೇಕು, ಪೈಪ್ ಹಾಕಬೇಕು ಎಂದು ನಾರ್ಮ್ಸ್ ಇದೆ. ಇಂಜಿನಿಯರಿಂಗ್ ಟೆಕ್ನಿಕ್ ಇದೆ. ಅದನ್ನು ಯಾರೂ ಕೂಡ ನೋಡುವುದಿಲ್ಲ. ಸರಡಗಿ ಅಂತ ಇದೆ. ಅದೂ ಹಾಳಾಯಿತು. ಮಾನ್ಯ ನಜೀರ್‌ಸಾಬ್ ಅವರು ೧೯೮೭ರಲ್ಲಿ ಆದಷ್ಟು ಬೇಗ ಮಾಡಿಕೊಡುತ್ತೇವೆ ಎಂದು ಇದೇ ಸದನದಲ್ಲಿ ಹೇಳಿದ್ದರು. ಆದರೆ ಇದು ಇನ್ನೂ ಕೆಲಸ ಮುಗಿದಿಲ್ಲ. ನಂದಿಕುಂಡೂರ್‌ನಲ್ಲಿ ಕೂಡ ಹಾಗೆಯೇ ಇದೆ. ಆಮೇಲೆ ವಾಡಿ ಬಗ್ಗೆ ೧೯೮೩ರ ಮಾರ್ಚ್‌ನಲ್ಲಿ ನಾನು ಇದೇ ಸದನದಲ್ಲಿ ಅದನ್ನು ಎತ್ತಿದ್ದೆ. ಹೊಸದಾಗಿ ಆರಿಸಿಬಂದ ಹುರುಪಿನಿಂದ ನಾನು ಕೇಳಿದ್ದೆ. ೨೫ ಸಾವಿರ ಜನಸಂಖ್ಯೆ ಇರುವಂಥ ಊರು ''ವಾಡಿ''. ಆಗ ಅಲ್ಲಿ

ಟೌನ್ ಪಂಚಾಯಿತ್ತಿ ಇತ್ತು. ಆಗ ಅವರು ಈ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಆಗದ ಹಾಗೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದರು. ಟ್ಯಾಂಕ್ ನಿರ್ಮಾಣ ಆಗಿದೆ. ಆದರೆ ಪೈಪುಗಳನ್ನು ಹಾಕಿಲ್ಲ. ಆ ಟ್ಯಾಂಕಿನಲ್ಲಿ ಡಿಫೆಕ್ಟ್ ಇದೆ ಎನ್ನುವ ವದಂತಿ ಇದೆ. ಒಂದು ವೇಳೆ ಟ್ಯಾಂಕ್‌ನಲ್ಲಿ ನೀರು ತುಂಬಿದರೆ ಅದು ಬೀಳುತ್ತದೆ ಎನ್ನುತಕ್ಕ ಭಯ ಕೂಡ ಇದೆ. ಸುಮಾರು ಎರಡು–ಮೂರು ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟಿದಂಥ ಟ್ಯಾಂಕಿಗೆ ಆರು ವರ್ಷವಾದರೂ ನೀರು ತುಂಬಲಿಕ್ಕೆ ಆಗಿಲ್ಲ. ಯಾರು ಇದಕ್ಕೆ ಜವಾಬ್ದಾರರು? ಈ ಭಯ ಇರುವುದರಿಂದ ಅದಕ್ಕೆ ನೀರು ತುಂಬಿದ್ದಿಲ್ಲ. ದಂಡತ್ತಿಯಲ್ಲಿ ಇದೇ ಪ್ರಕಾರವಾಗಿ ಕಟ್ಟಿದ ಟ್ಯಾಂಕ್ ಬಿದ್ದು ಹೋಯಿತು. ತಮಗೆ ಇದು ಗೊತ್ತಿದೆ. ಇದೇ ಸದನ ದಲ್ಲಿ ಈ ಬಗ್ಗೆ ಮಾನ್ಯ ವಿಶ್ವನಾಥರೆಡ್ಡಿ ಅವರು ಮಾತನಾಡಿದ್ದರು. ಆಮೇಲೆ ಜಿಲ್ಲಾ ಪರಿಷತ್ತು ಆದಮೇಲೆ ಕೆಲವು ಟೆಕ್ನಾಲಜಿ ಮಿಶನ್‌ದೊಳಗೆ ೧೯೯೦ ರೊಳಗೆ ನೀರನ್ನು ಪ್ರತಿಯೊಂದು ಹಳ್ಳಿಗೆ ಕೊಡುವುದಾಗಿ ಶ್ರೀ ನಜೀರ್‌ಸಾಬ್ ಅವರು ಹೇಳಿದ್ದರು. ೧೯೯೦ ರೊಳಗೆ ಇಡೀ ರಾಜ್ಯದ ಪ್ರತಿಯೊಂದು ಹಳ್ಳಿಗೂ ನೀರು ಕೊಡುತ್ತೇವೆ ಎನ್ನತಕ್ಕಂಥ ಕಮಿಟ್‌ಮೆಂಟ್ ಇದೆ ತಮ್ಮದು. ನಿಮ್ಮ ಸ್ಟೇಟ್‌ಮೆಂಟ್‌ಗಳನ್ನು ನೋಡಿ. ಜನತೆಯನ್ನು ಸಮಾಧಾನಪಡಿಸುವುದಕ್ಕಾಗಿ ಸ್ಟೇಟ್‌ಮೆಂಟ್ ಕೊಟ್ಟಿದ್ದೀರೋ ಹೇಗೆ? ಜನರನ್ನು ಸಮಾಧಾನ ಮಾಡುವುದಕ್ಕಾಗಿ ಅಲ್ಲ ಸ್ಟೇಟ್‌ಮೆಂಟ್‌ನ್ನು ಕೊಡುವುದು. ಒಂದು ಸಲ ಸ್ಟೇಟ್‌ಮೆಂಟ್ ಮಾಡಿದ ಮೇಲೆ ಅದಕ್ಕೆ ನೀವು ಬದ್ಧವಾಗಿರಬೇಕು. ಏಕೆಂದರೆ ನೀವು ರಾಜ್ಯಕ್ಕೆ ಜವಾಬ್ದಾರರಾಗಿದ್ದೀರಿ. ಆ ಕಮಿಟ್‌ಮೆಂಟ್‌ನ್ನು ೧೯೯೦ ರೊಳಗೆ ಮುಗಿಸುವುದಕ್ಕೆ ಸಾಧ್ಯವಿರುವಂಥ ಪ್ಲಾನ್‌ನ್ನು ಈಗಲೇ ಮಾಡಿಕೊಳ್ಳಬೇಕು. ಎರಡನೆಯದು, ಈ ಜಿಲ್ಲಾಪರಿಷತ್ತು ಮಸೂದೆಯಲ್ಲಿ ನಾನು ಮತ್ತು ಖರ್ಗೆ ಸಾಹೇಬರು ಒಂದು ಸಲ ಈ ರಿಜರ್ವೇಶನ್ ಇದ್ದಾಗ ಒಂದು ಅಮೆಂಡ್‌ಮೆಂಟ್‌ನ್ನು ತೆಗೆದುಕೊಂಡು ಬಂದೆವು. ಏನು ಶೆಡ್ಯೂಲ್ಡ್ ಕಾಸ್ಟ್‌ಗೆ ರೆಪ್ರಸೆಂಟೇಶನ್ ಅನ್ನು ಕೊಟ್ಟಿದ್ದೀರಿ, ಹೆಣ್ಣು ಮಕ್ಕಳಿಗೆ ೨೫ ಪರ್ಸೆಂಟ್ ಮತ್ತು ಎಸ್.ಸಿ.ಗೆ ೧೮ ಪರ್ಸೆಂಟ್ ಅಂತ. ಆದರೆ ತಾವು ೧೮ ಪರ್ಸೆಂಟ್‌ನಲ್ಲಿ ಎಸ್‌ಸಿ ಮತ್ತು ಎಸ್‌ಟಿ ಎಷ್ಟು ಅಂತ ಹೇಳಿರಲಿಲ್ಲ. ಅದನ್ನು ಸಪರೇಟ್ ಮಾಡಿರಲಿಲ್ಲ. ಅದರ ಪ್ರಕಾರ ೧೫ ಪರ್ಸೆಂಟ್ ಶೆಡ್ಯೂಲ್ಡ್ ಕ್ಯಾಸ್ಟ್‌ಗೆ ಇದೆ ಮತ್ತು ೩ ಪರ್ಸೆಂಟ್ ಶೆಡ್ಯೂಲ್ಡ್ ಟ್ರೈಬ್ಸ್‌ಗೆ ಇದೆ. ನೀವು ಜಿಲ್ಲಾಪರಿಷತ್ ಮಸೂದೆಯನ್ನು ತೆಗೆದುಕೊಂಡು ಬಂದಾಗ ಅದನ್ನು ಬೇರೆ ಬೇರೆಯಾಗಿ ತೋರಿಸಬೇಕಾಗಿತ್ತು. ತಾವು ಇದರ ಬಗ್ಗೆ ಗಮನಕೊಡಬೇಕು. ನಂತರ ಜಿಲ್ಲಾಪರಿಷತ್ತಿನ ಅಧ್ಯಕ್ಷರನ್ನು ನೇಮಕ ಮಾಡು ವಾಗ ನಾವು ಈ ೧೯ ಜಿಲ್ಲೆಗಳಲ್ಲಿ ಎಸ್.ಸಿ.ಗೆ ಒಂದು ಅಧ್ಯಕ್ಷ ಸ್ಥಾನವನ್ನು ಕೊಡಬೇಕೆಂದು ಒಂದು ರಿಕ್ವೆಸ್ಟ್ ಮಾಡಿದ್ದೆವು. ಶ್ರೀ ಖರ್ಗೆಯವರು ಅದನ್ನು ಮೂವ್ ಮಾಡಿದ್ದರು. ಶ್ರೀ ರಾಮಕೃಷ್ಣ ಹೆಗಡೆಯವರು ನಿಮ್ಮ ಸರ್ಕಾರದವರು ಎಲ್ಲರೂ ಕೂಡ ಆಗ ಹೀಗೆ ಮಾಡುವುದಕ್ಕೆ ಬರುವುದಿಲ್ಲ, ಒಂದು ಪ್ರಾಕ್ಟೀಸ್ ಮಾಡೋಣ. ಏನೆಂದರೆ ಆದಷ್ಟು ಮಟ್ಟಿಗೆ ಕೆಲವು ಜಿಲ್ಲೆಗಳಲ್ಲಿ ಉದಾಹರಣೆಗೆ ಗುಲ್ಬರ್ಗದಲ್ಲಿ ಒಂದು ವರ್ಷ ಮಾಡಿದರೆ ಮತ್ತೊಮ್ಮೆ ಬೇರೊಂದು ಕಡೆಗೆ ಹೀಗೆ ಮಾಡೋಣ ಎಂದು ಹೇಳಿದ್ದೀರಿ. ಆದರೆ ಹಾಸನ ಜಿಲ್ಲೆಯನ್ನು ಒಂದು ಬಿಟ್ಟರೆ ನನಗನ್ನಿಸಿದ ಮಟ್ಟಿಗೆ ಬೇರೆ ಯಾವ ಡಿಸ್ಟ್ರಿಕ್ಟ್‌ಗೂ ಈ ಛಾನ್ಸನ್ನು ಕೊಟ್ಟಿದ್ದೀರಾ? ಇದನ್ನು ದಯವಿಟ್ಟು ತಾವು ಮಾಡಬೇಕು. ಅದೇ ಪ್ರಕಾರ ಮಂಡಲ ಪಂಚಾಯತಿ ಅಧ್ಯಕ್ಷರು ಕೂಡ, ನಂತರ ಲ್ಯಾಂಡ್ ಆರ್ಮಿ ಬಗ್ಗೆ ಹೇಳಬೇಕೆಂದರೆ ಅವರಿಗೆ ಅನೇಕ ಲ್ಯಾಮೆಟರೀಸ್ ಕೆಲಸ ಕೊಡುತ್ತೇವೆ ಎಂದು ಹೇಳಿದ್ದೀರಿ. ಅಧ್ಯಕ್ಷರೇ, ಯಾವುದನ್ನು ಹೇಳಬೇಕು ಯಾವುದನ್ನು ಬಿಡಬೇಕು ಎಂದು ಗೊತ್ತಾಗುತ್ತಿಲ್ಲ, ತಾವು ಬೇರೆ ಬೆಲ್ ಹೊಡೆಯು ತ್ತಿದ್ದೀರಿ, ತಾವು ಗಂಟೆ ಬಡಿದ ಕೂಡಲೇ ನಮ್ಮ ತಲೆ ತಿಂದು ಹೋಗಿ ಬಿಡುತ್ತದೆ.

ಅಧ್ಯಕ್ಷರು.—ಆದರೆ ಇದನ್ನು ಎಷ್ಟು ಹೊತ್ತಿಗೆ ಮುಗಿಸುತ್ತೀರೋ ಎಂಬುದು ನನ್ನ ಚಿಂತೆ.

ಶ್ರೀ ಕೆ. ಬಿ. ಶಾಣಪ್ಪ.—ಇನ್ನು ಲ್ಯಾಂಡ್ ಆರ್ಮಿ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಇದನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಕಾರ್ಯರೂಪಕ್ಕೆ ತಂದಿದ್ದಾರೆ. ಲ್ಯಾಂಡ್ ಆರ್ಮಿ ಅನ್ನು ಸುಮಾರು ೨೫ ಲಕ್ಷರೂಪಾಯಿಗಳಿಂದ ಪ್ರಾರಂಭ ಮಾಡಿದ್ದು, ಇವತ್ತು ೭೦ಕೋಟಿ ರೂಪಾಯಿ ವರೆಗೂ ಪ್ಲಾನ್ ಹಾಕಿದ್ದಾರೆ ಅವರ ಇತರಕೆಲಸ ಏನು? ನನಗನಿಸಿದ ಮಟ್ಟಿಗೆ ಪಿ.ಡಬ್ಲ್ಯು.ಡಿ. ನ ಕೆಲಸ ಗಳನ್ನು ಇವರಿಗೆ ಶಿಫ್ಟ್ ಮಾಡಿದ್ದಾರೆಂಬ ನನಗನಿಸುತ್ತದೆ. ಪಿ.ಡಬ್ಲ್ಯು.ಡಿ. ಸಂಪರ್ಕ ಮತ್ತು ಕಟ್ಟಡ ಗಳನ್ನು ವಿಭಾಗದ ಕೆಲಸಗಳಾದ ಜನತಾ ಮನೆಗಳು. ಹುಡ್ಕೋ ಮನೆಗಳು, ಸಣ್ಣ ಸಣ್ಣ ಕೆರೆಗಳು, ಗೋ ಕಟ್ಟೆಗಳನ್ನು ಕಟ್ಟುವುದು, ಬಿಲ್ಡಿಂಗ್ ಕಟ್ಟುವುದು ಇದಕ್ಕಾಗಿ ಒಂದು ಡಿಪಾರ್ಟ್‌ಮೆಂಟ್ ಇತ್ತು. ಇದಕ್ಕೆ ಈಗ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಎಂದು ಮಾಡಿ, ಅಲ್ಲಿದ್ದಂತಹ ಕೆಲವು ಕೆಲಸಗಳನ್ನು ಈ ಕಡೆಗೆ ಪಾಸ್ ಮಾಡಿದ್ದಾರೆಂದು ನನಗನಿಸುತ್ತದೆ. ಇಲ್ಲಿ, ಇವರ ವರದಿ ನೋಡಿದರೆ ಬಹಳ ಸಮಾಧಾನಕರ ವಾಗಿದೆ. ೧೯೮೭-೮೮ರಲ್ಲಿ ನೋಡಿದಾಗ ಕೆಲಸದ ಕ್ವಾಲಿಟಿ ಬಹಳ ಚೆನ್ನಾಗಿತ್ತು. ಈಗ ಮಾನ್ಯ

ಗಾಂತಾ ಅವರು ಇಲ್ಲ. ಅವರೂ ಮತ್ತು ನಾನು ತ್ಯಾಡತಗನೂರಿನಲ್ಲಿ ಒಂದು ಸಮಾರಂಭಕ್ಕೆ ಹೋಗಿದ್ದೆವು. ಅಲ್ಲಿ ೧೦–೧೨ ಮನೆಗಳನ್ನು ಕಟ್ಟಿದ್ದರು. ಮತ್ತೆ ಆಳಂದ್ ತಾಲ್ಲೂಕಿನ ದಂಗಾಪುರದಲ್ಲಿ ಕೆಲವು ಮನೆಗಳನ್ನು ಕಟ್ಟಿದ್ದರು. ಈ ಮನೆಗಳು ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ನವರು ಕಟ್ಟಿದ್ದು, ಸರಿಯಾದ ಕ್ರಮದಲ್ಲಿ ಈ ಮನೆಗಳು ಇರಲಿಲ್ಲ. ಇದಕ್ಕೆ ಕಾರಣ ಏನು ? ಮೊದಲು ಪಿ.ಡಬ್ಲ್ಯು.ಡಿ.ನವರು ಈ ಕೆಲಸ ಮಾಡುತ್ತಿದ್ದಾಗ, ಅವರಿಗೆ ಎಷ್ಟು ಹಣ ಕೊಡುತ್ತಿದ್ದರೋ, ಇವರಿಗೂ ಕೂಡ ಈಗ ಅಷ್ಟೇ ಹಣ ಕೊಡುತ್ತಿದ್ದಾರೆ. ಆದರೆ ಈ ಗ್ರಾಮಗಳಲ್ಲಿ ಈ ಏಜೆನ್ಸಿಯವರು ಮಾಡಿದ ಕೆಲಸ ಬಹಳ ಕಳಪೆ ಮಟ್ಟದಲ್ಲಿತ್ತು, ಈ ಬಗ್ಗೆ ಕೇಳಿದಾಗ ಈ ಮನೆಗಳನ್ನು ರಿಪೇರಿ ಮಾಡುತ್ತೇವೆಂದು ಹೇಳಿದ್ದಾರೆ, ಆದರೆ ಈಗಲೂ ಆ ಕೆಲಸ ಮುಗಿದಿಲ್ಲ. ಇದರಿಂದ, ಆದಿನ ಕಟ್ಟಡಗಳ ಪ್ರಾರಂಭೋತ್ಸವ ಸಮಾರಂಭವನ್ನು ಮುಂದೂಡಲಾಗಿದೆ. ಆದ್ದರಿಂದ, ಇದೇನೂ ಒಳ್ಳೆಯ ಲಕ್ಷಣ ಅಲ್ಲ. ಮೊದಲು ಹೊಸದಾಗಿ ಈ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದಾಗ ಚೆನ್ನಾಗಿ ಕೆಲಸ ಮಾಡುತ್ತಿದ್ದರು, ಈಗ ಎಲ್ಲಿಯೂ ಚೆನ್ನಾಗಿ ಕೆಲಸಗಳು ಆಗುತ್ತಿಲ್ಲ. ಪಿ.ಡ.ಬ್ಲ್ಯು.ಡಿ. ಬಗ್ಗೆ ನಾನು ಹೇಳಿದ್ದೇನೆ. ಮಾನ್ಯ ಚಂದ್ರಶೇಖರ್ ಅವರು ಕೂಡ ಇಲ್ಲಿಯೇ ಇದ್ದಾರೆ. "On 9th August 1986, the Managing Director of the Karnataka Land Army Corporation has described the Public Works Department as its enemy No. 1. Terming the Block Development Officers as enemy No. 2, the land Army Chief Brigadier Sri G.M.S. Mallappa said this.' ಇದು ನಾನು ಕಾಮೆಂಟರಿ ಮಾಡಿದ್ದಲ್ಲ. ಈ ಕಾಮೆಂಟ್ ೨–೩ ವರ್ಷಗಳ ಮೊದಲೇ ಇಲ್ಲಿ ಬಂದಿದೆ. ಲ್ಯಾಂಡ್ ಆರ್ಮಿಯವರೂ ಕೂಡ ೨೫ ರಿಂದ ೫೦ ಪರ್ಸೆಂಟ್ ವರೆಗೆ ತಿನ್ನುತ್ತಾರೆ. ಇದರಲ್ಲಿ ಇಂಪ್ಲಿಮೆಂಟರಿ ಮಿಷನ್ ಇಲ್ಲ, ಕೆಲವು ಜೂನಿಯರ್ ಇಂಜನಿಯರ್ಸ್ ಇದ್ದಾರೆ, ಡೈರೆಕ್ಟರ್ಸ್ ಇದ್ದಾರೆ, ಈ ರೀತಿ ಕೆಲವೇ ಇದ್ದು ಬಂದಂತಹ ಹಣ ಕಂಟ್ರಾಕ್ಟರಿಗೆ ಕೊಡಬೇಕಾಗುತ್ತದೆ. ಈ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಮೊದಮೊದಲು ಚೆನ್ನಾಗಿ ಕೆಲಸ ಮಾಡುತ್ತಿತ್ತು. ಇತ್ತೀಚೆಗೆ ಇದರ ಕೆಲಸ ಕಳಪೆ ಎಂದು ಕಂಡು ಬಂದುದರಿಂದ, ನಾವು ಜಿಲ್ಲಾಪರಿಷತ್ ಸಭೆಯಲ್ಲಿ ಒಂದು ರೆಸೊಲ್ಯೂಷನ್ ಪಾಸ್ ಮಾಡಿದ್ದೇವೆ. ಏನೆಂದರೆ ಯಾವುದೇ ಕೆಲಸವನ್ನು ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ನವರಿಗೆ ಕೊಡುವುದಿಲ್ಲವೆಂದು ಮಾಡಿದ್ದೇವೆ. ಏಕೆಂದರೆ ಪಿ.ಡಬ್ಲ್ಯು.ಡಿ ಯವರಿಗೆ ಕೆಲಸ ಕೊಟ್ಟಾಗ, ಬಹಳ ನಿಧಾನವಾಗಿ ೨೫ ತಿಂಗಳ ನಂತರ ಅವರು ಬಿಲ್ಲನ್ನು ಕೊಡುತ್ತಾರೆ. ಆದರೆ ಲ್ಯಾಂಡ್ ಆರ್ಮಿಯವರು ಹಾಗಲ್ಲ, ಇವರಿಗೆ ಮೊದಲೇ ದುಡ್ಡು ಕೊಡಬೇಕು, ಇವರಿಗೆ ಸುಮಾರು ೨೦ ಸಾವಿರದ ಕೆಲಸ ಕೊಟ್ಟರೆ, ಅದರಲ್ಲಿ ೮೦ ಪರ್ಸೆಂಟ್ ಹಣವನ್ನು ಇವರಿಗೆ ಡಿಪಾಸಿಟ್ ಮಾಡಬೇಕು. ಅನಂತರ ೪ ತಿಂಗಳ ನಂತರ ಇವರು ಕೆಲಸ ಪ್ರಾರಂಭ ಮಾಡುತ್ತಾರೆ. ಪಿ.ಡಬ್ಲ್ಯು.ಡಿ. ನವರಿಗೆ ಇದೇ ಪ್ರಕಾರ ಸೌಲಭ್ಯ ಕೊಟ್ಟರೆ ಅವರೂ ಇನ್ನೂ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಆದರೆ, ಇವರಿಗೆ, ಈ ಸೌಲಭ್ಯ, ಸವಲತ್ತು ಕೊಡುವುದಿಲ್ಲ. ಇವತ್ತು ಲ್ಯಾಂಡ್ ಆರ್ಮಿ ಸುಮಾರು ೨೫ ಲಕ್ಷದಷ್ಟು ಲಾಭ ಮಾಡಿದೆ. ಇದನ್ನು ಯಾರ ಕಾಸ್ಟ್ ಮೇಲೆ ಮಾಡಿದ್ದೀರಿ. ೧೯೮೮–೮೯ಕ್ಕೆ ಏನು ೬೦ ಕೋಟಿ ರೂಪಾಯಿಗಳ ಪ್ಲಾನ್ ಹಾಕಿದ್ದೀರಿ. ಇದರ ಕ್ವಾಲಿಟಿಯಲ್ಲಿ ಏನಾದರೂ ಹೆಚ್ಚು ಕಡಿಮೆ ಆಯಿತು ಎಂದರೆ, ಯಾವುದೇ ಜಿಲ್ಲಾ ಪರಿಷತ್ ಮೆಂಬರ್ ಆಗಲೀ, ಯಾವುದೇ ಶಾಸಕರಾಗಲೀ, ಈ ಡಿಪಾರ್ಟ್‌ಮೆಂಟ್‌ನ್ನು ಮುಚ್ಚಬೇಕೆಂದು ನಾವು ಹೇಳಬೇಕಾಗುತ್ತದೆ. We have to tell like that. ಒಳ್ಳೆಯ ಕೆಲಸ ಮಾಡಿದರೆ we appreciate and we praise you. We have praised you on the floor of this House. magnificent ವರ್ಕ್ ಮಾಡಿದ್ದಾರೆ. ಎಂದು ಹೇಳಿದ್ದೇವೆ. ಆದರೆ ಈಗ ಅವರ ಚಾಳಿ ಇವರಿಗೂ ಬಿದ್ದಿದೆ. ಆ ಚಾಳಿ ಇವರಿಗೆ ಹಚ್ಚಬೇಡಿ. ಹಿಂದೆ ಯಾವ ರೀತಿ ಇತ್ತು, ಅದನ್ನು ಕೀಪ್ ಅಪ್ ಮಾಡಿಕೊಳ್ಳುವುದಕ್ಕೆ ಹೇಳಿ. You please see that the quality is improved and the State will defintiely support the Land Army. ಇಷ್ಟು ಹೇಳಿ ಇದುವರೆಗೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಉಸ್ತಾದ್‌ರವರೇ ನೀವು ಹತ್ತು ನಿಮಿಷದಲ್ಲಿ ಮುಗಿಸಬೇಕು.

†ಶ್ರೀ ಮೆಹಬೂಬ್ ಪಟೇಲ್ ಲಾದ್ಲೆಪಟೇಲ್ ಉಸ್ತಾದ್ (ಬಿಜಾಪುರ) —ಸನ್ಮಾನ್ಯ ಅಧ್ಯಕ್ಷರೇ, ಈ ರೂರಲ್ ಡೆವೆಲಪ್‌ಮೆಂಟ್ ಮತ್ತು ಪಂಚಾಯತ್‌ರಾಜ್ ಡಿಪಾರ್ಟ್‌ಮೆಂಟ್ ಬಗ್ಗೆ ಕೆಲವೊಂದು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಿಷಯ ಹೇಳುವುದಕ್ಕೆ ಇಚ್ಛೆಪಡುತ್ತೇನೆ What is the main object of this Department of Rural Development & Panchayati Raj ? The main object is social justice. ಎಂದು ನಾವು ನೋಡಲಾಗಿ we, the rural based Indians ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಸೋಷಿಯಲ್ ಜಸ್ಟೀಸ್ ಎಂದರೆ ಏನು ಎಂದರೆ, ಬಡವರು ಕಡುಬಡವರು ಡೌನ್‌ಟ್ರಾಡನ್ ಪೀಪಲ್ ಇವರನ್ನು ಬಡತನದ ರೇಖೆಯಿಂದ ಮೇಲಕ್ಕೆ ತರಬೇಕು, ಅವರ ಪ್ರಾಬ್ಲಂಸ್ ಸಾಲ್ವ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂಬುದು. ಅಂದಬಳಿಕ ಸೋಶಿಯಲ್ ಜಸ್ಟೀಸ್‌ನ್ನು ಈ ನಮ್ಮ ದೇಶಕ್ಕೆ ಕೊಟ್ಟಹಾಗೆ ಆಗುತ್ತದೆಂದು ತಿಳಿದು ಭಾರತ ಸರಕಾರದವರು ಐಆರ್‌ಡಿಪಿ. ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ, ಈ ಎಲ್ಲಾ ಪ್ರೋಗ್ರಾಂಗಳನ್ನು ಇಂಪ್ಲಿಮೆಂಟೇಷನ್ ಮಾಡುವುದಕ್ಕೆ ಜಾರಿಯಲ್ಲಿ ತಂದಿದ್ದಾಗಿದೆ. ಇವರ ಪ್ರಾಬ್ಲಂಸ್ ಏನು ಅಂದರೆ, ಬಹಳ ಅಂದರೆ ಹಳ್ಳಿಗಳಲ್ಲಿ ಇರತಕ್ಕಂಥ ಜನರಿಗೆ ಕುಡಿಯುವುದಕ್ಕೆ ನೀರು, ಇರಲಿಕ್ಕೆ ಮನೆ ಮತ್ತು ಆ ಮನೆಯಲ್ಲಿ ಒಂದು ಎಲೆಕ್ಟ್ರಿಸಿಟಿ ಬಲ್ಬ್ ಮತ್ತು ಕಮ್ಯೂನಿಕೇಷನ್ ಇವನ್ನೆಲ್ಲಾ ಕಲ್ಪಿಸಿ ಕೊಡುವುದು ಇದರ ಒಂದು ಮೂಲ ಉದ್ದೇಶ. ಇವೆಲ್ಲಾ ಮಾಡಿದನಂತರ ನಾವು ಸೋಶಿಯಲ್ ಜಸ್ಟೀಸ್‌ನ್ನು ಜನರಿಗೆ ಕೊಟ್ಟಹಾಗೆ ಆಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಜೆಡ್.ಪಿ. ಮತ್ತು ಮಂಡಲ್ ಪಂಚಾಯತ್ ಕಾನ್‌ಸ್ಟಿಟ್ಯೂಟ್ ಆದನಂತರ, ಇವುಗಳು ಹೊಸದಾಗಿ ರಚನೆಯಾದನಂತರ ನಮ್ಮ ಗತಿ ಏನಾಗಿದೆ ಎಂಬುದನ್ನು ನೋಡಬೇಕಾಗಿದೆ. ನಮ್ಮ ರಾಜ್ಯ ಸರಕಾರದವರು ನಾವು ಮಹಾತ್ಮಾಗಾಂಧೀಜಿಯವರ ಕನಸನ್ನು ನನಸಾಗಿ ಮಾಡಿದ್ದೇವೆ ಎಂದು ಹೇಳುತ್ತಾರೆ- ಆದರೆ ಮಹಾತ್ಮಾಜೀಯವರು ಹೇಳಿದ್ದು ಮಂಡಲ್ ಪಂಚಾಯತ್ ರಚನೆಯೇ ಸ್ವರಾಜ್ಯ ಅಲ್ಲ. ಗಾಂಧೀಜಿಯವರು ಗ್ರಾಮಸ್ವರಾಜ, ಗ್ರಾಮ ಪಂಚಾಯತಿ ಎಂದು ಹೇಳಿದ್ದಾರೆಯೇ ಹೊರತಾಗಿ ಮಂಡಲ್ ಪಂಚಾಯತ್ ಎಂದು ಅವರು ಹೇಳಲಿಲ್ಲ. ಇವರು ನಮ್ಮ ರಾಜ್ಯಕ್ಕೆ ಕೊಟ್ಟಂಥ ಕೊಡುಗೆ ಏನೆಂದರೆ, ಈ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದನಂತರ ನಮ್ಮ ರಾಜ್ಯದಲ್ಲಿ ೧೪೦೦ ಕೊಲೆಗಳು ಆಯಿತು. ಅಧ್ಯಕ್ಷರೇ ತಮಗೆ ಗೊತ್ತಿರುವಂತೆ ಇವತ್ತು ಹಳ್ಳಿಯಲ್ಲಿ ಮಂಡಲ್ ಪಂಚಾಯತ್ ಅಸ್ತಿತ್ವಕ್ಕೆ ಬಂದ ನಂತರ ಏನು ಪರಿಸ್ಥಿತಿ ಆಗಿದೆ ಎಂದರೆ ಅವರ ಮನೆ ಲಗ್ನಕ್ಕೆ ನಾವು ಹೋಗುವಹಾಗೆ ಇಲ್ಲ, ನಮ್ಮ ಮನೆಯಲ್ಲಿ ಯಾರಾದರೂ ಸತ್ತರೆ ಅವರು ಬರುವಹಾಗೆ ಇಲ್ಲ. ಬರೇ ಜಗಳ. ಅದರ ಸಲುವಾಗಿ ನಮ್ಮ ಮಾಜಿ ಮುಖ್ಯಮಂತ್ರಿಗಳಾದ ನಮ್ಮ ವೀರೇಂದ್ರಪಾಟೀಲ್ ಅವರು ಏನು ಹೇಳಿದ್ದರು ಎಂದರೆ ಕಾರ್ಪೊರೇಷನ್ ಎಲೆಕ್ಷನ್ ಹಿಡಿದು ಮುನಿಸಿಪಾಲಿಟಿ ಎಲೆಕ್ಷನ್‌ವರೆಗೆ — ಮಂಡಲ್ ಪಂಚಾಯತ್, ಗ್ರಾಮಪಂಚಾಯತ್ ಅದು ದೂರನೇ ಉಳಿತು — ಈ ಮಟ್ಟಕ್ಕೆ ಪಾರ್ಟಿಬೈಸ್ ಎಲೆಕ್ಷನ್ ಮಾಡ ಬಾರದು ಎಂದು ಹೇಳಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಪರಿಸ್ಥಿತಿ ಎಷ್ಟು ಹದಗೆಟ್ಟು ಹೋಗಿದೆ ಎಂದರೆ, ಒಂದು ರಾಜಕೀಯ ದುರುದ್ದೇಶದಿಂದ ಇವರು ಮಂಡಲ್ ಪಂಚಾಯತ್ ಎಲೆಕ್ಷನ್ ಮಾಡಿದ್ದಾರೆಯೇ ಹೊರತಾಗಿ ಬೇರೆ ಯಾವುದೇ ಸದುದ್ದೇಶದಿಂದ ಅಲ್ಲ. ಒಳ್ಳೆಯ ಕಾರ್ಯ ಮಾಡ ಬೇಕೆಂದು ಇದನ್ನು ಮಾಡಿಲ್ಲ. ಇವತ್ತು ಪ್ರತಿಯೊಂದು ಹಳ್ಳಿಯಲ್ಲೂ ಜಗಳ ಜಗಳ.

ಅಧ್ಯಕ್ಷರು.—ಇಲ್ಲಿಯಷ್ಟು ಜಗಳ ಅಲ್ಲಿ ಇಲ್ಲ ಎಂದು ಕಾಣುತ್ತದೆ. ಇಲ್ಲಿ ನೀವು ನೀವು ಏನು ಜಗಳ ಮಾಡುತ್ತೀರಿ ಅಷ್ಟು ಜಗಳ ಇಲ್ಲ.

ಶ್ರೀ ಆರ್. ಎನ್. ನಾಯಕ್.—ಹಾಗಾದರೆ ಎಲ್ಲಾ ಊರುಗಳು ಜಗಳೂರುಗಳು ಆಗಿವೆ ಎನ್ನಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಎಂಬಂತೆ ಆಗಿದೆ.

SRI M. L. USTAD.—Mandal Panchayat elections and Zilla Parishad elections, I say, are politically motivated. ಈ ವಿಚಾರದಲ್ಲಿ ಮಾನ್ಯ ಅಧ್ಯಕ್ಷರೇ ನಾನು ಕೇಳುವುದೇನೆಂದರೆ, ಮಂಡಲ್ ಪಂಚಾಯಿತಿಗಳೇನು ಇವೆ ಅವುಗಳನ್ನು ತೆಗೆಯಬೇಕು ಇನ್ನು ಐ.ಆರ್.ಡಿ.ಪಿ...

ಅಧ್ಯಕ್ಷರು.—ಹಾಗಾದರೆ ನೀವು ಹೇಳುವ ಪ್ರಕಾರ ಅಸೆಂಬ್ಲಿಯನ್ನು ಸಹ ತೆಗೆಯಬೇಕಾಗುತ್ತದೆ. ಅದು ಬಿಟ್ಟು ಏನು ಸುಧಾರಣೆ ಮಾಡಬೇಕೆನ್ನುವುದನ್ನು ಹೇಳಿ.

ಶ್ರೀ ಎಂ. ಎಲ್. ಉಸ್ತಾದ್.—ಈ ಐ.ಆರ್.ಡಿ.ಪಿ. ಪ್ರೋಗ್ರಾಂ ಬಗ್ಗೆ ಇವರ ರಿಪೋರ್ಟ್‌ನಲ್ಲಿ ಏನು ಹೇಳಿದ್ದಾರೆಂದರೆ, ಬೆನಿಫಿಷರೀಸ್ ಸೆಲೆಕ್ಷನ್ is made by Grama Sabha' ಅಂದರೆ

ಗ್ರಾಮಸಭೆಗಳಲ್ಲಿ ಎಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇದು ತಪ್ಪು. ಗ್ರಾಮ ಸಭೆಗಳಲ್ಲಿ ಇದು ನಡೆಯುತ್ತಿಲ್ಲ. ಇವತ್ತು this selection is being made politically. ಗ್ರಾಮ ಸಭೆಗಳಲ್ಲಿ ಮಾಡಿದರೆ ಯಾವ ಪ್ರಕಾರ ಗುರುತು ಮಾಡಿ ಐ.ಆರ್.ಡಿ.ಪಿ.ಯಲ್ಲಿ ಯಾವ ಪ್ರಕಾರ ಒಂದು ಫಾಯದೆ ಮಾಡಬೇಕೋ ಆ ಪ್ರಕಾರ ಮಾಡಿಲ್ಲ. ಇನ್ನು ಡಿ.ಪಿ.ಎ.ಪಿ. ಬಗ್ಗೆ ಹೇಳುವುದಾದರೆ, what is the contribution of the State Government ಎಂಬುದನ್ನು ಸನ್ಮಾನ್ಯ ಸಚಿವರು ತಮ್ಮ ಮುಖಾಂತರ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ೧೯೮೭-೮೮ರಲ್ಲಿ ಬೆನಿಫಿಷರೀಸ್ ಅನ್ನು ಗುರುತಿಸುವ ಟಾರ್‌ಗೇಟ್ ಇದ್ದಿದ್ದು ಒಂದು ಲಕ್ಷ ೧೫ ಸಾವಿರ. ಆದರೆ ಬೆನಿಫಿಟ್ ಪಡೆದವರು ಸುಮಾರು ೭೯,೬೬೩ ಜನ ಮಾತ್ರ. Why this target was not reached, please tell us. Anthyodays scheme ಈ ಸ್ಕೀಮ್ ಬಗ್ಗೆ ತಾವು ಹೇಳಬೇಕು. ಪ್ರತಿಯೊಂದು ಹಳ್ಳಿಯಲ್ಲಿಯೂ ೫ ಮಂದಿ ಕಡು ಬಡವರನ್ನು ಗುರುತು ಮಾಡಿ ಅವರಿಗೆ ಸಾಲಸೌಲಭ್ಯಗಳನ್ನು ಒದಗಿಸಿಕೊಡುವುದು. ನಮ್ಮ ರಾಜ್ಯದಲ್ಲಿರುವ ಒಟ್ಟು ಹಳ್ಳಿಗಳು ಅಂದರೆ ರೆವಿನ್ಯೂ ಹಳ್ಳಿಗಳು ಸುಮಾರು ೨೦,೭೦೦ ಇವೆ. ಮಾನ್ಯ ಅಧ್ಯಕ್ಷರೇ, ಅವರ ಮಾತಿನ ಪ್ರಕಾರ ನೋಡಿದರೆ ಒಂದು ಹಳ್ಳಿಯಿಂದ ೫ ಮಂದಿಯನ್ನು ಗುರುತಿಸಿದ್ದರೆ ಒಂದು ಲಕ್ಷ ಇಪ್ಪತ್ತೇಳು ಸಾವಿರ ಜನರಿಗೆ ಫಾಯದೆ ಆಗಬೇಕಾಗಿತ್ತು. ಆದರೆ ಇವರ ಟಾರ್‌ಗೇಟ್ ೭,೭೫೦ ಮಾತ್ರ. ಇವರು ಅಚೀವ್‌ಮೆಂಟ್ ಮಾಡಿದ್ದು ೭,೬೨೩ ಜನರಿಗೆ ಮಾತ್ರ. ತಾವು ಪತ್ರಿಕೆಗಳಲ್ಲಿ ಆ ಸ್ಕೀಮ್ ಮಾಡುತ್ತೇವೆ ಈ ಸ್ಕೀಮ್ ಮಾಡುತ್ತೇವೆ ಕಡುಬಡವರ ಸಲುವಾಗಿ ಏನೇನೋ ಮಾಡುತ್ತಿದ್ದೇವೆಂದು ಸುಳ್ಳು ಹೇಳಬಾರದು, ನಾವು ಏನಾದರೂ ಪ್ರಯತ್ನ ಪಟ್ಟರೆ ಆ ಸ್ಕೀಮ್‌ನಿಂದ ಹೆಚ್ಚು ಜನರಿಗೆ ಫಾಯದೆ ಯಾಗುವಂತೆ ಕೆಲಸ ಮಾಡಬೇಕು. ಇನ್ನು ಅಂತ್ಯೋದಯ ಸ್ಕೀಮ್‌ನಲ್ಲಿ what it the total amount spent for SCs/STs ? ಇದನ್ನು ತಾವು ಹೇಳಬೇಕು. ಇನ್ನು ನೇಗಿಲು ಭಾಗ್ಯ ಸ್ಕೀಮ್ ಇದೆ. This was introduced in the year 1982 for those persons who have got the lands under the tenancy *i.e.*, under the Land reforms Act. ಒಂದು ಜೊತೆ ಎತ್ತುಗಳನ್ನು ಖರೀದಿಸುವುದಕ್ಕೆ ತಾವು ಹದಿನೈದು ನೂರು ರೂಪಾಯಿಗಳೆಂದು ಒಂದು ನಿರ್ಬಂಧ ಹಾಕಿದ್ದೀರಿ. ಒಂದು ಜೊತೆ ಎತ್ತುಗಳು ಹದಿನೈದು ನೂರು ರೂಪಾಯಿಗಳಲ್ಲಿ ಬರುತ್ತದೆಯೇ? ಈ ಹಣದಲ್ಲಿ ಒಂದು ಹೋತ ಸಹ ಬರುವುದಿಲ್ಲ. ಇಂತಹ ಸ್ಕೀಮ್‌ಗಳನ್ನು ತಾವೇತಕ್ಕೆ ಜಾರಿಗೆ ತರುತ್ತೀರಿ ? ಅದ್ದರಿಂದ ಅದಷ್ಟು ಬೇಗ ಈ ಹದಿನೈದು ನೂರು ರೂಪಾಯಿಗಳನ್ನು ತೆಗೆದು ಕನಿಷ್ಟಪಕ್ಷ ಒಂದು ಐದು ಸಾವಿರ ರೂಪಾಯಿಗಳೆಂದು ಮಾಡಿ ಆಗ ಒಂದು ಜೊತೆ ಎತ್ತುಗಳು ಬರುತ್ತವೆ. ಆಮೇಲೆ ಸೆಂಟ್ರಲ್ ಸ್ಪಾನ್ಸಾರ್ ಸ್ಕೀಮ್ಸ್ ಏನಿವೆ, what is the assistance to surplus grantees ? ನಮ್ಮ ಕರ್ನಾಟಕ ರಾಜ್ಯದಲ್ಲಿ What is the total surplus land ? ಎಂಬುದನ್ನು ತಾವು ಹೇಳಬೇಕು. ಮತ್ತು ಎಷ್ಟು ಜನರಿಗೆ ಇದರಿಂದ ಫಾಯದೆ ಆಗಿದೆ ಎನ್ನುವುದನ್ನು ಈ ಸದನದ ಮುಖಾಂತರ ರಾಜ್ಯದಜನತೆಗೆ ತಿಳಿಸಬೇಕೆಂದು ನಾನು ಕೋರುತ್ತೇನೆ. Under TRYSEM ರೂರಲ್ ಯುವಕರು ಏನು ಇರುತ್ತಾರೆ this is also a Centrally sponsored scheme. ಎಷ್ಟು ಜನರಿಗೆ ಇದರಿಂದ ಫಾಯದೆಯಾಗಿದೆ ಎನ್ನುವುದನ್ನು ತಾವು ಹೇಳಬೇಕು. ಟಾರ್‌ಗೇಟ್ ಇದ್ದಿದ್ದು ೫೦,೯೭೨, ಇದರಲ್ಲಿ ಟ್ರೈನಿಂಗ್ ಮೂಲಕ ಬೆನಿಫಿಟ್ ಪಡೆದವರು ೨೫,೦೫೪ ಜನ ಮಾತ್ರ. ತಾವು ಏನಾದರೂ ಸೆಂಟ್ರಲ್ ಸ್ಕೀಮ್ಸ್‌ಗಳಾದ 100 wells programme, Nala bunding, village ponds, dug wells, shallow tube wells. filter points. boring and deepening of wells and renovation of wells ಎಲ್ಲಾ ಇದರಲ್ಲಿ ಬರುತ್ತವೆ. ಅದರಲ್ಲಿ ಭಾರತದ ಸರ್ಕಾರದ್ದು ೫೦ ಪರ್‌ಸೆಂಟ್, ರಾಜ್ಯ ಸರ್ಕಾರದ್ದು ೫೦ ಪರ್‌ಸೆಂಟ್ ಎಂದು ಇರುತ್ತದೆ. ಇದರಲ್ಲಿ ತಾವು ಎಷ್ಟು ಪ್ರಗತಿಯನ್ನು ಇಲ್ಲೀತನಕ ಸಾಧಿಸಿದ್ದೀರಿ? ಹೆಚ್ಚು ಸಾಧನೆ ಮಾಡುವುದಕ್ಕೆ ಇದುವರೆಗೆ ಆಗದೇ ಇದ್ದರೆ ಇನ್ನು ಮುಂದಾದರೂ ತಾವು ಹೆಚ್ಚು ಸಾಧನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಸೋಲಾರ್ ಪಂಪ್ ಸೆಟ್ ಬಗ್ಗೆ ತಾವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರೆಂದು ಹೇಳಬೇಕು. ಆಮೇಲೆ, ಡೆವಲಪ್‌ಮೆಂಟ್ ಅಫ್ ವುಮೆನ್ಸ್ ಅಂಡ್ ಚಿಲ್ಡ್ರನ್ ಆಫ್ ರೂರಲ್ ಏರಿಯಾ ಸ್ಕೀಮ್‌ಗೆ ಸೆಂಟ್ರಲ್ ಗೌರ್ನಮೆಂಟ್ ಮತ್ತು ರಾಜ್ಯ ಸರ್ಕಾರದ್ದು ಹಾಗೂ ಯೂನಿಸೆಫ್ (ಯು.ಎನ್.ಐ.ಸಿ.ಇ.ಎಫ್.)ಗಳ ಕಾಂಟ್ರಿಬ್ಯೂಷನ್ ಇದೆ. ಎಷ್ಟು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಸ್ಪಾನ್ಸರ್ ಮಾಡಿದ್ದೀರೆಂದು ತಾವು ಈ ಸದನಕ್ಕೆ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆಮೇಲೆ ಬಾಂಡೆಡ್ ಲೇಬರ್‌ಗಳ ಬಗ್ಗೆ ಹೇಳಬೇಕಾದರೆ, ೬,೭೧೫ ಜನ ಬಾಂಡೆಡ್ ಲೇಬರ್‌ಗಳನ್ನು ಮುಕ್ತಿಗೊಳಿಸಿದ್ದೇವೆಂದು ಹೇಳಿದ್ದಾರೆ. That too in seven districts only. What about the other districts?

So far as our Bijapur, Gulbarga Belgaum, Bidar Raichur & Bellary districts are concerned. there is nothing in this Annual Report. That is why, how many bonded laboures ನ್ನು ತಾವು ಮುಕ್ತಗೊಳಿಸಿದ್ದೀರಿ ಎನ್ನುವುದನ್ನು, ಈ ಸದನಕ್ಕೆ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಎನ್.ಆರ್.ಇ.ಪಿ. ಬಗ್ಗೆ ಹೇಳಬೇಕಾದರೆ, this was fully financed by the Government of India up to 31-3-1980. Afterwards ಈ ಪ್ರೋಗ್ರಾಮ್‌ನಲ್ಲಿ ಕೇಂದ್ರ ಸರ್ಕಾರದ್ದು ೫೦ ಪರ್‌ಸೆಂಟ್ ಫಂಡ್ ಮತ್ತು ರಾಜ್ಯ ಸರ್ಕಾರದ್ದು ೫೦ ಪರ್‌ಸೆಂಟ್ ಫಂಡ್ ಇದೆ. ಈ ಸ್ಕೀಮ್‌ನಲ್ಲಿ ರೂರಲ್ ಏರಿಯಾದಲ್ಲಿರುವ ಹೆಣ್ಣುಮಕ್ಕಳ ಮತ್ತು ಮಕ್ಕಳ ಕಲ್ಯಾಣವನ್ನು ಮಾಡಬೇಕಾಗುತ್ತದೆ. What is the ratio of payment in rural areas? ಈ ಸ್ಕೀಮ್‌ಗೆ ಸೆಂಟ್ರಲ್ ಗೌರ್ನಮೆಂಟಿನವರು ಕೊಡುವ ೫೦ ಪರ್‌ಸೆಂಟ್‌ನಷ್ಟು ಹಣಕ್ಕೆ ರಾಜ್ಯ ಸರ್ಕಾರವೂ ೫೦ ಪರ್‌ಸೆಂಟ್ ಮಾತ್ರ ಹಣ ಕೊಡಬೇಕೆಂದೇನೂ ಇಲ್ಲ. ಇನ್ನೂ ಹೆಚ್ಚಿಗೆ ಹಣವನ್ನು ನೀವು ಈ ಪ್ರೋಗ್ರಾಮ್‌ಗೆ ಕೊಡಬೇಕು ಎನ್.ಆರ್.ಇ.ಪಿ. ಮತ್ತು ಆರ್. ಎಲ್. ಇ. ಜಿ. ಪಿ. ಪ್ರೋಗ್ರಾಮ್‌ಗಳ ಮುಖಾಂತರ ಲ್ಯಾಂಡ್‌ಲೆಸ್ ಲೇಬರರ್ಸ್‌ಗಳನ್ನು ಗುರುತು ಹಿಡಿಯುವುದಕ್ಕೆ ಮತ್ತು ಅವರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಗ್ರೀನ್ ಕಾರ್ಡ್‌ಗಳನ್ನು ಕೊಡಬೇಕು. ಗ್ರೀನ್ ಕಾರ್ಡ್ ಕೊಟ್ಟಿರುವ ಜನಕ್ಕೆ ಕಂಪಲ್ಸರಿ ಎಂಪ್ಲಾಯ್‌ಮೆಂಟ್ ಕೊಡಲಿಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ. RLEGP programme was introduced by the Central Government on 15-8-83 I ask this Government whether there is any master-plan made by the State Government up till 2000 AD? There should be a master plan. ಇನ್ನು ಡ್ರಾಟ್ ಪ್ರೋನ್ ಏರಿಯಾ ಬಗ್ಗೆ ತಾವು ಯಾವ ದಿಸೆಯಲ್ಲಿ ಕೆಲಸ ಮಾಡಿದ್ದೀರಿ ಮತ್ತು ಯಾವ ಪ್ರಕಾರವಾಗಿ how many biocks you have recognised as drought prone area? ತಾವು ಗುರುತು ಮಾಡಿದ್ದೀರೆಂದು ಹೇಳಬೇಕು. ಏಕೆಂದರೆ ಡ್ರಾಟ್ ಪ್ರೋನ್ ಏರಿಯಾವನ್ನು ಇಯರ್ ಮಾರ್ಕ್ ಮಾಡಬೇಕು. ಈ ರೀತಿ ಇಯರ್ ಮಾರ್ಕ್ ಮಾಡಿ ಗುರುತು ಹಿಡಿಯುವುದಕ್ಕೆ ಎಷ್ಟು ಬ್ಲಾಕ್‌ಗಳನ್ನು ಮಾಡಿದ್ದೀರಿ ? ಇದುವರೆಗೆ ಎಷ್ಟು ಡ್ರಾಟ್ ಏರಿಯಾಗಳನ್ನು ಇಯರ್ ಮಾರ್ಕ್ ಮಾಡಿದ್ದೀರಿ ? ಇದರ ಸಲುವಾಗಿ ತಾವು ಒಂದು ವೈಟ್ ಪೇಪರನ್ನು (ಶ್ವೇತ ಪತ್ರ) ಈ ಸದನಕ್ಕೆ ಒಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ವೆಸ್ಟ್ರನ್ ಘಾಟ್ಸ್ ಬಗ್ಗೆ ಪ್ಲಾನಿಂಗ್ ಕಮಿಷನ್ ಆಫ್ ಇಂಡಿಯಾದವರಿಂದ ೬೫೦ ಲಕ್ಷ ರೂಪಾಯಿಗಳು ಬಂದಿದೆ. ನನಗೆ ಬಂದ ಇನ್‌ಫರ್ಮೇಷನ್ ಪ್ರಕಾರ ಈ ಹಣದಲ್ಲಿ ಸಾಕಷ್ಟು ಮಿಸ್ ಯೂಸ್ ಆಗಿದೆಯೆಂದು ತಿಳಿದು ಬಂದಿದೆ. ಅದರ ಸಲುವಾಗಿ ಎನ್‌ಕ್ವಯರಿ ಮಾಡಬೇಕು ಹಾಗೂ ಈ ವಿಷಯವನ್ನು ಲೋಕಾಯುಕ್ತಕ್ಕೆ ಕಳುಹಿಸಿ ಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ. ಆಮೇಲೆ ನ್ಯಾಷನಲ್ ಬಯೋ ಗ್ಯಾಸ್ ಡವೆಲಪ್‌ಮೆಂಟ್ ಪ್ರೋಗ್ರಾಮ್ ಬಗ್ಗೆ ಹೇಳಬೇಕಾದರೆ, the target in the year 1987-88 was 5000 but the number of plants installed is 8,106. ಈ ವಿಷಯದಲ್ಲಿ ನಿಗದಿಯಾಗಿದ್ದ ಟಾರ್ಗೆಟ್‌ಗಿಂತ ಹೆಚ್ಚು ಬಯೋಗ್ಯಾಸ್ ಪ್ಲಾಂಟ್‌ಗಳನ್ನು ಮಾಡಲಾಗಿದೆ. ಇದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಬಯೋ ಗ್ಯಾಸ್ ಪ್ಲಾಂಟ್‌ಗಳನ್ನು ಹಾಕಿಸಿಕೊಂಡಿರುವ ರೈತರುಗಳಿಗೆ ಅಭಿನಂದಿಸುತ್ತೇನೆ. ಆಮೇಲೆ ಇಂಟಿಗ್ರೇಟೆಡ್ ರೂರಲ್ ಎನರ್ಜಿ ಬಗ್ಗೆ ಹೇಳಬೇಕಾದರೆ Central Goverement had recognised Karnataka as one of the seven States in India for Solar, wind and Bio-gas energy programme. But the a chivement is very less ನಮ್ಮ ಶಾಸಕರ ಭವನದಲ್ಲಿ ಯಾವ ಪ್ರಕಾರವಾಗಿ ಈ ಸೋಲಾರ್ ಎನರ್ಜಿ ಮೂಲಕ ನಮಗೆ ಬಿಸಿ ನೀರು ಸಿಗುತ್ತದೆಯೋ ಅದೇ ಪ್ರಕಾರವಾಗಿ ಪ್ರತಿಯೊಂದು ಹಳ್ಳಿಯಲ್ಲೂ ಈ ಸೋಲಾರ್ ಎನರ್ಜಿಯನ್ನು ಅಳವಡಿಸಬೇಕು.

೬–೦೦. ಪಿ. ಎಂ.

ಮತ್ತು ಎಲ್ಲಾ ಹಳ್ಳಿಗಳಲ್ಲಿಯೂ ಕೂಡ ಕಮ್ಯುನಿಟಿ ಬಾಥ್ ರೂಮ್ಸ್‌ಗಳನ್ನು ಕಟ್ಟಿಸಿ ಅಲ್ಲಿ ಬಿಸಿನೀರಿನ ವ್ಯವಸ್ಥೆಯಾಗುವಂಥಾಗಬೇಕು. ಅದೇ ರೀತಿಯಲ್ಲಿ ಎಲ್ಲಾ ಆಸ್ಪತ್ರೆಗಳಲ್ಲಾಗಲಿ, ಹಾಸ್ಟೆಲ್‌ಗಳಲ್ಲಾಗಲಿ, ಟೂರಿಸಮ್ ಡಿಪಾರ್ಟ್‌ಮೆಂಟಿನ ಮಂದಿರಗಳಲ್ಲಾಗಲಿ, ಬಸ್‌ಸ್ಟ್ಯಾಂಡ್‌ಗಳಲ್ಲಾಗಲಿ, ಈ ಒಂದು ಸಿಸ್ಟಮ್ ಮೂಲಕ ಲೈಟ್ ಮತ್ತು ಬಿಸಿನೀರಿನ ವ್ಯವಸ್ಥೆಯಾಗುವಂತೆ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಹಾಕಿ ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸೋಲಾರ್ ಎನರ್ಜಿಯ ಬಗ್ಗೆ

ಬಿಜಾಪುರದಲ್ಲಿನ ಒಬ್ಬ ರಿಟೈರ್ಡ್ ಮೇಜರ್ ಸಿಂಧೆ ಎನ್ನುತಕ್ಕಂಥವರು ತುಂಬಾ ಆಸಕ್ತಿವಹಿಸಿ ಅದರಲ್ಲಿ ಸಾಕಷ್ಟು ಸಂಶೋಧನೆಯನ್ನು ಮಾಡುತ್ತಿದ್ದಾರೆ. ಈ ಕುರಿತು ಅವರು ಸಾಕಷ್ಟು ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಅವರಿಗೆ ಯಾವುವೇ ಸೂಕ್ತ ಪ್ರೋತ್ಸಾಹ ಇದುವರೆವಿಗೂ ಸಿಕ್ಕಿಲ್ಲ. ಅವರು ರಾಜ್ಯದ ಮುಖ್ಯಮಂತ್ರಿಗಳೊಂದಿಗೆ ಮತ್ತು ಭಾರತ ಸರಕಾರದೊಂದಿಗೆ ಸಾಕಷ್ಟು ಈ ಬಗ್ಗೆ ಕರೆಸ್ಪಾಂಡೆನ್ಸ್ ಮಾಡಿದ್ದರೂ ಕೂಡ ಅಷ್ಟಾಗಿ ಯಾರೂ ಅವರಿಗೆ ಪ್ರೋತ್ಸಾಹವನ್ನು ಕೊಟ್ಟಿಲ್ಲ. ಹಾಗೆಯೇ ಅಧಿಕಾರಿಗಳ ಹತ್ತಿರ ಹೋದರೆ ಅವರು ಮಾತನಾಡಲಿಕ್ಕೆ ಕೂಡಾ ತಯಾರಾಗಿಲ್ಲ ಎಂದು ಹೇಳಿದರು. ಹೀಗಾಗಿ ಸೋಲಾರ್ ಎನರ್ಜಿ ಕುರಿತು ಎಷ್ಟು ಪ್ರಗತಿಪರವಾದ ಕೆಲಸವಾಗ ಬೇಕಾಗಿತ್ತೋ ಅಷ್ಟು ಕೆಲಸ ಇನ್ನೂ ಆಗಿಲ್ಲ. ಸಿಂಧೆಯಂತಹ ತಂತ್ರಜ್ಞರು ರಾಜ್ಯದಲ್ಲಿ ಇನ್ನೂ ಎಷ್ಟೋ ಜನರು ಇದ್ದಾರೆ. ಆದರೆ ಅವರಿಗೆ ಪ್ರೋತ್ಸಾಹವನ್ನು ಕೊಟ್ಟು ಅವರಿಂದ ಈ ಒಂದು ತಂತ್ರಜ್ಞಾನ ಪಡೆಯುವ ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಪಬ್ಲಿಕ್ ಹೆಲ್ತ್ ಇಂಜನಿಯರಿಂಗ್ ಮತ್ತು ರೂರಲ್ ವಾಟರ್ ಸಪ್ಲೈ ಬಗ್ಗೆ ಹೇಳುವುದಾದರೆ, ನಮ್ಮ ಪ್ರಾಬ್ಲೆಮೆಟಿಕ್ ವಿಲೇಜಸ್‌ಗಳಲ್ಲಿ ಅಂದರೆ ರೆವಿನ್ಯೂ ವಿಲೇಜಸ್ ೨೭ ಸಾವಿರಗಳಷ್ಟು ಏನು ಇದ್ದಾವೆ. ಅದರಲ್ಲಿ ೨೦ಸಾವಿರದ ೩೦೦ ವಿಲೇಜಸ್‌ಗಳನ್ನು ರೀಚ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದುದು ಎಂದು ಹೇಳುತ್ತೇನೆ.. ಎಲ್ಲಾ ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿದ್ದರಿಂದ ಈಗ ವಾಟರ್‌ವೆಲ್ ಭೂಮಿಯ ಕೆಳಗೆ ಹೋಗಿದೆ. ಈ ಬೋರ್‌ವೆಲ್‌ಗಳಲ್ಲಿ ನೀರು ಎಲ್ಲಿದೆ ಅಲ್ಲಿ ಪಂಪ್ ಇಲ್ಲ, ಪಂಪ್ ಎಲ್ಲಿದೆ ಅಲ್ಲಿ, ಜನ ಇಲ್ಲ, ಜನ ಮತ್ತು ಪಂಪ್ ಇದ್ದಲ್ಲಿ ನೀರೇ ಇಲ್ಲ ಎಂಬ ಮಟ್ಟಕ್ಕೆ ಇದು ಬಂದಿದೆ ಎಂದು ಹೇಳಬೇಕಾಗಿದೆ. ಇದರ ಬಗ್ಗೆ ಹೇಳಬೇಕಾದರೆ ನಮ್ಮ ಬಿಜಾಪುರ ಜಿಲ್ಲೆಯ ತಿಕೋಟಪಲ್ಲಿ ಬಬಲೇಶ್ವರ ಎಂಬ ಒಂದು ದೊಡ್ಡ ಹಳ್ಳಿ ಇದೆ. ಹೋದ ವರ್ಷ ಅಲ್ಲಿಯ ಪೈಪ್‌ಲೈನ್ ಬರ್ಸ್ಟ್ ಆಯಿತು. ನಾನು ಮತ್ತು ಬಿ. ಎಂ. ಪಾಟೀಲ್‌ರವರು ಅಲ್ಲಿಗೆ ಹೋಗಿ ನೋಡಿ ಬಂದಿದ್ದೇವೆ. ಮತ್ತು ನಾವಿಬ್ಬರೂ ಮಾನ್ಯ ಮಂತ್ರಿಗಳ ಮತು ಮಾನ್ಯ ನಜೀರ್‌ಸಾಬ್‌ರವರ ಜೊತೆಗೆ ಈ ಕುರಿತು ವಿಚಾರ ವಿನಿಮಯ ಮಾಡಿದ್ದೇವೆ, ಇಂಥ ಎಷ್ಟೋ ಕಡೆಗಳಲ್ಲಿ ಡಿಫೆಕ್ಟಿವ್ ಪೈಪ್‌ಲೈನ್ ಹಾಕಿದ್ದಾರೆ. ಇಂತಹ ಕಡೆಗಳಲ್ಲಿ ಅಧಿಕಾರಿಗಳ ಒಂದು ಚೆಕ್ ಇರಬೇಕು. ಇವನ್ನು ಸರಿಪಡಿಸಲಿಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುಂದುವರಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಟೆಕ್ನಾಲಜಿ ಮಿಶಿನ್ ಪ್ರೋಗ್ರಾಂ ಇದೆ. ಇದರ ಬಗ್ಗೆ ನೀವು ಏನಾದರೂ ಮಾಸ್ಟರ್ ಪ್ಲಾನ್‌ನ್ನು ಮಾಡಿದ್ದೀರಾ ? ಸ್ಟ್ರೀಟ್‌ಲೈಟ್ಸ್ ಬಿಲ್ ಬಾಕಿ ಇರುತ್ತದೆ. ಅದೇ ರೀತಿಯಲ್ಲಿ ಡ್ರಿಂಕಿಂಗ್ ವಾಟರ್ ಸಲುವಾಗಿ ಬಿಲ್ ಬಾಕಿ ಇರುತ್ತದೆ, ಇವುಗಳನ್ನು ಮಂಡಲಪಂಚಾಯತಿಯವರಿಗೆ ಕೊಡುವುದಕ್ಕೆ ಆಗುತ್ತಿಲ್ಲ. ಈ ಬಿಲ್‌ಗಳ ಬಗ್ಗೆ ಅವರಿಗೆ ರಿಯಾಯತಿಯನ್ನು ಕೊಡುವ ಬಗ್ಗೆ ಯೋಚಿಸಬೇಕು. ಮೊದಲು ನಮ್ಮ ದೇಶಕ್ಕೆ ಒಬ್ಬರೇ ಪ್ರಧಾನಿಯಾಗಿ ಇರುತ್ತಿದ್ದರು. ಈಗ ಮಂಡಲಕ್ಕೆ ಒಬ್ಬ ಪ್ರಧಾನಿಯಾಗಿದ್ದಾರೆ. ಅವರ ಗತಿ ಏನಾಗಿದೆ ಎಂದರೆ ಊರಿನ ಜನರು ಅವರನ್ನು ಹಿಯಾಳಿಸುತ್ತಿದ್ದಾರೆ. 300 ರೂಪಾಯಿಗಳ ಸಂಬಳ ತೆಗೆದುಕೊಂಡು ಏನು ಕೆಲಸ ಮಾಡುತ್ತಿದ್ದೀರ ಎಂದು ಜನರು ಕೇಳುತ್ತಿದ್ದಾರೆ. ಅವನಿಗೆ ಒಂದು ಖುರ್ಚಿಯನ್ನು ಖರೀದಿ ಮಾಡುವ ಅಧಿಕಾರವೂ ಕೂಡ ಇಲ್ಲ. ಮಂಡಲಕ್ಕೆ ಹಣವೂ ಕೂಡ ಇಲ್ಲ. ಹೀಗಾಗಿ ಅವನ ಪರಿಸ್ಥಿತಿಯು ತ್ರಿಎಕ್ಸ್ ಆಗಿ ಬಿಟ್ಟಿದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಆರ್. ಎನ್. ನಾಯ್ಕರವರು ಮಾತನಾಡಬಹುದು, ತಾವು 10 ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಆರ್. ಎನ್. ನಾಯ್ಕ.—ಮಾನ್ಯ ಅಧ್ಯಕ್ಷರೆ, ಈ ಗ್ರಾಮೀಣ ಅಭಿವೃದ್ಧಿ ಇಲಾಖೆಗೆ ಹಲವಾರು ಕೆಲಸಗಳು ಇದ್ದಾವೆ. ಐ.ಆರ್.ಡಿ.ಪಿ. ಆರ್.ಎಲ್.ಇ.ಜಿ.ಪಿ. ಅಂತ್ಯೋದಯ, ನೇಗಿಲು ಭಾಗ್ಯ ವಗೈರೆ ಅನೇಕ ಕೆಲಸಗಳಿದ್ದು, ಇವುಗಳನ್ನೆಲ್ಲಾ ಮಾಡುವಂಥ ಸಂಸ್ಥೆ ಎಂದರೆ ನಾವು ಹೊಸದಾಗಿ ನಿರ್ಮಾಣ ಮಾಡಿದ ಜಿಲ್ಲಾ ಪರಿಷತ್ತಿನ ಕೆಳಗಡೆ ಮತ್ತು ಮಂಡಲಪಂಚಾಯತಿಗಳ ಕೆಳಗಡೆ ಮತ್ತು ಇವುಗಳ ಮಧ್ಯೆ ಇರುವ ತಾಲ್ಲೂಕು ಪಂಚಾಯತ್ ಸಮಿತಿಯ ಕೆಳಗಡೆ ಬರುತ್ತದೆ. ಮಾನ್ಯ ಅಧ್ಯಕ್ಷರು ಈಗ ನನಗೆ ಕೊಟ್ಟಂಥ 10 ನಿಮಿಷಗಳಲ್ಲಿ ಇವುಗಳ ಬಗ್ಗೆ ವಿವರವಾಗಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ, ಇಂತಹ ಒಂದು ಗ್ರಾಮೀಣ ಅಭಿವೃದ್ಧಿಯ ಕುರಿತು ಮಾತನಾಡುವುದಕ್ಕೆ ಪ್ರತಿಯೊಬ್ಬರೂ ಪರಿಣತರಾಗಿದ್ದಾರೆ. ಈ ವಿಚಾರವೂ ಎಲ್ಲರಿಗೂ ತಮ್ಮ ದಿನನಿತ್ಯದ ಕಾರ್ಯಕ್ರಮಗಳಲ್ಲಿ ಬರುವಂಥಾ ಒಂದು ಇಲಾಖೆಯಾಗಿದೆ, ಈಗ ನೇರವಾಗಿ ಈ ಕುರಿತು ಹೇಳಬೇಕಾದರೆ, ಈ ಒಂದು ಇಲಾಖೆಯ ಕೆಳಗೆ ಲ್ಯಾಂಡ್ ಆರ್ಮಿ ಎನ್ನುವಂಥ ಒಂದು ಸಂಸ್ಥೆ ಕೆಲಸ ಮಾಡುತ್ತಾ ಇದೆ. ಈ ಬಗ್ಗೆ ನಾನು 1983ನೇ

ಇಸವಿಯಿಂದ ಹೇಳುತ್ತಾ ಬಂದಿದ್ದೇನೆ. ಇಷ್ಟು ಕಳಪೆ ಕೆಲಸ ಮಾಡುವಂಥ ಯಾವುದಾದರೂ ಒಂದು ಸಂಸ್ಥೆ ಇದ್ದರೆ, ಅದು ಲ್ಯಾಂಡ್ ಆರ್ಮಿ ಎಂದು ಹೇಳಬೇಕು. ಮತ್ತು ಅದಕ್ಕೆ ಕಳಪೆ ಕೆಲಸ ಮಾಡಿದ ಬಗ್ಗೆ ಪ್ರಥಮ ಸ್ಥಾನವನ್ನು ಕೊಡಬೇಕು. ನನ್ನ ಅನುಭವದ ಆಧಾರದ ಮೇಲೆ ಈ ಒಂದು ಆಪಾದನೆಯನ್ನು ಮಾಡುತ್ತಾ ಇದ್ದೇನೆ. ಭಟ್ಕಳ ತಾಲ್ಲೂಕಿನಲ್ಲಿ ಇವರು ಕೈರುಗಟ್ಟ ಬಾದರನ್ನು ಕಟ್ಟಿದರು. ಅದರ ಅವಸ್ಥೆಯು ಇವೊತ್ತು ಏನಾಗಿದೆ ಅಂದರೆ, ನೀರು ಯಾವ ಕಡೆಗೆ ಹೋಗಬೇಕೋ ಆ ತಲುಪುವ ಸ್ಥಳವು ಎತ್ತರದಲ್ಲಿದೆ. ಡ್ಯಾಮ್ ಕೆಳಗಡೆ ಇದೆ. ಹೀಗಾದರೆ ನೀರು ಹೇಗೆ ಹೋಗಬೇಕು ? ಇದೊಂದು ಹೊಸದಾದ ವಿನ್ಯಾಸವೇ ? ಒಂದು ವೇಳೆ ನಿಮ್ಮ ಸರಕಾರದಲ್ಲಿ ಇಂತಹ ಹೊಸ ವಿನ್ಯಾಸಗಳು ಆಗುತ್ತಾ ಇರುತ್ತವೆಯೇ ? ನಾನು ಈ ಬಗ್ಗೆ 20 ಅಂಶಗಳ ಕಾರ್ಯಕ್ರಮಗಳ ಮೀಟಿಂಗ್‌ನಲ್ಲಿ ಕೆ.ಡಿ.ಪಿ. ಮತ್ತು ಜಿಲ್ಲಾಪರಿಷತ್ತಿನಲ್ಲಿ ಹೀಗೆ ಎಲ್ಲಾ ಕಡೆಗಳಲ್ಲಿಯೂ ಈ ವಿಚಾರದ ಬಗ್ಗೆ ಹೇಳಿದ್ದೇನೆ. ಇಷ್ಟೆಲ್ಲಾ ಹೇಳಿದ ಮೇಲೆ ಮಾನ್ಯ ನಜೀರ್‌ಸಾಬ್‌ರವರು ಇದನ್ನು ಡಿಪೆಂಡ್ ಮಾಡಿಕೊಂಡು ಅವರು ಮಾಡಿದ್ದೇ ಸರಿ ಎಂದು ಹೇಳಿದರು. ಆದರೂ ನಾನು ಬಿಡದೆ ಹಠ ಬಿದ್ದ ಮೇಲೆ ಆ ಬಗ್ಗೆ ಒಂದು ಚೌಕಾಶಿ ಮಾಡೋಣ ಎಂದು ಹೇಳಿದರು. ಈ ಬಗ್ಗೆ ಉತ್ತರ ಕನ್ನಡ ಜಿಲ್ಲೆಯ ಸ್ಪೆಷಲ್ ಡಿ.ಸಿ.ಯವರಾದ ಕುಲಕರ್ಣಿಯವರನ್ನು ವಿಚಾರಣೆಗಾಗಿ ನೇಮಿಸಿದ ನಂತರ ಅವರು ಪರಿಶೀಲನೆ ಮಾಡಿ, ತನಿಖೆ ಮಾಡಿ ಕೆಲಸ ಮಾಡಿದ್ದು ಸರಿಯಾಗಿಲ್ಲ ಎಂದು ಹೇಳಿದರು. ಅದರ ಮೇಲೆ ಒಂದು ಸಮಿತಿಯನ್ನು ಕೂಡ ನೇಮಿಸಿದರು. ಆ ಸಮಿತಿಯಲ್ಲಿ ಯಾರ್ಯಾರು ಇದ್ದಾರೋ, ಅದು ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಆ ಕೆಲಸದಲ್ಲಿ ಸಾವಿರಾರು ರೂಪಾಯಿಗಳನ್ನು ತಿಂದು ಮುಳುಗಿಸಿದ್ದಾರೆ. ಅಧಿಕಾರಿಗಳು ತಿಂದು ತೇಗಿದ್ದಾರೆ. ನನಗೆ ಈ ವಿಚಾರದಲ್ಲಿ ಏನೊಂದು ಸಂಶಯ ಬರುತ್ತದೆ ಎಂದು ಹೇಳಿದರೆ ಸರಕಾರದವರಿಗೂ, ನಿಮಗೂ ಹಿಡಿಸಲಿಕ್ಕಿಲ್ಲ. ಆ ಕಳಪೆ ಕೆಲಸದ ಬಗ್ಗೆ ಅಲ್ಲಿಯ ಯಾವ ಜನರನ್ನೂ ಕೇಳಿದರೂ ಕೂಡ ಹೇಳುತ್ತಾರೆ. ಮಾನ್ಯ ದೇಶಪಾಂಡೆಯವರು ಈಗ ಹೋಗಿ ನೋಡಿದರೂ ಕೂಡ ಅದನ್ನು ತಿಳಿದುಕೊಳ್ಳಬಹುದು. ಇಷ್ಟು ಇದ್ದರೂ ಕೂಡ ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಯವರು ತಪ್ಪಿತಸ್ಥರಿಗೆ ಏಕೆ ರಕ್ಷಣೆಯನ್ನು ಕೊಟ್ಟರು ಎಂಬ ಒಂದು ಸಂಶಯವು ಸಹ ಬರುತ್ತದೆ. ಅದಕ್ಕೆ ಏನಾದರೂ ಕಾರಣಗಳು ಇರಬೇಕು. ಅಥವಾ ಅವರಿಗೆ ಲ್ಯಾಂಡ್ ಆರ್ಮಿಯ ಮೇಲೆ ಏನು ಮೋಹ ಇದೆಯೋ ಎಂಬುದು ನಮಗೆ ಗೊತ್ತಾಗುವುದಿಲ್ಲ. ಅದಕ್ಕೆ ನಾನು ಎರಡು ಕಾರಣಗಳನ್ನು ಕೊಡುತ್ತೇನೆ. ಒಂದು ಅವರಿಗೆ ಲ್ಯಾಂಡ್ ಆರ್ಮಿಯ ಮೇಲೆ ಮೋಹ ಇರಬಹುದು. ಇಲ್ಲದಿದ್ದರೆ ಏನಾದರೂ ಅವ್ಯವಹಾರ ಇರಬಹುದು. ಇದನ್ನು ಯಾವ ಅರ್ಥದಲ್ಲಿ ಪರಿಗಣಿಸಿದರೂ ಅಡ್ಡಿ ಇಲ್ಲ. ಇನ್ನು ಮುಂದಾದರೂ ಇಷ್ಟು ಕಳಪೆ ಕೆಲಸವನ್ನು ಮಾಡುವಂಥ ಲ್ಯಾಂಡ್ ಆರ್ಮಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವುದೇ ಕೆಲಸವನ್ನು ಕೊಡಬೇಡಿ ಎಂದು ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ತು ಬಂದ ಮೇಲೆ ಅದು ಜನತಾಪಕ್ಷದವರ ನೇತೃತ್ವದಲ್ಲಿ ಇದೆ. ಇವರದ್ದೇ ಸರಕಾರ ಆದುದರಿಂದ ಕೆಲಸವನ್ನು ಕಳಪೆ ಮಾಡಿದರೂ ಕೂಡ ಲ್ಯಾಂಡ್ ಆರ್ಮಿಗೆ ಕೊಡಬೇಕಾಗುತ್ತದೆ.

ಇನ್ನು ನೇಗಿಲು ಭಾಗ್ಯ ಯೋಜನೆಯ ಮೂಲಕ ಬಡ ರೈತರಿಗೆ ಸಾಲ ಕೊಡುವ ಒಂದು ವ್ಯವಸ್ಥೆಯು ಇದೆ. 1200 ರಿಂದ 1500ರೊಳಗಿನ ಆದಾಯವುಳ್ಳವರಿಗೆ ಮಾತ್ರ ಅಂದರೆ ಸಣ್ಣ ರೈತರಿಗೆ ಈ ಯೋಜನೆಯ ಮೂಲಕ ಸಹಾಯವನ್ನು ಮಾಡಬೇಕು. ಇದರ ಮೂಲಕ ಕೃಷಿ ಉಪಕರಣಗಳು ಮತ್ತಿತರ ಅಗತ್ಯತೆಗಳನ್ನು ಕೊಳ್ಳುವುದಕ್ಕೆ ನೆರವು ಕೊಡಬೇಕು. ಈ ಯೋಜನೆಯನ್ನು ಮಾಡಿದ ಸರಕಾರ ಸರಿಯಾಗಿ ಇದಕ್ಕೆ ಸಾಲ ಮಂಜೂರು ಮಾಡುವುದಿಲ್ಲ, ಜಿಲ್ಲಾಪರಿಷತ್ತಿನವರನ್ನು ಕೇಳಿದರೆ ಅವರು ನಾವೇನು ಮಾಡುವುದು ಎಂದು ಹೇಳುತ್ತಾರೆ. ತಮ್ಮ ಹತ್ತಿರ ಹಣ ಇಲ್ಲ ಎಂದು ಹೇಳುತ್ತಾರೆ. ಅವರಿಗೆ ಇರುವ ಎರಡು ಮೂರು ಸಾವಿರ ರೂಪಾಯಿಗಳಲ್ಲಿ ನೇಗಿಲ ಭಾಗ್ಯಕ್ಕೆ ಒಂದೂವರೆ ಸಾವಿರ ರೂಪಾಯಿಯನ್ನು ಕೊಡುತ್ತಾರೆಯೋ ಅಥವಾ ಬೇರೆ ಬೇರೆ ಯಾವುದಕ್ಕೆ ಕೊಡುತ್ತಾರೆಂಬುದು ಗೊತ್ತಿಲ್ಲ. ಇವತ್ತು ನೇಗಿಲಿನ ಗತಿ ಏನಾಗಿದೆ ಎಂದರೆ ಮುರಿದು ಅದರ ಕೋಲು ಒಂದು ಕಡೆ ಬಿದ್ದಿದೆ ನೇಗಿಲು ಇನ್ನೊಂದು ಕಡೆ ಬಿದ್ದಿದೆ, ಇಷ್ಟೇ ಅಲ್ಲ ನೇಗಿಲ ಭಾಗ್ಯದ ಎರಡು ಎತ್ತುಗಳು ಇರಬೇಕಲ್ಲವೇ ? ಹೊಲ ಉಳಬೇಕಾದರೆ ಎತ್ತುಗಳು ದಷ್ಟಪುಷ್ಟವಾಗಿ ಬೆಳೆದು ತಿಂದಿರತಕ್ಕಂತಹ ಎತ್ತುಗಳೆರಡೂ ಒಂದಕ್ಕೊಂದು ಕುಸ್ತಿಯಾಡುತ್ತಿದೆ. ಆ ರೈತನಿಗೆ ನೇಗಿಲ ಭಾಗ್ಯ ತಪ್ಪಿ ಈ ಎರಡು ಎತ್ತುಗಳ ಕುಸ್ತಿಯನ್ನು ತಪ್ಪಿಸುವುದಕ್ಕೆ ಬಹಳ ಚಡಪಡಿಸುತ್ತಿದ್ದಾನೆ. ಏಕಾದರೂ ಈ ಎತ್ತುಗಳನ್ನು ತೆಗೆದುಕೊಂಡೆನೋ, ಏಕಾದರೂ ಈ ಎತ್ತುಗಳನ್ನು ಆರಿಸಿಕೊಂಡೆನೋ ಎಂಬ ಚಿಂತೆಯಲ್ಲಿ ರೈತನಿದ್ದಾನೆ. ಇದು ನೇಗಿಲ ಭಾಗ್ಯದ ಅವಸ್ಥೆ. ಈ ಎರಡು ಎತ್ತುಗಳು ಕೋಡು ಮುರಿದು ಕೊಂಬು ಮುರಿದು ಕೊಂಡರೆ ಅದಕ್ಕೆ ಔಷಧಿಯನ್ನು ಹಚ್ಚಿ ಆ ರೈತನೇ ಅವುಗಳನ್ನು ಬದುಕಿಸಬೇಕಾಗುತ್ತದೆ. ನೇಗಿಲ ಭಾಗ್ಯದ ಪರಿಸ್ಥಿತಿಯನ್ನು ಇವರು ಇಲ್ಲಿಗೆ ತಂದು ನಿಲ್ಲಿಸಿದ್ದಾರೆ. ಇನ್ನು

ಅಂತ್ಯೋದಯ ಕಾರ್ಯಕ್ರಮದಲ್ಲಿ ಸಾಲವನ್ನು ಕೊಡುತ್ತೇವೆಂದು ಪ್ರಚಾರ ಮಾಡಿದರು. ಇದು ಅಂತ್ಯದ ಉದಯವಾಯಿತು. ಇದನ್ನು ನೋಡಿದರೆ ಬಹಳ ಬೇಸರವಾಗುತ್ತದೆ. ಎಲ್ಲಾ ತಾಲ್ಲೂಕಿಗೂ ಇದನ್ನು ಕೊಡುತ್ತೇವೆಂದು ಮೊದಲು ಹೇಳಿದರು. ಆಮೇಲೆ ಕೆಲವು ತಾಲ್ಲೂಕುಗಳಿಗೆ, ಹೋಬಳಿಗಳಿಗೆ ಮಾತ್ರ ಕೊಡುತ್ತೇವೆ ಎಂದು ಹೇಳಿದರು. ಅದರಲ್ಲಿ ನನ್ನ ತಾಲ್ಲೂಕಾದ ಹೊನ್ನಾವರವನ್ನೂ ಸೆಲೆಕ್ಟ್ ಮಾಡಿದರು. ನನ್ನ ಹತ್ತಿರ ಕೆಲವರು ಬಂದು ಅರ್ಜಿ ಕೊಡಿಸಿ, ಸಾಲ ಕೊಡುತ್ತಾರೆಂದು ಬಂದು ಹೇಳಿದರು. ಇದೆಲ್ಲಾ ಆದಮೇಲೆ ಅಂತ್ಯೋದಯ ಎಲ್ಲಿ ಪ್ರಾರಂಭವಾಗಿದೆ ಅಲ್ಲಿ ಹೋಗಿ ಕೇಳಿದಾಗ ಅವರು ಅಲ್ಲಿ ಕೋಡಿಂಗ್ ಅನ್ನು ಮಾಡಿದರು ನಂತರ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಬ್ಯಾಂಕಿಗೆ ಕಳಿಸಿದರು. ಅಲ್ಲಿ ಹೋಗಿ ಮ್ಯಾನೇಜರ್‌ರವರನ್ನು ಕೇಳಿದರೆ ನಿಮ್ಮ ಸರ್ಕಾರದಲ್ಲಿ ದುಡ್ಡು ಇಲ್ಲ, ನಾವು ಕಳಿಸಿದ ಚೆಕ್ಸ್‌ಗಳು ಬೌನ್ಸ್ ಆಗುತ್ತವೆ, ನಿಮ್ಮದು ದಿವಾಳಿ ಸರ್ಕಾರ. ನಾವು ಏಕೆ ಸಾಲ ಕೊಡಬೇಕು, ನಾವೇಕೆ ಸಾಲ ಕೊಟ್ಟು ಸಿಕ್ಕಿಕೊಳ್ಳಬೇಕು ಎಂದು ಹೇಳುತ್ತಾರೆ. ಇದನ್ನು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್ತಿನಲ್ಲಿ ಇಟ್ಟು ಚರ್ಚೆ ಮಾಡಿದ್ದೇವೆ.

ಶ್ರೀ ರಮೇಶ್‌ಕುಮಾರ್.—ಜನಾರ್ಧನ ಪೂಜಾರಿಯವರ ಸಾಲ ಮೇಳಕ್ಕಾ......

ಶ್ರೀ ಆರ್. ಎನ್. ನಾಯಕ್.—ತಾವು ಸ್ವಲ್ಪ ಸುಮ್ಮನೆ ಕುಳಿತುಕೊಳ್ಳಿ. ನಾನು ಸತ್ಯ ಹೇಳಬೇಕಾದರೆ ತಾವು ಸುಮ್ಮನೆ ಕುಳಿತು ಕೇಳಬೇಕು.

ಶ್ರೀ ರಮೇಶ್‌ಕುಮಾರ್.—ನಾನು ಈಗ ಸತ್ಯ ಹೇಳುತ್ತೇನೆಂದು ಚೀಟಿ ಕಳಿಸಿಕೊಡಿ.

ಶ್ರೀ ಆರ್.ಎನ್. ನಾಯಕ್.—1985-86, 1986-87, 1987-88ರ ಬಗ್ಗೆ ಹೇಳಲೇ. ಸತ್ಯ ಯಾವಾಗಲೂ ನವಿರಾಗಿ ಇರುವುದಿಲ್ಲ ಸತ್ಯ ಜನರಿಗೆ ಸಂತೋಷ ತರುವುದಿಲ್ಲ. ಈ ಸರ್ಕಾರಕ್ಕೆ ನನ್ನ ಸತ್ಯ ಹೇಗೆ ಸಂತೋಷ ತರುತ್ತದೆ? ಉತ್ತರ ಕನ್ನಡ ಜಿಲ್ಲೆಯಲ್ಲಿ ಚಂಕಿ ಎಂಬ ಸ್ಥಳ ಇದೆ. ಅಲ್ಲಿ ಈ ಅಂತ್ಯೋದಯ ಯೋಜನೆಯ ಅಡಿಯಲ್ಲಿ ನಿಮ್ಮ ವರ್ಗದವರಿಗೆ ಸಾಲ ಕೊಡುತ್ತೇವೆಂದು ಹೇಳಿದರು. ಅದಕ್ಕೆ ಸರಿಯಾದಂತಹ ಪ್ರೊಸೀಜರ್ ಇಲ್ಲದೆ ಇವತ್ತಿನವರೆಗೂ ಸಾಲ ಕೊಡುವುದು ಬಾಕಿ ಇದೆ. ಇದು ಸತ್ಯವೋ ಅಸತ್ಯವೋ ಎನ್ನುವುದನ್ನು ನಿಮ್ಮ ಸರ್ಕಾರ ಬೇಕಾದರೆ ಪರಿಶೀಲನೆ ಮಾಡಲಿ. ಜಿಲ್ಲಾ ಪರಿಷತ್ ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ಕೂಡ ಇದರ ಬಗ್ಗೆ ಹೇಳಿದೆ. ಆ ಬ್ಯಾಂಕಿನ ಮ್ಯಾನೇಜರ್‌ರವರನ್ನು ಹೋಗಿ ಕೇಳಿದೆ. ಅವರನ್ನು ಕೇಳಿದರೆ ಸಾಲ ಕೊಡುವ ಆಲೋಚನೆಯಿಲ್ಲ ಎಂದು ಹೇಳುತ್ತಾರೆ. ಅಂತ್ಯೋದಯ ಯೋಜನೆಯಲ್ಲಾಗಲೀ ಬೇರೆ ಯೋಜನೆಯಲ್ಲಾಗಲೀ ಬಡವರಿಗೆ ಅನುಕೂಲವಾಗಲೀ ಎಂಬ ಉದ್ದೇಶದಿಂದ ಈ ಸ್ಕೀಮ್ ತಯಾರು ಮಾಡಿದವರ ವಂಶಸ್ಥರುಗಳೇ ಅಲ್ಲಿ ಮ್ಯಾನೇಜರ್‌ಗಳಾಗಿರುತ್ತಾರೆ. ಬ್ಯಾಂಕಿನಿಂದ ಸಾಲ ಕೊಡಬಾರದು ಎಂಬ ವಿಚಾರಧಾರೆಯನ್ನು ಯಾರು ಇಟ್ಟುಕೊಂಡಿದ್ದಾರೆಯೋ ಅವರ ವಂಶಸ್ಥರುಗಳೇ ಮ್ಯಾನೇಜರ್‌ಗಳಾಗಿರುತ್ತಾರೆ, ಇದನ್ನು ತಾವು ಒಪ್ಪುತ್ತೀರಾ?

ಶ್ರೀ ಜಿ.ಎಸ್. ಅಜ್ಜಿಬಾಳ ಹೆಗಡೆ.—ಸತ್ಯ ಮಾತನಾಡಲಿಕ್ಕೆ ಹತ್ತಿದ್ದಾರೆ. ರಾಷ್ಟ್ರೀಕೃತ ಬ್ಯಾಂಕಿನ ಮ್ಯಾನೇಜರ್ರು......

ಶ್ರೀ ಆರ್.ಎನ್. ನಾಯಕ್.—ನಾನು ಡಿಸಿಸಿ ಬ್ಯಾಂಕಿನ ವಿಚಾರ ಹೇಳಿದರೆ ಎಲ್ಲಾ ಎದ್ದು ಹೋಗುತ್ತೀರಿ, ಆಗ ಕೋರಂ ಇರುವುದಿಲ್ಲ. ಅಧ್ಯಕ್ಷರೇ, ಅಂತ್ಯೋದಯ ಯೋಜನೆಯ ಪರಿಸ್ಥಿತಿ ಈ ರೀತಿ ಇದೆ.

ಶ್ರೀ ರಾಜವರ್ಧನ್.—ಇದೇರೀತಿ ನೀವು ಮಾತನಾಡುತ್ತಾ ಇದ್ದರೆ, ಎಲ್ಲರೂ ಹೊರಗೆ ಹೋಗಬೇಕಾಗುತ್ತದೆ.

ಶ್ರೀ ಆರ್. ಎನ್. ನಾಯಕ್.—ಸತ್ಯವನ್ನು ಕೇಳಿದರೆ ನಿಮಗೆ ತಲೇ ಹೊಡೆದ ಹಾಗೆ ಆಗುತ್ತದೆ. ಬಹಳ ನೋವಾಗುತ್ತದೆ. ಅದನ್ನು ನಿಮಗೆ ಸಹಿಸುವುದಕ್ಕಾಗುವುದಿಲ್ಲ. ಅದೇ ಬೇರೆ ಬೇರೆ ಸುಳ್ಳನ್ನು ಹೇಳಿದರೆ ನಿಮಗೆ ಬಹಳ ಖುಷಿ. ಈ ಅಂತ್ಯೋದಯ ಯೋಜನೆಯನ್ನು ನೀವು ಇಟ್ಟುಕೊಂಡರೆ, ಈ ಸರ್ಕಾರ ಈ ಕಾರ್ಯಕ್ರಮವನ್ನು ಚೆನ್ನಾಗಿ ಇಟ್ಟುಕೊಂಡರೆ ಈ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಅದು ಆಗುವುದಿಲ್ಲ ಎಂದು ಹೇಳಿದರೆ ಬಿಡಿ.

ಅಧ್ಯಕ್ಷರು.—ನಾಯಕರೇ, ತಾವು ಮುಕ್ತಾಯ ಮಾಡಿ. ಎಲ್ಲರೂ ನಗುವಂಥಾದ್ದು ಹೇಳಿ ಮುಗಿಸಿ.

ಶ್ರೀ ಆರ್. ಎನ್. ನಾಯಕ್.—ಆರ್. ಎಲ್. ಇ. ಜಿ. ಪಿ. ಮತ್ತು ಎನ್. ಆರ್. ಇ. ಪಿ. ಯೋಜನೆ ನಿಮ್ಮ ಹತ್ತಿರ ಏನಾಗಿದೆ? ಇದಕ್ಕೆ ಬರುವಂಥ ಹಣವೆಲ್ಲಾ ಕೇಂದ್ರಸರ್ಕಾರದ ಹಣ ಅದು ಯಾವ ಸರ್ಕಾರದಿಂದಲಾದರೂ ಬರಲಿ, ನಿಮ್ಮದು ೫೦ ಪರ್ಸೆಂಟ್ ಈ ಎನ್. ಆರ್. ಇ. ಪಿ. ಯಲ್ಲಿ ಇರಬಹುದು. ಎನ್. ಆರ್. ಇ. ಪಿ. ಏನೇನು ಮಾಡಬೇಕು, ಯಾವ ಯಾವ ಕೆಲಸಗಳನ್ನು ಎನ್. ಆರ್. ಇ. ಪಿ. ಯಲ್ಲಿ ತೆಗೆದುಕೊಳ್ಳಬೇಕು ಎನ್ನುವಂಥ ಒಂದು ವ್ಯವಸ್ಥೆ ಇದೆ. ಎನ್. ಆರ್. ಇ. ಪಿ. ಹಣವನ್ನು ಉಪಯೋಗಿಸಬೇಕಾದರೆ ೫೦ ಪರ್ಸೆಂಟ್ ನಾರ್ಮ್ಸ್ ಪ್ರಕಾರ ಖರ್ಚು ಮಾಡುತ್ತಿದ್ದೀರಾ ? ತಾವೇ ಹೇಳಿ. ತಮಗೂ ಗೊತ್ತಿದೆ. ಖಂಡಿತವಾಗಿ ನೀವು ಖರ್ಚು ಮಾಡುವುದಿಲ್ಲ. ಉದಾಹರಣೆಗೆ ಹೇಳುತ್ತೇನೆ. ನಾನು ಮತ್ತು ನಮ್ಮ ದೇಶ್‌ಪಾಂಡೆಯವರು ಒಂದು ಕಟ್ಟಡದ ಉದ್ಘಾಟನೆಯನ್ನು ಮಾಡಲಿಕ್ಕೆ ಹೋಗಿದ್ದೆವು. ಹೊನ್ನಾವರದ ಹತ್ತಿರ ಗುಂಡಬಾಳ ಎಂಬ ಊರು. ಅಲ್ಲಿನ ಜನರು ದೇಶ್‌ಪಾಂಡೆಯವರನ್ನು ಬಹಳ ಪ್ರೀತಿಯಿಂದ ಕರೆದರು. ನನ್ನನ್ನು ಉಪಾಯ ಇಲ್ಲದೇ ಕರೆದರು. ನಾನು ಎಂ. ಎಲ್. ಎ. ಆಗಿರುವುದರಿಂದ ಅಲ್ಲಿನ ಕಾರ್ಯಕ್ರಮಕ್ಕಾಗಿ ನನ್ನನ್ನು ಅಧ್ಯಕ್ಷನನ್ನಾಗಿ ಕರೆಯಬೇಕಾಗುತ್ತದೆ. ಅಲ್ಲಿ ಒಂದು ರಂಗಮಂಟಪವನ್ನು ಕಟ್ಟಿಸಿದ್ದಾರೆ. ಆ ರೀತಿ ಕಟ್ಟಿಸಬೇಕಾದರೆ ಸರ್ಕಾರದ ಆಸ್ತಿ ಇರಬೇಕು. ನೆಲ ಸರ್ಕಾರದ್ದು ಆಗಬೇಕು ತಾನೆ ? ಸರ್ಕಾರ ಯಾರದ್ದೋ ತೋಟದಲ್ಲಿ ಯಾರದೋ ಹೊಲದಲ್ಲಿ ಅದನ್ನು ಕಟ್ಟುವುದಕ್ಕಾಗುವುದಿಲ್ಲ, ಅಲ್ಲಿ ರಂಗಮಂಟಪವನ್ನು ಕಟ್ಟುವುದಕ್ಕೆ ಬರುವುದಿಲ್ಲ. ಆದರೂ ಅಲ್ಲಿ ರಂಗಮಂಟಪವನ್ನು ಕಟ್ಟಿದರು. ಯಾವ ರೀತಿ ಕಟ್ಟಿದರು ಎಂದು ಹೇಳಿದರೆ, ಯಾರೋ ಒಬ್ಬ ಕ್ರಿಶ್ಚಿಯನ್ ಮನುಷ್ಯ, ಅವನ ನೆಲದಲ್ಲಿ ಈ ರಂಗಮಂಟಪವನ್ನು ಕಟ್ಟಿದ್ದಾರೆ. ಇಂತಹ ರಂಗಮಂಟಪವನ್ನು ಶ್ರೀ ದೇಶ್‌ಪಾಂಡೆಯವರು ಉದ್ಘಾಟನೆ ಮಾಡುತ್ತಾರೆ, ಅಲ್ಲಿ ನಾನು ಭಾಷಣ ಮಾಡುತ್ತೇನೆ. ನಾನು ಆಗಲೇ ಹೇಳಿದೆ. ಈ ರೀತಿ ತಪ್ಪು ಮಾಡಿದ್ದೀರಿ, ಸರ್ಕಾರದ ಹಣ ಖರ್ಚುಮಾಡಿ ಪ್ರೈವೇಟ್ ನೆಲದಲ್ಲಿ ಈ ರೀತಿ ಕಟ್ಟಿಸಿರುವ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತಗೆದುಕೊಳ್ಳುತ್ತೀರಿ ? ಖಂಡಿತ ಈ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಹೇಳಿದೆ.

ಶ್ರೀ ಆರ್. ವಿ. ದೇಶ್‌ಪಾಂಡೆ.—ನಿಮ್ಮ ಕ್ಷೇತ್ರದಲ್ಲಿ ಕಲ್ಯಾಣಮಂಟಪ ಆಗುತ್ತದೆ.

(ನಗು)

ಅಧ್ಯಕ್ಷರು.—ನಾಯಕರೇ ಮುಕ್ತಾಯ ಮಾಡಿ.

ಶ್ರೀ ಆರ್. ಎನ್. ನಾಯಕ್.—ಎರಡೇ ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಕಲ್ಯಾಣ ಮಂಟಪ ಆಗುವುದು ಬೇಡ, ನನ್ನ ಕ್ಷೇತ್ರದಲ್ಲಿ ವಿಧಾನಸೌಧ ಆಗಲಿ, ಅದು ನನಗೆ ಬೇಕು. ಆದರೆ ಇದು ಪ್ರೈವೇಟ್ ಜಾಗದಲ್ಲಿ ಆಗಿದೆ. ಈ ರಂಗಮಂಟಪ ಪ್ರೈವೇಟ್ ಜಾಗದಲ್ಲಿ ಆಗಿದೆ. ಈ ರೀತಿ ಕಟ್ಟಿದ ಮೇಲೆ ಇವರ ಜನ ಏನು ಹೇಳಿದರು ಎಂದರೆ ೧೨ ವರ್ಷದವರೆಗೆ ಮೇಲ್ವರ್ಗದ ಜನರಿಗೆ ಈ ರಂಗಮಂಟಪ ಬುಕ್ ಆಗಿದೆ ಎಂದು ಹೇಳಿದರು. ಎನ್. ಆರ್. ಇ. ಪಿ. ಯಿಂದ ರಂಗಮಂಟಪವನ್ನು ಕಟ್ಟಿಸಿ ೧೨ ವರ್ಷದವರಿಗೆ ಒಂದು ವಿಶಿಷ್ಟವಾದ ವರ್ಗಕ್ಕೆ ಅಂದರೆ ಮೇಲ್ವರ್ಗದವರಿಗೆ ಯಕ್ಷಗಾನ ಕುಣಿತಕ್ಕೆ ಕೊಡಲು ಎನ್. ಆರ್. ಇ. ಪಿ. ಕಾರ್ಯಕ್ರಮದ ಹಣವನ್ನು ತೆಗೆದುಕೊಂಡು ಈ ರೀತಿ ರಂಗಮಂಟಪವನ್ನು ಕಟ್ಟಿದ್ದಾರೆ. ಈ ರೀತಿ ಮಾಡುವುದಕ್ಕೆ ಬರುತ್ತದೆಯೇ ? ಇದು ಯೋಗ್ಯವೇ ? ಮಧ್ಯದಲ್ಲಿ ಬೇರೆಯವರು ಮಾತನಾಡಿದ್ದರಿಂದ ಇದನ್ನು ಹೇಳಬೇಕಾಯಿತು.

ಅಧ್ಯಕ್ಷರು.—ನಾಯಕರೇ ಮುಕ್ತಾಯ ಮಾಡಿಬಿಡಿ.

ಶ್ರೀ ಆರ್. ಎನ್. ನಾಯಕ್.—ನಾನು ಹೇಳುವುದಕ್ಕೆ ಇನ್ನೂ ಇತ್ತು. ಮಂಡಲಪಂಚಾಯಿತಿ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಈ ಬೇಡಿಕೆ ಇದು ಮಂಡಲ್ ಪಂಚಾಯಿತಿಗೆ ಸಂಬಂಧಪಟ್ಟಿದ್ದು ಬಹಳ ಸೀರಿಯಸ್ ಆದ ವಿಚಾರ. ಪ್ರತಿ ಮಂಡಲ್ ಪಂಚಾಯಿತಿಗೆ ೮-೧೦ ಲಕ್ಷ ಹಣ ಸಿಗುತ್ತದೆ; ಎಂದು ಹೇಳಿದ್ದೀರಿ.

ಅಧ್ಯಕ್ಷರು.—ನಾಯಕರೆ, ಆ ಕಡೆ ಏಕೆ ನೋಡುತ್ತೀರಿ, ಬೇಗ ಮುಕ್ತಾಯ ಮಾಡಿ.

ಶ್ರೀ ಆರ್. ಎನ್. ನಾಯಕ್.—ಸಾಕಷ್ಟು ಹಣ ಬರುತ್ತದೆ. ಅಲ್ಲಿ ರಸ್ತೆ ಆಗುತ್ತದೆ, ಇಲ್ಲಿ ರಸ್ತೆ ಆಗುತ್ತದೆಂದು ಹೇಳಿದ್ದರೂ ನಮ್ಮ ಜಿಲ್ಲೆಯಲ್ಲಿ ೧,೨೦೦ ರಿಂದ ಪ್ರಾರಂಭವಾಗಿ ೩-೪ ಸಾವಿರ ಒಂದೊಂದು ಪಂಚಾಯಿತಿಗೆ ಬರುತ್ತದೆ. ಅದರಲ್ಲಿ ೫೦೦-೬೦೦ ಹೋಗಿಬಿಡುತ್ತದೆ. ಮಂಡಲ ಪಂಚಾಯಿತಿಯವರು ಬಹಳ ಕಷ್ಟದಲ್ಲಿದ್ದಾರೆ. ಇನ್ನು ಲೈಟಿಗೆ ಅಂತ ಕೆ. ಇ. ಬಿ. ಯವರು ಕಿತ್ತು

ಕೊಳ್ಳುತ್ತಾರೆ. ಅವರ ಹತ್ತಿರ ಯಾವ ಕೆಲಸಕ್ಕೂ ಹಣವೇ ಇಲ್ಲ. ಇತಹ ದುರವಸ್ಥೆ ಪ್ರಧಾನರಿಗೆ ಬಂದಿದೆ. ಸಾಮಾನ್ಯಜನರು ಪ್ರಧಾನರಿಗೆ ನೀವು 300 ರೂಪಾಯಿ ಸಂಬಳ ತೆಗೆದುಕೊಳ್ಳುತ್ತೀರಾ, ಈ ರಸ್ತೆಗೆ ಮಣ್ಣು ಹಾಕಿಸಿ, ಆ ರಸ್ತೆಗೆ ಮಣ್ಣು ಹಾಕಿಸಿ, ಎಂದು ಕೇಳುತ್ತಿದ್ದಾರೆ. ಈ ಸರ್ಕಾರ ಬಹಳ ಒಳ್ಳೆಯ ಕೆಲಸ ಮಾಡಿದೆ, ಅದು ಏನೆಂದರೆ ನೇರವಾಗಿ ಜನ ನಮ್ಮನ್ನು ಕಾಣುವುದಕ್ಕೆ ಆಗುವುದಿಲ್ಲ. ಪ್ರಧಾನರುಗಳನ್ನು ಜಿಲ್ಲಾಪರಿಷತ್ತು ಸದಸ್ಯರುಗಳನ್ನು ಕಾಣಬೇಕಾಗುತ್ತದೆ. ಆದರಿಂದ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಈಗ ನನ್ನ ವಿಚಾರವೇನೆಂದರೆ ಮಂಡಲ ಪಂಚಾಯಿತಿಗೆ ತಿಂಗಳಿಗೆ 10 ಸಾವಿರ ರೂಪಾಯಿಗಳು ಬರುವ ಹಾಗೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ಪ್ರಧಾನರಿಗೆ ಹೆಚ್ಚು ಅಧಿಕಾರ ಇರಬೇಕು. ಅಲ್ಲಿನ ಸೆಕ್ರೆಟರಿ ತಪ್ಪು ಮಾಡಿದರೆ ಕಾನೂನು ಪ್ರಕಾರ ಮಂಡಲ ಪ್ರಧಾನರಿಗೆ ಅವರನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವಂತೆ ಯಾವುದೇ ಒಂದು ಶಕ್ತಿ ಇಲ್ಲ. ಜಿಲ್ಲಾ ಪರಿಷತ್ತಿನವರು ಈ ಕೆಲಸವನ್ನು ಮಾಡಬೇಕು. ಕಾರ್ಯದರ್ಶಿಗಳು ಬಹಳ ಬುದ್ಧಿವಂತರು, ಈ ಕಾರ್ಯದರ್ಶಿಗಳಿಗೆ ಎಂದೂ ಬೇರೆಯವರ ಮಾತನ್ನು ಕೇಳುವ ಅಭ್ಯಾಸವಿಲ್ಲ. ಇವರು ಚಿತ್ರಗುಪ್ತರು ಇದ್ದಂತೆ. ಅಡ್ಜಸ್ಟ್‌ಮೆಂಟ್ ಮಾಡಿಕೊಂಡರೆ ಮಾತ್ರ ಪ್ರಧಾನರು ಚೆನ್ನಾಗಿರುತ್ತಾರೆ. ಇಲ್ಲದೆ ಹೋದರೆ ಅವರು ಏನು ಮಾಡುವುದಕ್ಕೂ ಹೋಗುವುದಿಲ್ಲ. ಏಕೆಂದರೆ ಅವರಿಗೆ ಟ್ರಾನ್ಸ್‌ಫರ್ ಮತ್ತೊಂದು ಮಾಡುತ್ತಾರೆ.

ಅಧ್ಯಕ್ಷರು.—ಮುಕ್ತಾಯ ಮಾಡಿ, ಚಲೋ ಅಂತ ಹೇಳಿದರೂ ಮತ್ತೆ ಮುಂದಕ್ಕೆ ಹೋಗುತ್ತೀರಿ, ಉಸ್ತಾದ್ ಅವರು ಹೇಗೆ ಮಾತನಾಡಿದರು ನೋಡಿ;

ಶ್ರೀ ಬಿ. ಎಂ. ಇದಿನಬ್ಬ.—ಇದು ಬಹಳ ಪ್ರಾಮುಖ್ಯವಾದಂತಹ ಬೇಡಿಕೆ.

ಶ್ರೀ ಆರ್. ಎನ್. ನಾಯಕ್.—ನೀವು ಬಹಳ ಒಳ್ಳೆಯ ಅವಕಾಶ ಮಾಡಿಕೊಟ್ಟಿದ್ದೀರಿ, ಮಾನ್ಯ ಮಂತ್ರಿಗಳು ಇದನ್ನು ನಗುನಗುತ್ತಾ ಕೇಳಿದ್ದಾರೆ. ನಿಮಗೆಲ್ಲಾ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಸನ್ಮಾನ್ಯ ಅಧ್ಯಕ್ಷರೇ, ಗಾಂಧೀಜಿಯವರ ಕನಸಿನ ರಾಮರಾಜ್ಯವನ್ನು ಜಿಲ್ಲಾ ಪರಿಷತ್ತು ಮಂಡಳ ಪಂಚಾಯತಿ ಕಾನೂನು ಮೂಲಕ ಧರೆಗಿಳಿಸಿ ತಂದಿದ್ದೇವೆಂದು ಈ ಸರ್ಕಾರ ಹೇಳಿಕೊಂಡಿದೆ. ಹಿಂದೆ ಕೂಡ ಈ ವ್ಯವಸ್ಥೆ ಇತ್ತು. ಆದರೆ ಅದಕ್ಕೆ ಸಾಕಷ್ಟು ಪೋಷಣೆ ಇಲ್ಲದೆ ಇದ್ದರೂ 1983ರಲ್ಲಿ ಅದನ್ನು ನಾಶಮಾಡಿ ಕೆಲವು ವರ್ಷಗಳ ಕಾಲ ಅಧಿಕಾರಿಗಳ ಕೈಯಲ್ಲಿ ಕೊಟ್ಟಮೇಲೆ, 87ರಲ್ಲಿ ಹಿಂದಿನ ವ್ಯವಸ್ಥೆಯ ಗೋರಿಯ ಮೇಲೆ ನೆಟ್ಟ ಸಸಿ ಇದು. ಇದು ಪ್ರಥಮವಾಗಿ 1-2 ವರ್ಷಗಳ ಕಾಲ ಸ್ವಲ್ಪ ಚಿಗುರಬಹುದು. ಅದಕ್ಕೆ ಸಾಕಷ್ಟು ನೀರು ಆಹಾರ ಕೊಡದೇ ಇದ್ದರೆ ಅದು ನರಳುತ್ತದೆ, ಸೊರಗುತ್ತದೆ. ನಂತರ ಒಣಗುತ್ತದೆ. ಪ್ರಥಮ ವರ್ಷದಲ್ಲಿ ಏನಾಗಿದೆ ಎಂದರೆ ಅಲಾಟ್‌ಮೆಂಟ್ ಪೂರ್ತಿ ಕೊಟ್ಟಿಲ್ಲ. 950 ಕೋಟಿಗಳನ್ನು ಕೊಡುತ್ತೇವೆಂದು ಹೇಳಿದ ಈ ಸರ್ಕಾರ 414 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದೆ. ಯೋಜನೆಗಳಿಗೆ ಸಂಬಂಧಪಟ್ಟಂತೆ 506 ಕೋಟಿ ರೂಪಾಯಿಗಳಲ್ಲಿ 472 ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆ ಆಗಿದೆ. ಅಂದರೆ ನನಗೆ ತಿಳಿದಮಟ್ಟಿಗೆ 64 ಕೋಟಿ ರೂಪಾಯಿಗಳು ಇನ್ನೂ ಬಿಡುಗಡೆ ಆಗಿಲ್ಲವೆಂದು ತಿಳಿದುಬರುತ್ತದೆ. 2469 ಮಂಡಲ ಪಂಚಾಯತಿಗಳಲ್ಲಿ ಆರು ತಿಂಗಳಿಗೊಮ್ಮೆ ಗ್ರಾಮ ಸಭೆಯು ಸಮರ್ಪಕವಾಗಿ ನಡೆಯಬೇಕು. ಇದು ಆಗಿದೆಯೋ ಅಥವಾ ಇಲ್ಲವೇ ಎಂದು ನೋಡುವವರು ಯಾರು? ನನ್ನ ತಾಲ್ಲೂಕಿನಲ್ಲಿ ಆಗುತ್ತಿರುವ ಗ್ರಾಮಸಭೆಯನ್ನು ನೋಡಿದ್ದೇನೆ. ಅಲ್ಲಿ 10-15 ಜನ ಇರುತ್ತಾರೆ. ಇದು ನಿಜವಾದ ಗ್ರಾಮ ಸಭೆಯ ಕಲ್ಪನೆ ಅಲ್ಲ. ಗ್ರಾಮದ ಎಲ್ಲ ಜನರೂ ಸೇರಿ ಸಲಹೆಗಳನ್ನು ಕೊಡಬೇಕು. ಮಂಡಲ ಪಂಚಾಯತಿಗಳು ಈಗ ಏನು ಸಾಧನೆ ಮಾಡಿವೆ? ಮುಂದಿನ ಗುರಿ ಏನು ಎಂದು ಹೇಳಬೇಕು? ಜನರಿಂದ ಬರೀ ಅರ್ಜಿಗಳನ್ನು ತೆಗೆದುಕೊಳ್ಳುವುದು ಗ್ರಾಮ ಸಭೆಯ ಕಲ್ಪನೆ ಅಲ್ಲ. ಗ್ರಾಮಸಭೆ ಸರಿಯಾಗಿ ಆಗುವಹಾಗೆ ನೋಡಿಕೊಳ್ಳಬೇಕು. ಸಮಯ ಕಡಿಮೆ ಇರುವುದರಿಂದ ವಿಸ್ತಾರ ಮಾಡಲಿಕ್ಕೆ ಹೋಗುವುದಿಲ್ಲ. ಪ್ರಧಾನರು, ಕಾರ್ಯದರ್ಶಿಗಳಿಗೆ ಸರಿಯಾದ ತರಬೇತಿಯನ್ನು ಕೊಡಬೇಕು. ಇದೇ ರೀತಿ ತಾಲ್ಲೂಕ್ ಪಂಚಾಯತ್ ಸಮಿತಿ, ಜಿಲ್ಲಾ ಪರಿಷತ್ ಹಾಗೂ ಮಂಡಳ ಪಂಚಾಯತಿ ಕಾರ್ಯವನ್ನು ಕಾರ್ಯರೂಪಕ್ಕೆ ತರುವ ಸಮನ್ವಯದ ಪ್ರತಿನಿಧಿ ಸಮಿತಿ ಎಂದು ನಿಮ್ಮ ವರದಿಯಲ್ಲಿ ಹೇಳಿದೆ. ಈ ರೀತಿ ಇವತ್ತು ನೋಡುತ್ತಿಲ್ಲ. ಒಬ್ಬರು ಅಧಿಕಾರಿಗಳು ನಮ್ಮ ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪಂಚಾಯತಿ ಸಮಿತಿ ಎನ್ನುವುದು ರಿವ್ಯೂ ಕಮಿಟಿ ಎಂದು ಹೇಳಿದರು. ತಾಲ್ಲೂಕು ಪಂಚಾಯತಿಯ ಅಧ್ಯಕ್ಷರು ಆ ಸಮಿತಿಯ ಅಧ್ಯಕ್ಷತೆ ವಹಿಸುವುದನ್ನು ಬಿಟ್ಟರೆ ಅವರ ಕೆಲಸ ಮುಗಿಯಿತು, ಇನ್ನೇನೂ ಮಾಡುವಂತಿಲ್ಲ. ಅವರಿಗೆ ಅಲ್ಲಿ ಒಂದು ರೂಪಾಯಿ ಕೂಡ ಕೊಡಬೇಕಾಗಿಲ್ಲ. ಪುಣ್ಯವಶಾತ್ ಸರ್ಕಾರದ ಆಜ್ಞೆ ಬಂತು, ಅದೆಲ್ಲಾ ಸರಿಯಾಗಿದೆ. ಆದರೆ ಈ ರೀತಿಯ ಮನೋಭಾವನೆ ಇರುವಂತಹದು ಸಮರ್ಪಕವಲ್ಲ. ಈ ಒಂದು ಹೊಸ ವ್ಯವಸ್ಥೆಯಿಂದಾಗಿ ಒಂದು ಕಾಲದಲ್ಲಿ ಅಂದರೆ ಎಸ್.ಕೆ. ಡೇ ಅವರ ಕಾಲದಲ್ಲಿ ಬಹಳ ಶಕ್ತಿಶಾಲಿ ಅಧಿಕಾರಿಯಾಗಿದ್ದ ಬಿ.ಡಿ.ಓ. ಅವರನ್ನು ಇಂದು ಶಕ್ತಿ ಇಲ್ಲದ ಅಧಿಕಾರಿಯನ್ನಾಗಿ ಮಾಡಿದ್ದೀರಿ. ಈ ಮೊದಲು ಗ್ರಾಮೀಣಾಭಿವೃದ್ಧಿ ಮತ್ತು ಸಮಾಜ ವಿಕಾಸ ಯೋಜನೆಗಳ ಸಂಬಂಧದಲ್ಲಿ ಈ ಬಿ.ಡಿ.ಓ. ಅವರು ಬಹಳ ಶಕ್ತಿಶಾಲಿಯಾದ ಅಧಿಕಾರಿ ಆಗಿದ್ದರು. ಅವರು ಗ್ರಾಮಾಭಿವೃದ್ಧಿಯ ಕೇಂದ್ರ ಬಿಂದು ಆಗಿದ್ದರು. ಆದರೆ ಈಗ ಇವರಿಗೆ ಯಾವ ಅಧಿಕಾರವೂ ಇಲ್ಲ, ಅವರಿಗೆ ಮತ್ತೆ ಅಧಿಕಾರ ಮತ್ತು ಶಕ್ತಿ ಕೊಡುವ ಬಗ್ಗೆ ತಾವು ಚಿಂತನೆ ಮಾಡಬಹುದು.

ಇನ್ನು ಮಂಡಲ ಪಂಚಾಯಿತಿಗಳು ಜಿಲ್ಲಾ ಪರಿಷತ್‌ಗೆ ಬಹಳ ದೂರದಲ್ಲಿರುತ್ತವೆ. ಇದರಿಂದ ಹಣದ ಹಂಚಿಕೆ ಮಾಡುವ ಬಗ್ಗೆಯಾಗಲೀ ಅಥವಾ ಮತ್ತೊಂದು ವಿಚಾರದ ಬಗ್ಗೆ ಚರ್ಚೆ ಮಾಡಲು ಜಿಲ್ಲಾ ಪರಿಷತ್‌ಗೆ ಬರಲು ಮಂಡಲ ಪಂಚಾಯತ್ ಪ್ರಧಾನರಿಗೆ ಅವಕಾಶವಿರುವುದಿಲ್ಲ. ಆದ್ದರಿಂದ ಹಣವನ್ನು ನೀವು ತಾಲ್ಲೂಕ್‌ವೈಸ್ ಅಲಾಟ್‌ಮೆಂಟ್ ಮಾಡಬಹುದು. ಇದರ ಬಗ್ಗೆ ನೀವು ಚಿಂತನೆ ಮಾಡಬಹುದು. ಇದನ್ನು ಮಾನ್ಯ ನಜೀರ್‌ಸಾಬ್ ಅವರ ಗಮನಕ್ಕೆ ತಂದಾಗ ಅವರು ಆಲೋಚನೆ ಮಾಡುತ್ತೇವೆಂದು ಹೇಳಿದ್ದರು. ಆದರೆ ಅದು ಇನ್ನೂ ಅನುಷ್ಠಾನದಲ್ಲಿ ಬರಲಿಲ್ಲ. ಮಂಡಲ್ ಪಂಚಾಯಿತಿ ನಂಬರ್-2 ಪ್ರೋಗ್ರಾಂನಲ್ಲಿ ಬೇರೆ ಬೇರೆ ಇಲಾಖೆಗಳು ಬರುತ್ತವೆ. ಆದರೆ ಅಭಿವೃದ್ಧಿ ಕೆಲಸಗಳನ್ನು ಕೈಕೊಳ್ಳಲು ಹಣ ಮಾತ್ರ ಬರುತ್ತಿಲ್ಲ. ಅಷ್ಟೇ ಅಲ್ಲ, ಜಿಲ್ಲಾ ಪರಿಷತ್‌ಗೂ ಮತ್ತು ಮಂಡಲ ಪಂಚಾಯತ್‌ಗೂ ಸಹ ಹಣ ಸರಿಯಾಗಿ ಬರುತ್ತಿಲ್ಲ. ಆದ್ದರಿಂದ ಈ ಬಗ್ಗೆ ಸಮರ್ಪಕವಾಗಿ ಮತ್ತು ಸರಿಯಾಗಿ ವಿಮರ್ಶೆ ಆಗಬೇಕಾಗಿದೆ. ಜಿಲ್ಲಾ ಪರಿಷತ್‌ಗೆ ಸಂಬಂಧಪಟ್ಟಂತೆ ಹೇಳಬೇಕೆಂದರೆ ನಾನು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್‌ನ್ನು ಉದಾಹರಣೆಯಾಗಿ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಬೇರೆ ಕಡೆಗಳಲ್ಲಿ ಏನಾಗಿದೆ ಎಂಬುದು ನನಗೆ ಗೊತ್ತಿಲ್ಲ. ಈಗ ನಮ್ಮ ಜಿಲ್ಲಾ ಪರಿಷತ್‌ನಲ್ಲಿ ಒಂದು ಸಾವಿರ ಹುದ್ದೆಗಳು ಖಾಲಿ ಇವೆ. ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಂತೆ ಇಷ್ಟೊಂದು ಹುದ್ದೆಗಳು ಖಾಲಿ ಇವೆ. ಆದ್ದರಿಂದ ಈ ಖಾಲಿ ಹುದ್ದೆಗಳಿಗೆ ಪೋಸ್ಟ್ ಮಾಡಬೇಕು. ಈಗ ಕೆಲವು ನೇಮಕಗಳು ಸರ್ಕಾರದಿಂದ ನೇರವಾಗಿ ಆಗಿವೆ. ಆದರೆ ಎಲ್ಲಿ ಜನರು ಇದ್ದಾರೋ, ಅಂತಹ ಕಡೆಗಳಿಗೆ ನೇಮಕಗಳು ಆಗಿವೆ. ಇದರ ಬದಲು ಜಿಲ್ಲಾ ಪರಿಷತ್‌ಗೆ ಇಂತಿಷ್ಟು ಜನರನ್ನು ತಾವು ಕಳುಹಿಸಿಕೊಟ್ಟರೆ, ಜಿಲ್ಲಾ ಪರಿಷತ್‌ನವರೇ ತಮಗೆ ಎಲ್ಲಿಗೆ ಬೇಕೋ ಅಲ್ಲಿಗೆ ನೇಮಕ ಮಾಡುತ್ತಾರೆ. ಮತ್ತೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಏಡೆಡ್ ಶಾಲೆಗಳಿಗೆ ಸುಮಾರು 74 ಲಕ್ಷ ರೂಪಾಯಿಗಳಷ್ಟು ಅನುದಾನ ಕೊಡುವುದು ಬಾಕಿ ಇದೆ. ಇದನ್ನು ಸರ್ಕಾರ ಕೂಡಲೇ ಬಿಡುಗಡೆ ಮಾಡಬೇಕು. ಇದರ ಜೊತೆಗೆ ಲೋಕೋಪಯೋಗಿ ಇಲಾಖೆಯವರು ಪ್ರಾರಂಭ ಮಾಡಿ ಇನ್ನೂ ಮುಗಿಯದಿರುವ ಹಳೆಯ ಕಾಮಗಾರಿ ಕೆಲಸಗಳು ಅಂದರೆ ಎಂ.ಎನ್.ಪಿ. ರೋಡ್‌ಗಳ ಕೆಲಸ, ಸೇತುವೆಗಳ ಕೆಲಸ ಬಾಕಿ ಉಳಿದಿವೆ. ಈ ಕೆಲಸಗಳನ್ನು ಮಂಡಲ ಪಂಚಾಯಿತಿಗಳ ನಂಬರ್-2 ಪ್ರೋಗ್ರಾಮ್‌ನಲ್ಲಿ ಅವರಿಗಿರುವಂತಹ ಅಲಾಟ್‌ಮೆಂಟ್‌ನಲ್ಲಿಯೇ ಮಾಡುತ್ತಾ ಹೋದರೆ ಅವು ಮುಗಿಯಲು ಇನ್ನು 15 ವರ್ಷಗಳು ಬೇಕಾಗುತ್ತದೆ. ಆದ್ದರಿಂದ ಈ ಕೆಲಸಗಳನ್ನು ಜಾಗ್ರತೆ ಮುಗಿಸಲು ಸರ್ಕಾರದವರು ವಿಶೇಷ ಆರ್ಥಿಕ ನೆರವನ್ನು ಕೊಡಬೇಕು. ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್‌ನವರು ಕೆಲವು ಹೊಸ ಯೋಜನೆಗಳನ್ನು ಕೈಕೊಳ್ಳಲು ಬ್ಯಾಂಕ್‌ಗಳಿಂದ ಸಹಾಯ ಪಡೆದುಕೊಳ್ಳಲು ಆಲೋಚನೆ ಮಾಡಿದ್ದಾರೆ. ಇದರ ಬಗ್ಗೆ ಅವರು ಸಮಾಲೋಚನೆಯನ್ನು ಸಹ ಮಾಡಿದ್ದಾರೆ. ಇದರ ಕುರಿತು ಈಗಾಗಲೇ ಅಲ್ಲಿಂದ ಸರ್ಕಾರಕ್ಕೆ ಒಂದು ಪತ್ರ ಬಂದಿರಬಹುದೆಂದು ನಾನು ಭಾವಿಸುತ್ತೇನೆ. ಈ ಹೊಸ ಕೆಲಸಗಳನ್ನು ಕೈಕೊಳ್ಳಲು ತಾವು ಮಂಜೂರಾತಿಯನ್ನು ಕೊಡಬೇಕು. ಇದೊಂದು ಹೊಸ ಪ್ರಯೋಗ, ನಮ್ಮ ಜಿಲ್ಲೆಯಿಂದಲೇ ಇದು ಪ್ರಾರಂಭವಾಗಲಿ. ತಾವು ಅನುಮತಿ ಕೊಟ್ಟರೆ ಅವರು ಬ್ಯಾಂಕ್‌ಗಳಿಂದ ಸಹಾಯ ಪಡೆದುಕೊಂಡು ಬೇಸಾಯಕ್ಕೆ ಸಂಬಂಧಪಟ್ಟ ಯೋಜನೆಗಳನ್ನು, ನೀರಾವರಿ ಕಾಮಗಾರಿ ಕೆಲಸಗಳನ್ನು ಹಾಗೂ ಮಿನಿ ವಿದ್ಯುತ್ ಯೋಜನೆಗಳ ಕೆಲಸಗಳನ್ನು ಕೈಕೊಳ್ಳಬೇಕೆಂದಿದ್ದಾರೆ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತಿಗಳಿಗೆ ಸಂಬಂಧಪಟ್ಟಂತೆ ಸರ್ಕಾರದವರು ಸರ್ವೀಸ್ ನಿಯಮಗಳನ್ನು ಇನ್ನೂ ರಚನೆ ಮಾಡಲಿಲ್ಲ. ಈ ಕೆಲಸವನ್ನು ಬೇಗ ಮಾಡಬೇಕು. ಈಗ ಸದ್ಯಕ್ಕೆ ಸರ್ಕಾರದ ವಿವಿಧ ಇಲಾಖೆಗಳಿಂದ ಅಧಿಕಾರಿಗಳು ಬಂದು ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಕೆಲಸ ಮಾಡಲು ನೀವು ಅಧಿಕಾರಿಗಳನ್ನು ಎರವಲಾಗಿ ಕೊಟ್ಟರೆ, ಅವರಿಗೆ ನಾವು ಜಿಲ್ಲಾ

ಪರಿಷತ್ತಿನ ಕೆಳಗೆ ಕೆಲಸ ಮಾಡುತ್ತಿದ್ದೇವೆಂಬ ಭಾವನೆ ಬರುವುದಿಲ್ಲ. ಈಗ ಕೆಲಸ ಮಾಡುತ್ತಿರುವವರಿಗೆ ಆ ಒಂದು ಭಾವನೆ ಬಂದಿಲ್ಲ. ಈಗ ಅಲ್ಲಿ ಜಿಲ್ಲಾ ಪರಿಷತ್‌ನ ಅಭಿವೃದ್ಧಿ ಕೆಲಸಗಳ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಈ ಅಧಿಕಾರಿಗಳಿಗೆ ತಾವು ಸರ್ಕಾರದ ನಾನಾ ಇಲಾಖೆಗಳ ಅಧಿಕಾರಿಗಳೆಂಬ ಭಾವನೆಯೇ ಇರುತ್ತದೆ. ಇದರಿಂದ ಅಲ್ಲಿನ ಕೆಲಸಗಳು ಸರಿಯಾಗಿ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಇದರ ಬಗ್ಗೆಯೂ ಸಹ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಸರ್ಕಾರ ಜಿಲ್ಲಾ ಪರಿಷತ್‌ನ ಅಧೀನದಲ್ಲಿ ಕೆಲಸ ಮಾಡಲು ಕೆಲವೊಂದು ಇಲಾಖೆಗಳನ್ನು ಯಾವಾಗ ಕೊಡುತ್ತದೆ ಮತ್ತು ಯಾವಾಗ ವಾಪಸ್ ತೆಗೆದುಕೊಳ್ಳುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಸರ್ಕಾರ ಏತಕ್ಕೆ ಈ ರೀತಿ ಮಾಡುತ್ತದೆ ಎಂದು ನನಗೆ ಅರ್ಥವಾಗುವುದಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ ಜಿಲ್ಲಾ ಪರಿಷತ್‌ನ ಅಧೀನದಲ್ಲಿದ್ದ ಸರಕಾರ ಇಲಾಖೆಯನ್ನು ಸರ್ಕಾರಕ್ಕೆ ವಾಪಸ್ ತೆಗೆದುಕೊಂಡಿದ್ದಾರೆ. ಇದರ ಮೂಲ ಉದ್ದೇಶ ನನಗನಿಸುವುದೇನೆಂದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕೇಂದ್ರ ಸಹಕಾರಿ ಬ್ಯಾಂಕ್‌ನ ಚುನಾವಣೆ ಸಂದರ್ಭದಲ್ಲಿ ಅಲ್ಲಿನ ಸಹಕಾರ ಇಲಾಖೆಯ ಡೆಪ್ಯುಟಿ ರಿಜಿಸ್ಟ್ರಾರ್ ಅವರು ಓಟು ಮಾಡಬೇಕಾಗಿತ್ತು. ಈ ಅಧಿಕಾರಿ ರಾಜಕೀಯ ಪ್ರೇರಿತರಾಗಿ ಚುನಾವಣೆಯಲ್ಲಿ ಭಾಗವಹಿಸುವುದು ಬೇಡ ಎಂದು ಅಲ್ಲಿನ ಜಿಲ್ಲಾ ಪರಿಷತ್‌ನ ಅಧ್ಯಕ್ಷರೇ ಹೇಳಿದ್ದರಿಂದ ಸರ್ಕಾರದವರು ಕೂಡಲೇ ಜಿಲ್ಲಾ ಪರಿಷತ್ ವ್ಯಾಪ್ತಿಯಿಂದ ಸಹಕಾರ ಇಲಾಖೆಯನ್ನು ವಿತ್‌ಡ್ರಾ ಮಾಡಿಕೊಂಡರು. ಸರ್ಕಾರ ಈ ರೀತಿ ತನಗಿಷ್ಟ ಬಂದಂತೆ ನಡೆದುಕೊಳ್ಳುವುದು ಈ ಜಿಲ್ಲಾ ಪರಿಷತ್‌ನ ಕಲ್ಪನೆಗೆ ವಿರುದ್ಧವಾದಂಥ ಒಂದು ಆಚರಣೆ ಆಗುತ್ತದೆ. ಅದೇ ರೀತಿ ಅರಣ್ಯ ಇಲಾಖೆ ತೆಗೆದುಕೊಂಡರೆ. ನಮ್ಮ ಜಿಲ್ಲೆಯ ರಿಜರ್ವ್ ಫಾರೆಸ್ಟ್‌ನಲ್ಲಿ ಸೋಷಿಯಲ್ ಫಾರೆಸ್ಟ್ರಿ ಸ್ಕೀಮ್ ಮಾಡುವುದು ಇದೆ. ಈ ಕೆಲಸಕ್ಕೆ ಜಿಲ್ಲಾ ಪರಿಷತ್‌ನಿಂದ ಹಣ ಹೋಗುತ್ತದೆ. ಆದರೆ ಇದರ ಕೆಲಸ ನೋಡುವಂತಹ ಅಧಿಕಾರ ಜಿಲ್ಲಾ ಪರಿಷತ್‌ಗೆ ಇಲ್ಲ. ಈ ಕೆಲಸಕ್ಕೆ ನೀವು ಹಣ ಬಿಡುಗಡೆ ಮಾಡುತ್ತಾ ಹೋಗಬೇಕು, ಆದರೆ ನಿಮಗೆ ಮೇಲ್ವಿಚಾರಣೆ ಮಾಡಲು ಅಧಿಕಾರ ಇಲ್ಲ ಎಂದು ಕನ್ಸರ್‌ವೇಟರ್ ಆಫ್ ಫಾರೆಸ್ಟ್‌ನವರಿಂದ ಆರ್ಡರ್ ಆಗಿದೆ. ಮತ್ತೆ ಜಿಲ್ಲಾ ಪರಿಷತ್‌ನ ಕೆಲಸಕಾರ್ಯಗಳಿಗೆ ಟ್ರೆಜರಿಯವರು ಹಣ ಬಿಡುಗಡೆ ಮಾಡುತ್ತಾರೆ. ಆದರೆ ಹಣ ಬಿಡುಗಡೆ ಮಾಡಲು ಸರ್ಕಾರದಿಂದ ಮಧ್ಯೆ ಮಧ್ಯೆ ತಡೆಯಾಜ್ಞೆ ಬರುತ್ತದೆ. ಈ ಬಗ್ಗೆ ಇಲ್ಲಿ ನಾವು ಪ್ರಶ್ನೆ ಕೇಳಿದಾಗ, ಸರ್ಕಾರದವರು ಅಂತಹ ತಡೆಯಾಜ್ಞೆ ನೀಡಿಲ್ಲವೆಂದು ಉತ್ತರ ಕೊಟ್ಟರು. ಆದರೆ ನಮ್ಮ ಜಿಲ್ಲೆಯಲ್ಲಿ ಅನೇಕ ಸಲ ಟ್ರೆಜರಿಯವರು ಹಣ ಬಿಡುಗಡೆ ಮಾಡಲು ಒಪ್ಪಲಿಲ್ಲ ಇದರ ಜೊತೆಗೆ ನಮ್ಮ ಜಿಲ್ಲೆಯಲ್ಲಿ ಹೊಸ ಕೆಲಸಗಳನ್ನು ತೆಗೆದುಕೊಳ್ಳಬಾರದೆಂದು ಆರ್ಥಿಕ ಇಲಾಖೆಯಿಂದ ಒಂದು ಆದೇಶ ಬಂದಿದೆ. ಇದಕ್ಕೆ ಕಾರಣವೇನೆಂಬುದನ್ನು ತಿಳಿಸಬೇಕು. 1986-87ನೇ ಸಾಲಿನಲ್ಲಿ ನಮ್ಮ ಜಿಲ್ಲೆಯಲ್ಲಿ ಹುಡ್ಕೋನವರ ನೆರವಿನಿಂದ ಕಟ್ಟಿಸಿರುವಂತಹ ಮನೆಗಳ ಸಂಬಂಧದಲ್ಲಿ ಸರ್ಕಾರದಿಂದ ಒಂದು ಕೋಟಿ ರೂಪಾಯಿಗಳಷ್ಟು ಹಣ ಬಾಕಿ ಬರುವುದಿದೆ. ಇಷ್ಟೆಲ್ಲಾ ಬಾಕಿ ಇರುವಾಗ ಜಿಲ್ಲಾ ಪರಿಷತ್ ಹೇಗೆ ಮುಂದುವರಿಯುತ್ತದೆ. ಇದರ ಕುರಿತು ತಾವು ಆಲೋಚನೆ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸೀಮಿತವಾಗಿ ನಾನು ಹೇಳಿದ್ದೇನೆ. ಮತ್ತು ಜಿಲ್ಲಾಪರಿಷತ್ತಿನ ಸದಸ್ಯರಲ್ಲಿ ಒಂದು ರೀತಿಯ ಸ್ವಲ್ಪ ಕೀಳರಿಮೆ ಆಗಲಿಕ್ಕೆ ಪ್ರಾರಂಭವಾಗಿದೆ. ಏನೆಂದರೆ ಅವರಿಗೆ ಬರೀ ಸಿಟ್ಟಿಂಗ್ ಫೀಸ್ ಕೊಡುವಂಥದ್ದು ಅಥವಾ ಟ್ರಾವಲಿಂಗ್ ಅಲೋಯನ್ಸ್ ಸೇರಿ ಕೊಡುವಂಥದ್ದು. ಮಂಡಲ ಪ್ರಧಾನರಿಗೆ 300 ರೂಪಾಯಿ ಮಾಸಿಕ ಗೌರವಧನ ಇಟ್ಟಿದ್ದೀರಿ. ಅದಕ್ಕಿಂತ ನಾವು ಕೀಳಾಗಿದ್ದೇವೆ ಎನ್ನುವಂಥ ಭಾವನೆ ಬಂದಿದೆ. ಈ ವ್ಯವಸ್ಥೆಯಲ್ಲಿ ಇದು ಹೀಗೆ ಆಗಬಾರದು. ಹಣವೇ ಎಲ್ಲದಕ್ಕೂ ಪ್ರಧಾನ ಅಲ್ಲದೇ ಇದ್ದರೂ ಕೀಳರಿಮೆ ಬಾರದ ಹಾಗೆ ತಾವು ನೋಡಿಕೊಳ್ಳಬೇಕು. ಆಮೇಲೆ ಸಾಮಾಜಿಕ ನ್ಯಾಯದೊಂದಿಗೆ ಬಡತನ ನಿರ್ಮೂಲನದ ಅನೇಕ ಕಾರ್ಯಕ್ರಮಗಳು, ಬಡತನ ರೇಖೆಗಿಂತ ಕೆಳಗಿರುವವರಿಗೆ ವಿಶೇಷ ನೆರವು, ಅಲಕ್ಷಿತ, ಅನುಸೂಚಿತ, ಅಲೆಮಾರಿ ಗುಡ್ಡಗಾಡು ಜನಾಂಗಗಳ ಸುಯೋಜಿತ ಪ್ರಗತಿಗಾಗಿರುವ ಕೇಂದ್ರದ ನೆರವಿನ ಯೋಜನೆಗಳು ಇವೆ. ಅನೇಕರು ದುರುಪಯೋಗವಾಗಿದೆ ಎಂದು ಹೇಳಿದ್ದಾರೆ. ಅದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಸರಿಯಾಗಿ ಉಪಯೋಗವಾಗಲಿ, ಅರ್ಹರಿಗೆ ಸಿಕ್ಕಲಿ ಎಂದು ಹೇಳುತ್ತಾ, ಗುರಿ ಸಾಧಿತವಾಗಿಲ್ಲ ಎನ್ನುವುದನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಮಾಸಿಕ ಗುರಿ ಇಂತಿಷ್ಟು ಹಾಕಿ ಅದನ್ನು ಸಾಧನೆ ಮಾಡಲಿಕ್ಕೆ ಪ್ರತಿತಿಂಗಳು ಕೆ.ಡಿ.ಪಿ. ಮೀಟಿಂಗ್‌ನಲ್ಲಿ ರಿವ್ಯೂ ಆಗುತ್ತದೆ. ಮಾಸಿಕ ಗುರಿ ಇಷ್ಟೇ ಎಂದು ಏಕೆ ಇಡಬೇಕು, ಅದಕ್ಕಿಂತ ಹೆಚ್ಚಿಗೆ ಸಾಧನೆ ಏಕೆ ಆಗಬಾರದು? ಆ ಟಾರ್ಗೆಟ್ ತಾವು ಕೊಡಬೇಕು. ಮಾಸಿಕ ಗುರಿ ಇಷ್ಟು,

ಇಷ್ಟು ಸಾಧನೆ ಮಾಡಿದರೆ ಸಾಕಾಯಿತು ಎನ್ನುವ ಭಾವನೆ ಇದೆ. ಅದಕ್ಕಿಂತ ಹೆಚ್ಚಿಗೆ ಸಾಧನೆ ಮಾಡಬೇಕು. ಇದರಿಂದಾಗಿ ಕೊನೇ ಎರಡು ತಿಂಗಳಲ್ಲಿ ಎಚ್ಚರ ಆಗುತ್ತದೆ. ಆಗ ಗುರಿ ಮೀರಿ ಸಾಧನೆ ಮಾಡಲಿಕ್ಕೆ ಪ್ರಾರಂಭವಾಗುತ್ತದೆ. ಐಡೆಂಟಿಫಿಕೇಷನ್‌ನಲ್ಲಿ ಆಗಲಿ ವಿತರಣೆಯಲ್ಲಾಗಲಿ ಅವ್ಯವಹಾರ ನಡೆಯುತಕ್ಕಂಥಾದ್ದು ಆಗುತ್ತದೆ. ಉದಾಹರಣೆಗೆ ಐ.ಆರ್.ಡಿ.ಪಿ. ಪ್ರೋಗ್ರಾಂ ಇದೆ. ಈ ಐ.ಆರ್.ಡಿ.ಪಿ. ಪ್ರೋಗ್ರಾಮಿನಲ್ಲಿ ಕಳೆದ ವರ್ಷ 19 ಜಿಲ್ಲೆಗಳ ಪೈಕಿ 6 ಜಿಲ್ಲೆಗಳಲ್ಲಿ ನೂರಕ್ಕಿಂತ ಕಡಿಮೆ ಸಾಧನೆಯಾಗಿದೆ. 13 ಜಿಲ್ಲೆಗಳಲ್ಲಿ ನೂರಕ್ಕಿಂತ ಹೆಚ್ಚಿಗೆ ಸಾಧನೆಯಾಗಿದೆ. ಅಂತ್ಯೋದಯ ಕಾರ್ಯಕ್ರಮದಲ್ಲಿ 1987-88ರಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ 1.9 ಸಾಧನೆ, 105ರಲ್ಲಿ 2 ಜನರಿಗೆ ನೆರವು. ಮೈಸೂರಿನಲ್ಲಿ 25.4 ಪರ್ಸೆಂಟ್. ತುಮಕೂರು 51.3 ಪರ್ಸೆಂಟ್. ಬೆಂಗಳೂರು ಗ್ರಾಮಾಂತರ 44.9 ಪರ್ಸೆಂಟ್. 11 ಜಿಲ್ಲೆಗಳಲ್ಲಿ ಮಾತ್ರ ಗುರಿ ಸಾಧಿತವಾಗಿದೆ. ಹೆಚ್ಚುವರಿ ಭೂಮಿ ಪಡೆದವರಿಗೆ ನೆರವು ಎಂದು ಇದೆ. ಇದರಲ್ಲಿ ಗುರಿ 2400, ಸಾಧನೆ, 1163 ಫಲಾನುಭವಿಗಳು. ಆರ್ಥಿಕ ಗುರಿ 60 ಲಕ್ಷ ರೂಪಾಯಿಗಳು. ಆರ್ಥಿಕ ಸಾಧನೆ 21.181 ಲಕ್ಷ ರೂಪಾಯಿ. ಟ್ರೈಸೆಂನಲ್ಲಿ ಆರ್ಥಿಕ ಗುರಿ 80.71 ಲಕ್ಷ ರೂಪಾಯಿ, ಸಾಧನೆ 69.66 ಲಕ್ಷ ರೂಪಾಯಿ, ತುಂತುರು ನೀರಾವರಿ ಆರ್ಥಿಕ ಗುರಿ 59 ಲಕ್ಷ ರೂಪಾಯಿ, ಸಾಧನೆ 19.4 ಲಕ್ಷ ರೂಪಾಯಿ ಜೀತವಿಮುಕ್ತರ ಪುನರ್ವಸತಿ–ಇದರಲ್ಲಿ ಪ್ರತಿ ಜೀತ ವಿಮುಕ್ತರಿಗೆ ಕೇಂದ್ರದ ನೆರವು ಇದರಲ್ಲಿ 4000 ರೂಪಾಯಿ ಇದೆ. 62,689 ಜನರಲ್ಲಿ 44,337 ಜೀತದಾಳುಗಳಿಗೆ ಪುನರ್ವಸತಿ ಆಗಿದೆ. ಬಾಕಿ 18,352 ಜನರಿಗೆ ನೆರವು ಕೊಡಬೇಕು. ಕೇಂದ್ರದಿಂದ 4000 ರೂಪಾಯಿ ಬರುತ್ತದೆ, ಅದರಿಂದ ತಾವು ಮಾಡಿಸಬೇಕು. ಉಳಿಕೆ ಭೂಮಿ ಪಡೆದ ಕೃಷಿ ಕಾರ್ಮಿಕರಿಗೆ ಕೇಂದ್ರ ಪುರಸ್ಕೃತ ಯೋಜನೆಯ ನೆರವು ಇದರಲ್ಲಿ ಕೂಡ ಭೌತಿಕ ಗುರಿ 2400, ಸಾಧನೆ 1163, ಶೇಕಡಾ 48, 46 ಪರ್ಸೆಂಟ್. ಆರ್ಥಿಕ ಗುರಿ ಶೇಕಡ 35.21 ಪರ್ಸೆಂಟ್. ಕೇಂದ್ರ ಪುರಸ್ಕೃತ ಯೋಜನೆ, ಸಣ್ಣ ಅತಿಸಣ್ಣ ರೈತರಿಂದ ಕೃಷಿ ಉತ್ಪಾದನೆ ಗುರಿ 518 ಲಕ್ಷ ರೂಪಾಯಿ, ಸಾಧನೆ 403 ಲಕ್ಷ, ಷಾರ್ಟ್‌ಫಾಲ್, 115 ಲಕ್ಷ. ಆರ್.ಎಲ್.ಇ.ಜಿ.ಪಿ. ರಾಷ್ಟ್ರೀಯ ಉದ್ಯೋಗ ಕಾರ್ಯಕ್ರಮದಲ್ಲಿ 1987–88ರಲ್ಲಿ ಲಭ್ಯವಿರುವ ಹಣ 51.55 ಕೋಟಿ, ಖರ್ಚು 39.22 ಕೋಟಿ, ಷಾರ್ಟ್‌ಫಾಲ್ 12.32 ಕೋಟಿ. ಇದರಲ್ಲಿ ಎಸ್.ಸಿ. ಎಸ್.ಟಿ.ಗಳಿಗೆ ಅನುಕೂಲವಾದ ಕಾಮಗಾರಿಗಳನ್ನು ಮಾಡಬೇಕು ಎಂದು ಇದೆ. ಇದು ದಕ್ಷಿಣ ಕನ್ನಡ, ಶಿವಮೊಗ್ಗ, ಉತ್ತರ ಕನ್ನಡ, ಬಳ್ಳಾರಿ ಜಿಲ್ಲೆಗಳಲ್ಲಿ ಮಾತ್ರ ಆಗಿದೆ, ಉಳಿದ ಜಿಲ್ಲೆಗಳಲ್ಲಿ ಮಾಡಲಿಲ್ಲ. ಪಶ್ಚಿಮಘಟ್ಟ ಪ್ರದೇಶದ ಸಮಗ್ರ ಅಭಿವೃದ್ಧಿ–1987–88ರಲ್ಲಿ ಗುರಿ 667 ಲಕ್ಷ ಇದೆ. 598.44 ಲಕ್ಷ ಸಾಧನೆಯಾಗಿದೆ. ಉಳಿಕೆ 32.35 ಲಕ್ಷ. ಷಾರ್ಟ್‌ಫಾಲ್ 68.58 ಲಕ್ಷ. ಇದರಲ್ಲಿ, ರಸ್ತೆ, ಸೇತುವೆ ಮುಂತಾದ್ದು ಇದೆ. ಇದರ ಗುರಿ 103.26 ಲಕ್ಷ, ಸಾಧನೆ 96.97 ಲಕ್ಷ. ಸಣ್ಣ ನೀರಾವರಿಯಲ್ಲಿ ಗುರಿ 88.70 ಲಕ್ಷ, ಸಾಧನೆ 59.87 ಲಕ್ಷ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿಗೆ ಅನೇಕ ಅವಕಾಶ ಇದೆ. ಈ ರೀತಿಯಾಗಿ ಹಣ ಉಳಿದಿದೆ. ಆರ್.ಎಲ್.ಇ.ಜಿ.ಪಿ. ಯಲ್ಲೂ ಕೂಡ, ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಯೋಜನೆಯಲ್ಲಿ 1987-88ರಲ್ಲಿ ಒದಗಿಸಿದ ಒಟ್ಟು ಹಣ 36.97 ಕೋಟಿ, ಖರ್ಚಾದ ಹಣ 29.38 ಕೋಟಿ, ಷಾರ್ಟ್‌ಫಾಲ್ 7.59 ಕೋಟಿ. ಸೆಂಟ್ರಲ್ ಸೆಕ್ಟರ್ ಡಿ.ಪಿ.ಎ.ಪಿ.ಯಲ್ಲಿ 1987–88ರಲ್ಲಿ ಗುರಿ 15.51 ಕೋಟಿ, ವೆಚ್ಚ 9.09 ಕೋಟಿ. ಸ್ಟೇಟ್ ಸೆಕ್ಟರ್‌ನಲ್ಲಿ ಬರಪೀಡಿತ ಪ್ರದೇಶಕ್ಕೆ 1987–88ರಲ್ಲಿ ಗುರಿ 156 ಲಕ್ಷ, ವೆಚ್ಚ 73.5 ಲಕ್ಷ ಮಾತ್ರ ಖರ್ಚಾಗಿದೆ. ಇಂಧನಶಕ್ತಿ ಬಳಕೆ–ಗೋಬರ್‌ಗ್ಯಾಸ್ ಬಯೋಗ್ಯಾಸ್ ಪ್ಲಾಂಟ್‌ಗೆ ಬಡ್ಜೆಟ್ ಅಲಾಟ್‌ಮೆಂಟ್ 46.33 ಲಕ್ಷ. ಎಕ್ಸ್‌ಪೆಂಡಿಚರ್ 26.38 ಲಕ್ಷ. ಎಷ್ಟೋ ಜನ ಪ್ರಯೋಜನಾರ್ಥಿಗಳಿಗೆ ಸಬ್ಸಿಡಿ ಹಣ ಬಿಡುಗಡೆಯಾಗಲಿಲ್ಲ.

೬.೩೦ ಪಿ.ಎಂ.

ಕೊಳವೆ ಬಾವಿಯು ನಮ್ಮ ಸರ್ಕಾರದ ಪಾಪುಲಿಸ್ಟ್ ಪ್ರೋಗ್ರಾಂ ೮೭–೮೮ರ ಗುರಿ ೧,೦೫೨ ಲಕ್ಷ, ಸಾಧನೆ ೫೮೧ ಲಕ್ಷ, ಗುರಿಯಲ್ಲಿ ೫೬೬೧ ಕೊಳವೆ ಬಾವಿಗಳನ್ನು ತೋಡಿಸಬೇಕಾಗಿತ್ತು. ಆದರೆ ೩೩೯೨ ಕೊಳವೆ ಬಾವಿಗಳನ್ನು ತೋಡಿಸಲಾಗಿದೆ. ಫೆಬ್ರವರಿ ಅಂತ್ಯದವರೆಗೆ ಶೇಕಡ ೬೦ರಷ್ಟು ಕೆಲಸ ಮಾಡಲಾಗಿದೆ. ಉಳಿದ ಒಂದು ತಿಂಗಳಲ್ಲಿ ಶೇಕಡ ೪೦ರಷ್ಟು ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಬೇಕಾದ ರಿಗ್ಸ್ ಇಲ್ಲ, ದುರಸ್ತಿಗೆ ವ್ಯವಸ್ಥೆ ಇಲ್ಲ. ಬೇಕಾದ ವಾಹನಗಳು ಇಲ್ಲ. ಈಗಾಗಲೇ ಅದರ ತೊಂದರೆಗೆ ಕಾರಣಗಳನ್ನು ಜನರು ಹೇಳಿದ್ದಾರೆ. ಜಿಲ್ಲಾ ಪರಿಷತ್ತಿಗೆ ಅಧಿಕಾರ ಇಲ್ಲ, ಕಡಿಮೆ ದರದಲ್ಲಿ ಕೊಳವೆ ಬಾವಿಗಳನ್ನು ತೋಡಿಸಬಹುದು. ಇವತ್ತು ನಮ್ಮ ಜಿಲ್ಲೆಯಲ್ಲಿ ಆ ವ್ಯವಸ್ಥೆ ಇಲ್ಲ. ಸರ್ಕಾರ ನಿರ್ದೇಶಿತ ಹೆಚ್ಚಿಗೆ ಖರ್ಚಿನಲ್ಲಿ ಏತಕ್ಕೆ ಕೊಳವೆ ಬಾವಿಗಳನ್ನು ತೋಡಿಸಬೇಕು ? ಇನ್ನು ಸಣ್ಣ ನೀರು ಸರಬರಾಜು ಯೋಜನೆಯಲ್ಲಿ ಗುರಿ ಸಾಧನೆ ಆಗಲಿಲ್ಲ. ೯೦೨ ಲಕ್ಷ ಇಟ್ಟಿದ್ದರೆ, ಅದರಲ್ಲಿ ೩೩೨ ಲಕ್ಷ

ಖರ್ಚಾಗಿದೆ, ಕೊಳವೆ ನೀರು ಸರಬರಾಜು ಕೆಲಸ ಸಹ ಕೇಂದ್ರುವಲಯ ಮತ್ತು ರಾಜ್ಯವಲಯದಲ್ಲಿ ಬರುತ್ತದೆ. ಇದರಲ್ಲಿ ಕೂಡ ಸಾಧನೆ ಆಗಿಲ್ಲ. ಟೆಕ್ನಾಲಜಿ ಮಿಷನ್‌ನಲ್ಲಿಯೂ ಗುರಿ ಸಾಧನೆ ಆಗಿಲ್ಲ. ನನ್ನ ಕ್ಷೇತ್ರದ ಶಿರೂರು, ಪಡುವಾರಿಯಲ್ಲಿನ ಯೋಜನೆಗಳು ಪ್ರಾರಂಭವಾಗಿ ನಾಲ್ಕು ವರ್ಷವಾಗಿದ್ದರೂ ಇನ್ನೂ ಕೆಲಸ ಪೂರ್ತಿ ಆಗಲಿಲ್ಲ. ಬಾಕಿ ಕೆಲಸ ಹಾಗೆ ಉಳಿದಿದೆ. ಗ್ರಾಮೀಣ ಶೌಚಾಲಯದಲ್ಲಿ ೮೫೬ ಗುರಿ, ೧೫೦ ಮಾತ್ರ ಸಾಧನೆ, ಗುಲ್ಬರ್ಗ ಜಿಲ್ಲೆಯಲ್ಲಿ ೮.೪೫ ಕೋಟಿಯಲ್ಲಿ ಪ್ರಾರಂಭಿಸಲಾಗಿರುವ ಟೆಕ್ನಾಲಜಿ ಮಿಷನ್ನಿಗೆ ಕೇಂದ್ರ ನೆರವಿನ ಯೋಜನೆಯಿಂದ ೮೭-೮೮ರಲ್ಲಿ ೧೫೫ ಲಕ್ಷ ಕೊಟ್ಟಿದ್ದಾರೆ. ಯೋಜನೆ ಮಾತ್ರ ನಡೆಯುತ್ತಿದೆ, ಇನ್ನೂ ಕೆಲಸ ಪ್ರಾರಂಭವಾಗಲಿಲ್ಲ. ಕೊಳವೆ ಬಾವಿಯನ್ನು ತೋಡಿಸಲಿಕ್ಕೆ ಇಷ್ಟು ವಿಳಂಬ ಏತಕ್ಕೆ? ಈ ಯೋಜನೆಯ ಕೆಲಸವನ್ನು ಏಕೆ ಬೇಗ ಪ್ರಾರಂಭ ಮಾಡಬಾರದು, ಅದೇ ರೀತಿ ಧಾರವಾಡ. ರಾಯಚೂರು ಜಿಲ್ಲೆಯಲ್ಲಿಯೂ ಈ ಯೋಜನೆ ಬಂದಿದೆ. ಅಲ್ಲೂ ಕೂಡ ಇನ್ನು ಕೆಲಸ ಪ್ರಾರಂಭ ಮಾಡಿಲ್ಲ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಕರಾವಳಿಯಲ್ಲಿ ಉಪ್ಪು ನೀರು ಬರುತ್ತಿದೆ. ಇಲ್ಲಿ ಕೆಸರು ಮಣ್ಣು ಬರುತ್ತದೆ. ಬೋರ್‌ವೆಲ್ ಹಾಕುವುದಕ್ಕೆ ಆಗುವುದಿಲ್ಲ. ಒಳನಾಡ ಘಟ್ಟದ ಪ್ರದೇಶದಲ್ಲಿ ಕಲ್ಲು ಬರುತ್ತದೆ. ಇಲ್ಲಿ ಒಂದು ಟೆಕ್ನಾಲಜಿ ಮಿಷನ್ ಯೋಜನೆಯನ್ನು ಪ್ರಾರಂಭ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಈ ಎಲ್ಲ ಸಾಧನೆಗಳ ವೈಫಲ್ಯಕ್ಕೆ ಯಾರು ಹೊಣೆ? ನಾನು ವೈಫಲ್ಯವನ್ನು ಮಾತ್ರ ಹೇಳಿದ್ದೆ, ಒಳ್ಳೆಯದನ್ನು ಹೇಳಲಿಲ್ಲವೆಂದು ಸಚಿವರು ತಿಳಿದು ಕೊಳ್ಳಬಹುದು. ವೈಫಲ್ಯವನ್ನು ಎತ್ತಿ ಹೇಳಿ ಒಳ್ಳೆಯ ರೀತಿಯಲ್ಲಿ ಸರಕಾರ ನಡೆದುಕೊಳ್ಳಬೇಕೆನ್ನುವುದು ನನ್ನ ಉದ್ದೇಶ. ಪೂರ್ತಿ ಸಿಬ್ಬಂದಿಯನ್ನು ನೀಡಿ ಅಧಿಕಾರವನ್ನು ಕೊಡಿ, ಅಧಿಕಾರೇತರರು ಅಧಿಕಾರಿಗಳ ಸಾಮರಸ್ಯ ಬರುವ ಹಾಗೆ ಸರಿಯಾದ ತರಬೇತಿಯನ್ನು ಕೊಡಿ, ಹಣಕಾಸಿನ ವ್ಯವಸ್ಥೆಯನ್ನು ಮಾಡಿ, ಈ ವ್ಯವಸ್ಥೆಗೆ ಸಾಕಷ್ಟು ನೀರೆರೆದು ಬೆಳೆಸಿ ಎನ್ನುವಂತಹ ಅರಿಕೆ ಮಾಡಿಕೊಳ್ಳುತ್ತೇನೆ. ಈ ವ್ಯವಸ್ಥೆ ಸಾಯಬಾರದು.

ಇನ್ನು ಕೊನೆಯದಾಗಿ

''ಜಿಲ್ಲಾ ಪರಿಷತ್ತು ಮಂಡಲ ಪಂಚಾಯತಿ,
ಗ್ರಾಮೀಣ ಪ್ರಗತಿಗೆ ಸ್ನೇಹ ಸೇತು,
ಸಿಬ್ಬಂದಿ ಬೇಕಿತ್ತು, ಹಣಕಾಸು ಸವಲತ್ತು ಎಲ್ಲಿತ್ತು,
ಸಾಕಷ್ಟು ಎಂದು ಜನ ಹೇಳುತ್ತಿತ್ತು,
ನಜೀರರ ನವ ಕೂಸು ನರಳುತ್ತಿತ್ತು.''

ಎಂದು ಜನ ಹೇಳುವ ಹಾಗೆ ಆಗಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇಲಾಖೆಯ ಬೇಡಿಕೆ ಮೇಲಿನ ಚರ್ಚೆ ಮುಕ್ತಾಯವಾಯಿತು. ಈಗ ಸಚಿವರಿಂದ ಉತ್ತರ.

ಶ್ರೀ ಆರ್.ವಿ. ದೇಶಪಾಂಡೆ (ಕೃಷಿ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಅಭಿವೃದ್ಧಿ ಇಲಾಖೆಯ ಬೇಡಿಕೆಯ ಮೇಲೆ ಈ ಸದನದ ನೂರಾರು ಸದಸ್ಯರು ಕೆಲವು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ ಜೊತೆಗೆ ಪ್ರಶಂಸೆಯನ್ನು ಸಹ ಮಾಡಿದ್ದಾರೆ. ಹಾಗೂ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅಧ್ಯಕ್ಷರು ನನಗೆ ಅರ್ಧ ಗಂಟೆಯಲ್ಲಿ ಉತ್ತರ ಮುಗಿಸಬೇಕೆಂದು ಹೇಳಿದ್ದಾರೆ. ಈ ಅಧಿಕಾರದ ವಿಕೇಂದ್ರೀಕರಣ ಇದು ಜನತಾ ಸರ್ಕಾರದ ಗುರಿ. ಪೂಜ್ಯ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಈ ದೇಶಕ್ಕೆ ಸ್ವಾತಂತ್ರ ದೊರಕಿಸಿಕೊಟ್ಟ ನಂತರ ಗ್ರಾಮರಾಜ್ಯದ ಒಂದು ಕನಸನ್ನು ನೋಡಿದರು. ಆ ಕನಸ್ಸನ್ನು ನನಸು ಮಾಡುವ ಅವಕಾಶ ಕರ್ನಾಟಕದಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಂತು. ಇವತ್ತು ಕೆಲವು ಜನ ಮಿತ್ರರು ಸದನದ ಒಳಗೆ, ಸದನದ ಹೊರಗೆ ಈ ಹೊಸ ವ್ಯವಸ್ಥೆಯ ಮೇಲೆ ಟೀಕೆ ಟಿಪ್ಪಣಿಯನ್ನು ಮಾಡಿದ್ದಾರೆ. ಕೆಲವು ಜನ ವಿರೋಧಪಕ್ಷದ ಮಿತ್ರರು ಒಂದು ವೇಳೆ ನಾವು ಅಧಿಕಾರಕ್ಕೆ ಬಂದರೆ ಈ ವ್ಯವಸ್ಥೆಯನ್ನು ರದ್ದುಪಡಿಸುತ್ತೇವೆಂದು ಹೇಳಿದ್ದಾರೆ. ಈ ತರಹ ಭಯ ನಮ್ಮಲ್ಲಿ ಏಕೆ ಇರಬೇಕು, ಇದು ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ. ಅಧಿಕಾರ ವಿಕೇಂದ್ರೀಕರಣ ಇಂದು ಬಹಳ ಅವಶ್ಯಕ. ಅಧಿಕಾರ ಕೇಂದ್ರದಿಂದ ಇವತ್ತು ಅಭಿವೃದ್ಧಿ ಕೆಲಸಗಳು ಕುಂಟಿತವಾಗಿದೆ. ಬಡಜನರ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಈ ಒಂದು ವ್ಯವಸ್ಥೆ ನಿರ್ಮಾಣ ಆಗಿದೆ. ಇಂತಹ ಪರಿಸ್ಥಿತಿಯಲ್ಲಿ ಜನತಾ ಸರ್ಕಾರ ರಾಜ್ಯದಲ್ಲಿ ಅಧಿಕಾರದ ವಿಕೇಂದ್ರೀಕರಣ ಮಾಡಿ ಪೂಜ್ಯ ರಾಷ್ಟ್ರಪಿತ ಗಾಂಧೀಜಿಯವರ ಕನಸನ್ನು ನನಸನ್ನಾಗಿ ಮಾಡಿರುವುದಕ್ಕೆ ಇವೆಲ್ಲರೂ ಮೆಚ್ಚಬೇಕು. ಇವೊತ್ತು ಕೆಲವು ಸಮಸ್ಯೆಗಳು ಇರಬಹುದು, ಅದನ್ನು

ನಾನು ಒಪ್ಪಿಕೊಳ್ಳುತ್ತೇನೆ. ಒಂದು ಕೈಗಾರಿಕೆಯನ್ನೇ ತೆಗೆದುಕೊಳ್ಳಿ ಅಲ್ಲಿ ಸಮಸ್ಯೆಗಳು ಇರುತ್ತವೆ. ನಾನು ಶಾಸಕನಾಗಿ ಹೊಸದಾಗಿ ಇಲ್ಲಿಗೆ ಬಂದಾಗ ಈ ಸದನದ ಒಂದು ಕಾರ್ಯ ಚಟುವಟಿಕೆಯಲ್ಲಿ ಯಾವ ರೀತಿ ಭಾಗವಹಿಸಬೇಕು ಎನ್ನುವುದು ಅಷ್ಟಾಗಿ ತಿಳಿದಿರಲಿಲ್ಲ. ಅದೇರೀತಿ ಇದು ಹೊಸದಾಗಿ ನಿರ್ಮಾಣ ಆದಾಗ ಕೆಲವೊಂದು ಸಮಸ್ಯೆಗಳು ನಿರ್ಮಾಣ ಆಗುತ್ತದೆ, ಆದರೆ ಆ ವ್ಯವಸ್ಥೆಯೇ ಬೇಡ ಎಂದು ಹೇಳುವುದು ಸರಿಯಲ್ಲ. ನಿಜವಾಗಿ ಜನರ ಕೈಯಲ್ಲಿ ಅಧಿಕಾರವನ್ನು ಕೊಟ್ಟಿದ್ದೇವೆ. ಆ ಅಧಿಕಾರದಿಂದ ನಿಜವಾಗಿ ಒಳ್ಳೆಯ ಕೆಲಸ ಆಗಲಿಕ್ಕೆ ಸಾಧ್ಯ ಇದೆ. ಮಾನ್ಯ ಸದಸ್ಯರು ಒಬ್ಬರು ಹೇಳಿದರು, ಇವೊತ್ತು ಈ ಒಂದು ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ರಚನೆ ಆದಮೇಲೆ ಭ್ರಷ್ಟಾಚಾರ ಕಡಿಮೆಯಾಗಿದೆ ಎಂದು......

ಶ್ರೀ ಆರ್. ರಾಮಯ್ಯ.—ಅಧ್ಯಕ್ಷರೆ, ನಾವು ಹೇಳಿಲ್ಲ......

ಅಧ್ಯಕ್ಷರು.—ತಾವು ತಮ್ಮ ಜಾಗದಲ್ಲಿ ಕುಳಿತಿಲ್ಲ. ಈಗ ಮಾನ್ಯ ಮಂತ್ರಿಗಳಿಗೆ ಡಿಸ್ಟರ್ಬ್ ಮಾಡಬೇಡಿ. ಮಾನ್ಯ ಮಂತ್ರಿಗಳು ಹೇಳುವ ಬಗ್ಗೆ ತಾವು ನೋಟ್ ಮಾಡಿಕೊಳ್ಳಿ, ನಾನು ಅನಂತರ ತಮಗೆ ಕ್ಲಾರಿಫಿಕೇಷನ್ ಕೇಳಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ.—ಇವೊತ್ತು ಈ ವ್ಯವಸ್ಥೆಯಲ್ಲಿ ವಿಶ್ವಾಸ ಇಡಬೇಕಾಗುತ್ತದೆ. ಕೆಲವು ಲೋಪದೋಷಗಳು ಇರಬಹುದು, ಅದನ್ನು ಸುಧಾರಿಸಲಿಕ್ಕೆ ಸಾಧ್ಯ ಇದೆ. ಬೇರೆ ಬೇರೆ ಜಿಲ್ಲಾ ಪರಿಷತ್‌ನಿಂದ ಈ ಒಂದು ಜಿಲ್ಲಾಪರಿಷತ್ ಮಸೂದೆಗೆ ಕೆಲವು ಅಮೆಂಡ್‌ಮೆಂಟ್‌ಗಳನ್ನು ಮಾಡಬೇಕೆಂದು ಸೂಚನೆ ಬಂದಿದೆ. ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಆದ್ದರಿಂದ, ಇವೊತ್ತು ಈ ಇಡೀ ವ್ಯವಸ್ಥೆಯೇ ಸರಿ ಇಲ್ಲ ಎಂದು ಹೇಳುವುದು ತಪ್ಪು. ಇವೊತ್ತು ಮಾನ್ಯ ಸದಸ್ಯರು ಕೆಲವು ಯೋಜನೆಗಳ ಬಗ್ಗೆ ಟೀಕೆಟಿಪ್ಪಣಿಗಳನ್ನು ಮಾಡಿದ್ದಾರೆ. ಐಆರ್‌ಡಿಪಿ ಯೋಜನೆಯಲ್ಲಿ ಯಾರು ಗ್ರೀನ್‌ಕಾರ್ಡ್‌ಹೋಲ್ಡರ್ಸ್ ಇರುತ್ತಾರೆ, ಅವರಿಗಷ್ಟೆ ಸಹಾಯ ಮಾಡುತ್ತೀರಿ, ಬೇರೆಯವರಿಗೆ ಸಹಾಯ ಸಿಕ್ಕುತ್ತಿಲ್ಲ ಎನ್ನುವ ಆಪಾದನೆಯನ್ನು ಮಾಡಿದರು. ಸರ್ಕಾರದ ಆದೇಶದ ಪ್ರಕಾರ ಯಾರ ವಾರ್ಷಿಕ ಆದಾಯ ೪,೮೦೦ ರೂಪಾಯಿಯೊಳಗೆ ಬರುತ್ತದೆ, ಅವರಿಗೆಲ್ಲಾ ಐಆರ್‌ಡಿಪಿ ಯೋಜನೆಯಲ್ಲಿ ಲಾಭ ಸಿಕ್ಕುತ್ತದೆ ಎನ್ನುವ ಮಾತನ್ನು ಹೇಳಿದ್ದೇವೆ. ಮಾನ್ಯ ಶಾಣಪ್ಪನವರು ಐಆರ್‌ಡಿಪಿ ಯೋಜನೆಯನ್ನು ಬಿಟ್ಟುಬಿಡಿ ಎನ್ನುವಂಥ ಮಾತನ್ನು ಹೇಳಿದರು. ಇದರ ಬಗ್ಗೆ ನಾವು ಸರ್ವೆ ನಡೆಸಿ ನೋಡಿದಾಗ ಸಾಕಷ್ಟು ಜನರಿಗೆ ಇದರಿಂದ ಸಹಾಯವಾಗಿದೆ ಎನ್ನುವುದು ಕಂಡುಬಂದಿದೆ. ಇದರಲ್ಲಿ ೬೦ರಿಂದ ೭೦ ಪರ್ಸೆಂಟ್ ಬೆನಿಫಿಷಿರೀಸ್‌ಗೆ ಲಾಭ ಆಗಿದೆ. ಸರ್ವೆ ಮಾಡಿದ ರಿಪೋರ್ಟ್‌ನಿಂದ ಸರ್ಕಾರದ ಗಮನಕ್ಕೆ ಈ ವಿಚಾರ ಬಂದಿದೆ. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಈ ಒಂದು ಯೋಜನೆಯಲ್ಲಿ ನೀವು ಟಾರ್‌ಗೆಟ್ ಅಚೀವ್ ಮಾಡಿಲ್ಲ ಎಂದು ಹೇಳಿದರು. ೧೯೮೭-೮೮ಕ್ಕೆ ಫಸ್ಟ್ ಡೋಸ್ ಫಲಾನುಭವಿಗಳು ೧ ಲಕ್ಷದ ೧೫ ಸಾವಿರ ಕವರೇಜ್ ೭೯, ೭೩೦ ಆಗಿದೆ. ಎರಡನೆಯ ಡೋಸ್‌ನಲ್ಲಿ ೪೭ ಸಾವಿರದ ೨೫ ಇತ್ತು, ಕವರೇಜ್ ೮೦ ಸಾವಿರದ ೪೧೨ ಆಯಿತು. ಆದರೆ ಫೈನಾನ್ಷಿಯಲ್ ಪ್ರೋಗ್ರೆಸ್ ನೋಡಿದರೆ ಅದು ೨೪ ಕೋಟಿ ೨೪ ಲಕ್ಷ ರೂಪಾಯಿ. ನಾವು ೧೯೮೭-೮೮ನೇ ಇಸವಿಯಲ್ಲಿ ಸಬ್ಸಿಡಿ ಕೊಡಬೇಕಾಗಿತ್ತು. ಆದರೆ ಸಬ್ಸಿಡಿ ಕೊಟ್ಟಿದ್ದು ೨೫ ಕೋಟಿ ೯೩ ಲಕ್ಷ ರೂಪಾಯಿ. ಇವೊತ್ತು ಮೊದಲನೆಯ ಡೋಸ್‌ನಲ್ಲಿ ಏನಾಗಿದೆ, ಸಾಕಷ್ಟು ಜನರು ಡಿಫಾಲ್ಟರ್ ಆಗಿ ಇವೊತ್ತು ಸರ್ಕಾರಕ್ಕೆ ಆಗಲಿ, ಮಂಡಲಿಗಾಗಲಿ, ಜಿಲ್ಲಾ ಪರಿಷತ್‌ಗಾಗಲಿ, ಅವರಿಗೆ ಸಹಾಯ ಮಾಡುವ ಇಚ್ಛೆ ಇದ್ದರೂ ಕೆಲವು ಕೇಂದ್ರಸರ್ಕಾರದ ನಾರಮ್ಸ್ ಏನಿದೆ, ಕೇಂದ್ರಸರ್ಕಾರದ ಆದೇಶಗಳ ಏನು ಇದೆ ಅದರಿಂದ ಆ ಜನರಿಗೆ ಸಹಾಯ ಮಾಡಲಿಕ್ಕೆಬರುತ್ತಿಲ್ಲ. ಐ.ಆರ್.ಡಿ.ಪಿ. ಬಗ್ಗೆ ರೀ-ಪೇಮೆಂಟ್ ಮಾಡುವ ಒಂದು ಪ್ರಶ್ನೆ ಇದೆ. ರೀ-ಪೇಮೆಂಟಿಗೆ ಒತ್ತಾಯ ಮಾಡುತ್ತಿರುವುದರಿಂದ ಬಡ ಜನರಿಗೆ ತೊಂದರೆಯಾಗಿದೆ. ನಾವು ಕೇಂದ್ರ ಸರ್ಕಾರಕ್ಕೆ ಹಾಲಿ ಇರತಕ್ಕ ಈ ಸೂತ್ರವನ್ನು ಬದಲಾವಣೆ ಮಾಡಬೇಂದು ಒತ್ತಾಯ ಮಾಡಿದ್ದೇವೆ. ಕನಿಷ್ಟ ಮೂರು ವರ್ಷದ ಕಾಲಾವಧಿ ಮಾಡಿ ತಾವು ರೀ-ಪೇಮೆಂಟ್ ಮಾಡಲು ಅವಕಾಶ ಮಾಡಿಕೊಡಬೇಂದು ಹೇಳಿದ್ದೇವೆ. ಫಸ್ಟ್ ಡೋಸ್ ಟಾರ್‌ಗೆಟ್ ರೀಚ್ ಮಾಡಿಲ್ಲ. ಕಡಿಮೆ ಜನ ಇದ್ದುದರಿಂದ ಸಬ್ಸಿಡಿಯಲ್ಲಿ ಹೆಚ್ಚಿನ ಹಣ ಸಿಕ್ಕಿದೆ.

ಆದ್ದರಿಂದಬಡುಬಡವರಿಗೆ ಲಾಭ ಆಗಿದೆಯೆಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಹೊಸ ಆಜ್ಞೆಯನ್ನು ಹೊರಡಿಸಿದೆ. ಎರಡನೇ ಫಲಾನುಭವಿಗಳಿಗೆ ಸಾಲಕೊಡುವಾಗ ಅಲ್ಲಿರತಕ್ಕ ಅಸಿಸ್ಟೆಂಟ್ ಕಮೀಷನ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ. ಆ ಸಮಿತಿಯಲ್ಲಿ ಆ ಭಾಗದ ಮಂಡಲಿಯ ಪ್ರಧಾನರು ಸದಸ್ಯರಾಗಬೇಕೆಂದು ಸರ್ಕಾರ ಈಗಾಗಲೇ ಆಜ್ಞೆಯನ್ನು ಹೊರಡಿಸಿದೆ.

ಆದರಿಂದ ಹೆಚ್ಚಿನ ಕಡು ಬಡವರಿಗೆ ಸಹಾಯವಾಗುತ್ತದೆ. ಅಂತ್ಯೋದಯ ಯೋಜನೆಯಲ್ಲಿಯೂ ಸಹ ೬೧೨೫ ಜನರಿಗೆ ಸಹಾಯವಾಗಿದೆ. ಅದೇ ಪ್ರಕಾರ ನಮ್ಮ ೧೦೦ ಬಾವಿ ಯೋಜನೆಯಲ್ಲಿ ನಾವು ಟಾರ್ಗೆಟ್ ಸರಿಯಾಗಿ ಮುಟ್ಟಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ೮೭–೮೮ರಲ್ಲಿ ೯೬೦೨ ಜನರಿಗೆ ಸಹಾಯ ಮಾಡಬೇಕಾಗಿತ್ತು. ನಾವು ಸಹಾಯ ಮಾಡಿದ್ದು ೧೦, ೧೭೬ ಜನರಿಗೆ ಇದಕ್ಕೆ ಇದ್ದಂತಹ ಬಡ್ಜೆಟ್ ಪ್ರಾವಿಜನ್ ೮ ಕೋಟಿ ೩೬ ಲಕ್ಷ ಆದರೆ ನಾವು ಖರ್ಚು ಮಾಡಿದ ಹಣ ೪ ಕೋಟಿ ೭ ಲಕ್ಷ, ಇದರಲ್ಲಿ ಒಂದು ದೂರು ಇದೆ. ಅದು ಏನೆಂದರೆ ಆದಷ್ಟು ಬೇಗ ಪಂಪುಸೆಟ್ಟುಗಳನ್ನು ಒದಗಿಸುತ್ತಿಲ್ಲ ಎನ್ನುವುದು ನಿಜ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗಾಗಲೆ ನಾವು ಕೆ.ಇ.ಬಿ. ಯವರಿಗೆ ಹೇಳಿದ್ದೇವೆ, ೧೦೦ಬಾವಿಗಳ ಯೋಜನೆಯ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಪಂಪುಸೆಟ್ಟುಗಳನ್ನು ಕೊಡುವಾಗ ತಾವು ಆದ್ಯತೆ ಮೇಲೆ ಕೊಡಬೇಕೆಂದು ತಿಳಿಸಲಾಗಿದೆ. ಕೆ.ಇ.ಬಿ.ಯ ಟಾರ್ಗೆಟ್ ಪ್ರತಿವರ್ಷ ೪೦–೪೫ ಸಾವಿರ ಪಂಪ್‌ಸೆಟ್ಟು ಒದಗಿಸುವ ಗುರಿ ಇದ್ದರೆ ಅವುಗಳ ಪೈಕಿ ಈ ಯೋಜನೆಯಲ್ಲಿ ಬರುವ ೧೦–೧೨ ಸಾವಿರ ಬಾವಿಗಳಿಗೆ ಪ್ರತಿವರ್ಷ ಪಂಪ್‌ಸೆಟ್ಟುಗಳನ್ನು ಒದಗಿಸಬೇಕಾಗುತ್ತದೆ. ಈ ಒಂದು ಬೆನಿಫಿಷರಿಸ್ ಅನ್ನು ಗುತಿಸುವಾಗ ಅವರ ಹಳ್ಳಿಯಿಂದ ೩–೪ ಕಿ.ಮೀ ದೂರದಲ್ಲಿ ಅವರ ಗದ್ದೆ ಅಥವಾ ಹೊಲ ಇರುತ್ತದೆ. ಅದಕ್ಕೆ ಕೆ.ಇ.ಬಿ. ಯವರು ಇಷ್ಟೊಂದು ದೂರು ಲೈನ್ ಹಾಕಬೇಕಾಗುತ್ತದೆ. ಇದಕ್ಕೆ ಹೆಚ್ಚು ಖರ್ಚು ಆಗುತ್ತದೆ. ಇದರಿಂದ ಈ ಸಮಸ್ಯೆ ನಿರ್ಮಾಣವಾಗಿದೆ. ಆದ್ದರಿಂದ ಕೆ.ಇ.ಬಿ. ಯವರಿಗೆ ಸರ್ಕಾರದಿಂದ ಆದೇಶವನ್ನು ಕೊಟ್ಟಿದ್ದೇವೆ. ಆದ್ಯತೆಯ ಮೇರೆ ಕೊಡಬೇಕೆಂದು ನಾವು ಹೇಳಿದ್ದೇವೆ.

ಅದೇ ಪ್ರಕಾರ ಜೀತದಾಳುಗಳ ಬಗ್ಗೆ ಒಳ್ಳೆಯ ಕೆಲಸ ಆಗಿದೆ. ರಾಜ್ಯದಲ್ಲಿ ೬೨,೬೮೯ ಜೀತ ದಾಳುಗಳನ್ನು ಗುರುತಿಸಿದ್ದು, ಅದರಲ್ಲಿ ಕೇವಲ ೧೧,೮೦೮ ಜನರಿಗೆ ನಾವು ಪುನರ್ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ, ಹೆಚ್ಚಿನ ಸಂಖ್ಯೆ ಮೈಸೂರು ಜಿಲ್ಲೆಯಲ್ಲಿ ಇದೆ. ಐಡೆಂಟಿಫೈಡ್ ಮಾಡಿದ ಜೀತ ದಾಳುಗಳು ಅಲ್ಲಿ ಹೆಚ್ಚು, ಆದ್ದರಿಂದ ಇನ್‌ಫ್ರಾಸ್ಟ್ರಕ್ಚರ್ ಫೆಸಿಲಿಟಿಸ್ ಮೈಸೂರು ಜಿಲ್ಲೆಯಲ್ಲಿ ಆ ಪ್ರಮಾಣದಲ್ಲಿ ಇಲ್ಲ. ಆದರೂ ಸಹ ಎರಡು ವರ್ಷಗಳಲ್ಲಿ ಜೀತದಾಳುಗಳಿಗೆ ಕವರ್ ಮಾಡಬೇಕೆಂದು ಸರ್ಕಾರಯೋಜನೆ ಹಾಕಿಕೊಂಡಿದೆ. ಇದರ ಬಗ್ಗೆ ನಾವು ಈಗಾಗಲೇ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಅಂಡ್ ಎಕನಾಮಿಕ್ಸ್ ಸಂಸ್ಥೆಯಿಂದ ಸರ್ವೆ ಮಾಡಿಸಿದ್ದೇವೆ. ರಾಜ್ಯಮಟ್ಟದಲ್ಲಿ ಶೇಕಡ ೬೫ರಷ್ಟು ಸಕ್ಸಸ್ ಆಗಿದೆ. ಶೇಕಡ ೬೩ ರಷ್ಟು ಜನ ಅಸೆಟ್ಸ್ ಅನ್ನು ತಮ್ಮ ಪೊಜಿಷನಲ್ಲಿ ಇಟ್ಟುಕೊಂಡಿದ್ದಾರೆ. ಆದರಿಂದ ಈ ಯೋಜನೆಯಲ್ಲಿ ನಿಜವಾದ ಕಡುಬಡವರಿಗೆ, ಜೀತದಾಳುಗಳಿಗೆ ಸಹಾಯವಾಗಿದೆ.

ಮಾನ್ಯ ರಾಮಯ್ಯನವರು ರಾಮರಾಜ್ಯದ ಕನಸಿನಬಗ್ಗೆ ಹೇಳಿದ್ದಾರೆ ಆದರಬಗ್ಗೆ ಪ್ರಾರಂಭದಲ್ಲೇ ಹೇಳಿದ್ದೇನೆ. ಐಆರ್‌ಡಿಪಿ. ಯಲ್ಲಿ ಸರ್ವೆ ಮಾಡಿ ಅನ್ನುತ್ತಾರೆ. ಕೇಂದ್ರ ಸರ್ಕಾರದ ಇವತ್ತಿನ ಆದೇಶದ ಪ್ರಕಾರಪ್ರತಿ ವರ್ಷ ಬೆನಿಫಿಷರೀಸ್ ಅನ್ನು ಐಡೆಂಟಿಫೈ ಮಾಡುತ್ತೇವೆ, ರಾಜ್ಯದಲ್ಲಿ ಎಷ್ಟು ಮಂದಿ ಕಡು ಬಡ ವರಿದ್ದಾರೆಂಬುದನ್ನು ಐಡೆಂಟಿಫೈ ಮಾಡಬೇಕೆಂದು ಅವರು ಸಲಹೆ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ. ಸಾಲ ಕೊಡುವಾಗ ದುರುಪಯೋಗವಾಗುತ್ತದೆಂದು ಹೇಳಿದ್ದಾರೆ. ಕೆಲವು ಕಡೆ ಇರಬಹುದು. ಲೋನ್ ಮೇಳದಲ್ಲಿ ಕೂಡ ಆಗುತ್ತಿದೆ. ಅದರ ಅರ್ಥ ಐಆರ್‌ಡಿಪಿ. ಯೋಜನೆಯನ್ನು ಕೈಬಿಡಿ, ಆದರಿಂದ ಸಹಾಯವಾಗಿಲ್ಲವೆಂದು ಹೇಳುವುದು ಅಷ್ಟು ಸಮಂಜಸ ವಾಗುವುದಿಲ್ಲ. ಟ್ರೈಬಲ್ ಯೋಜನೆಯಲ್ಲಿ ಯುವರಿಕಗೆ ತರಬೇತಿ ಕೊಟ್ಟಿದ್ದೇವೆ, ಅದರಿಂದ ಹೆಚ್ಚಿಗೆ ಲಾಭವಾಗಿದೆ. ಇನ್ನೂ ಹೆಚ್ಚಿನ ಹಣವನ್ನು ಈ ಯೋಜನೆಗೆ ಕೊಟ್ಟು ಹೆಚ್ಚಿನ ಜನರಿಗೆ ತರಬೇತಿ ಕೊಡಬೇಕೆಂದು ಸೂಚನೆ ಮಾಡಿದ್ದಾರೆ. ಆದನ್ನು ಪರಿಶೀಲನೆ ಮಾಡುತ್ತೇವೆ. ಎನ್. ಆರ್. ಇ. ಪಿ. ಬಗ್ಗೆ ಇದರಲ್ಲಿ ನೋಡಿದಾಗ ಬಹಳ ಕೆಲಸವಾಗಿದೆ. ೧೯೮೭–೮೮ರಲ್ಲಿ ೩೯ ಕೋಟಿ ೨೨ ಲಕ್ಷ ರೂಪಾಯಿಗಳನ್ನು ಈ ಯೋಜನೆಯಲ್ಲಿ ಖರ್ಚು ಮಾಡಿದ್ದೇವೆ. ೨೧೦ ಲಕ್ಷ ಮ್ಯಾಂಡೇಟ್ ಜನರೇಟ್ ಮಾಡಬೇಕಾಗಿತ್ತು, ಆದರೆ ೨೧೯ ಲಕ್ಷ ಮ್ಯಾಂಡೇಟ್ ಜನರೇಟ್ ಆಗಿದೆ. ಐಆರ್‌ಡಿಪಿ. ಯಲ್ಲಿ ೨೮ ಕೋಟಿ ೩೮ ಲಕ್ಷ ರೂಪಾಯಿ ಖರ್ಚಾಗಿದೆ. ಡಿಪಿಎಪಿ. ಯಲ್ಲಿ ೯ ಕೋಟಿ ೯ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದರಲ್ಲಿ ಸ್ಟೇಟ್ ಸ್ಟ್ರಕ್ಚರ್‌ಗೆ ೭೩ ಲಕ್ಷ ರೂಪಾಯಿ ಗಳನ್ನು ವೆಸ್ಟರ್ನ್ ಘಾಟ್‌ನಲ್ಲಿ ೬೧೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆರ್. ಎಲ್. ಇ. ಜಿ.ಪಿ. ಯಲ್ಲಿ ೯೮ ಲಕ್ಷ ರೂಪಾಯಿಗಳು ಖರ್ಚಾಗಿದೆ. ಈ ಯೋಜನೆಗಳಲ್ಲಿ ಹಣ ಲ್ಯಾಪ್ಸ್ ಆಗುತ್ತದೆಂದು ಕೆಲವರು ಹೇಳಿದರು. ಅದರಲ್ಲಿ ಒಂದು ಪೈಸೆ ಕೂಡ ಲ್ಯಾಪ್ಸ್ ಆಗುವುದಿಲ್ಲ. ಎಲ್ಲಿ ಹಣ ಉಳಿದಿರುತ್ತದೆ ಅಲ್ಲಿ ಅದನ್ನು ಮುಂದಿನ ವರ್ಷ ಖರ್ಚು ಮಾಡುವುದಕ್ಕೆ ಅವಕಾಶ ಇದೆ. ೧೯೮೬–೮೭ರಲ್ಲಿ ೨೪ ಕೋಟಿ ೨೦ ಲಕ್ಷ ರೂಪಾಯಿ ಬಡ್ಜೆಟ್ ಇತ್ತು. ಆದರೆ

ಖರ್ಚು ಮಾಡಿದ ಹಣ ೨೯ ಕೋಟಿ ರೂಪಾಯಿಗಳು ಹೊಸ ವ್ಯವಸ್ಥೆ ಅಂದರೆ ಚುನಾಯಿತ ಪ್ರತಿನಿಧಿಗಳು ಬಂದನಂತರ ಅಧಿಕಾರಿಗಳ ಪೋಸ್ಟಿಂಗ್ಸ್ ಇತ್ಯಾದಿ ಅಡ್ಮಿನಿಸ್ಟ್ರೇಟೀವ್ ಪ್ರಾಬ್ಲಮ್ಸ್ ನಿರ್ಮಾಣವಾದವು. ಅದಕ್ಕೋಸ್ಕರ ಕೆಲವು ಕೆಲಸಗಳು ನಿಧಾನವಾಗಿ ಹಣ ಖರ್ಚು ಮಾಡುವುದಕ್ಕಾಗದೆ ಉಳಿದಿದೆ. ಉಳಿದಿರತಕ್ಕ ಹಣವನ್ನು ಈ ವರ್ಷ ಖರ್ಚು ಮಾಡುತ್ತೇವೆ. ಮಾನ್ಯ ಆಚಾರ್ ಮತ್ತಿತರರು ೬೫೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ ಇನ್ನೂ ಹಣ ಬಿಡುಗಡೆ ಮಾಡಿಲ್ಲವೆಂದು ಹೇಳಿದರು ಅದು ಸರಿಯಲ್ಲ. ಇವತ್ತು ನಮ್ಮ ಬಡ್ಜೆಟ್ಟಿನಲ್ಲಿ ೬೫೦ ಕೋಟಿ ೬೧ ಲಕ್ಷ ರೂಪಾಯಿ ಹಣ ಏನು ಬಿಡುಗಡೆ ಮಾಡಬೇಕಾಗಿತ್ತು ಅದು ಬಿಡುಗಡೆ ಆಗಿದೆ. ೧೯ ಜಿಲ್ಲಾ ಪರಿಷತ್ತುಗಳಿಗೆ ೬೦೯ ಕೋಟಿ ರೂಪಾಯಿಗಳನ್ನು ಮತ್ತು ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ಗೆ ೪೧ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈ ಪ್ರಕಾರ ಬಡ್ಜೆಟಿನಲ್ಲಿ ಏನು ೬೫೦ ಕೋಟಿ ರೂಪಾಯಿಗೆ ಪ್ರಾವಿಷನ್ ಇತ್ತು, ಆ ಎಲ್ಲಾ ಹಣವನ್ನು ರಾಜ್ಯದ ಎಲ್ಲಾ ಜಿಲ್ಲಾಪರಿಷತ್ತುಗಳಿಗೆ ಮತ್ತು ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ಗೆ ಬಿಡುಗಡೆ ಮಾಡಿದ್ದೇವೆ. ಆದ್ದರಿಂದ ಪ್ರತಿಯೊಂದು ಹಂತದಲ್ಲಿ ಆಪಾದನೆ ಮಾಡುವುದು, ಸರ್ಕಾರ ದಿವಾಳಿಯಾಗುತ್ತಿದೆ ಎಂದು ಹೇಳುವುದು, ಹಣ ಬಿಡುಗಡೆ ಮಾಡಿಲ್ಲವೆಂದು ಹೇಳುವುದು ತಪ್ಪು. ಸಂಪೂರ್ಣ ಹಣವನ್ನು ಸರ್ಕಾರ ಬಿಡುಗಡೆ ಮಾಡಿದೆ. ಈ ಆರ್ಗ್ಯುಮೆಂಟಿಗೆ ಅವಕಾಶ ಇಲ್ಲ. ಒಂದು ಮಾತು ನಿಜ ಪರ್ ಹೆಡ್ ಇಂತಿಷ್ಟು ಎಂದು ಏನು ಕೊಡುತ್ತೇವೆ ಅದರಿಂದ ಮಲೆನಾಡು ಜಿಲ್ಲೆಗಳಿಗೆ ತೊಂದರೆಯಾಗಿದೆ ಎಂದು ನಾಯಕರು ಮತ್ತಿತರರು ಹೇಳಿದರು. ಉತ್ತರ ಕನ್ನಡ ಜಿಲ್ಲೆ ಇರಬಹುದು, ದಕ್ಷಿಣಕನ್ನಡ ಜಿಲ್ಲೆ ಇರಬಹುದು, ಚಿಕ್ಕಮಗಳೂರು ಅಥವಾ ಕೊಡಗು ಇರಬಹುದು, ಈ ಜಿಲ್ಲೆಯ ಜನಸಂಖ್ಯೆ ಕಡಿಮೆ ಇದ್ದ ಕಾರಣ ಇವರಿಗೆ ಪ್ರತಿಯೊಂದು ಹೆಡ್‌ನಲ್ಲಿ ಸಿಗುವ ಹಣದಿಂದ ಆಡಳಿತ ನಡೆಸುವುದು ಕಷ್ಟವಾಗುತ್ತದೆ, ಆದ್ದರಿಂದ ಯಾವ ರೀತಿ ಅವರಿಗೆ ಸಹಾಯ ಮಾಡಲಿಕ್ಕೆ ಸಾಧ್ಯ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಮಂಡಲಕ್ಕೆ ಹಣ ಬರುತ್ತಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ರಾಜ್ಯದಲ್ಲಿ ೨,೪೮೬ ಮಂಡಲಗಳಿವೆ. ಮತ್ತು ೬೭ ಮುನಿಸಿಪಾಲಿಟಿಯಾಗಿ ಕನ್ವರ್ಟ್ ಆಗಿವೆ. ಇವತ್ತು ನಾವು ಕನಿಷ್ಠ ಪ್ರತಿಯೊಂದು ಮಂಡಲಕ್ಕೆ ೧೬ರಿಂದ ೧೭ ಲಕ್ಷ ರೂಪಾಯಿಗಳನ್ನು ಅಭಿವೃದ್ಧಿ ಕೆಲಸಗಳಿಗೆ ಕೊಡುತ್ತಿದ್ದೇವೆ. ಮಲೆನಾಡು ಜಿಲ್ಲೆಯಲ್ಲಿ ಸ್ವಲ್ಪ ಕಡಿಮೆ ಬರಬಹುದು. ಆರ್. ಎಲ್. ಇ. ಜಿ. ಪಿ. ಮತ್ತು ಎನ್. ಆರ್. ಇ. ಪಿ. ಯಲ್ಲಿ ಏನು ಹಣ ಬಿಡುಗಡೆಯಾಗುತ್ತದೆ, ಅದರಲ್ಲಿ ಕೇಂದ್ರಸರ್ಕಾರದ ನಿಯಮದ ಪ್ರಕಾರ ಜಿಲ್ಲೆಯಲ್ಲಿರುವ ಎಸ್‌ಸಿ, ಎಸ್‌ಟಿ ಮತ್ತು ಅಗ್ರಿಕಲ್ಚರಲ್ ಲೇಬರರ್ಸ್ ಸಂಖ್ಯೆ ಮೇಲೆ ಹಣ ಸಿಗುತ್ತದೆ. ಪ್ರತಿಯೊಂದು ಮಂಡಲದಲ್ಲಿ ಅಭಿವೃದ್ಧಿ ಕೆಲಸಗಳಿಗೆ ಸರಾಸರಿ ೧೬ರಿಂದ ೧೭ ಲಕ್ಷ ರೂಪಾಯಿ ಸಿಗುತ್ತದೆ. ಮಾನ್ಯ ಸದಸ್ಯರಾದ ಶಾಣಪ್ಪನವರು ೨೭ ಕೋಟಿ ರೂಪಾಯಿ ಬಜೆಟ್‌ನಲ್ಲಿ ಮಾಡಿ ಎಂದು ಹೇಳಿದ್ದಾರೆ. ಹೆಚ್ಚು ಮಾಡುವುದಕ್ಕೆ ಹೇಗೆ ಸಾಧ್ಯ ? ನಮ್ಮ ಸಂಪನ್ಮೂಲ ಏನಿದೆ, ಸರ್ಕಾರದ ಕಡೆ ಏನು ಹಣ ಇದೆ ಅದರ ಮೇಲೆ ಬಜೆಟ್ ತಯಾರು ಮಾಡಬೇಕಾಗುತ್ತದೆ. ಮಂಡಲದಲ್ಲಿ ಮತ್ತು ಜಿಲ್ಲಾ ಪರಿಷತ್ತುಗಳಲ್ಲಿ ೫೭ ಸಾವಿರ ಜನ ಆರಿಸಿಬಂದಿದ್ದಾರೆ. ಅವರು ಆ ಕಡೆ ಪಕ್ಷದವರು ಇರಬಹುದು, ಈ ಕಡೆ ಪಕ್ಷದವರು ಇರಬಹುದು, ಯಾರೇ ಇರಬಹುದು. ಪ್ರತಿಯೊಬ್ಬರಲ್ಲೂ ತಮ್ಮ ತಮ್ಮ ಭಾಗಗಳಲ್ಲಿ ಅಭಿವೃದ್ಧಿ ಆಗಬೇಕು ಎಂಬ ಅಪೇಕ್ಷೆ ಉಂಟಾಗಿದೆ. ಆದರೆ ಒಂದೇ ಸಾರಿ ಎಲ್ಲ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ರಾಜ್ಯದಲ್ಲಿ ನಾಲ್ಕೈದು ವರ್ಷಗಳ ಕಾಲ ಬಂದ ಭೀಕರ ಬರಗಾಲದಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲೆ ಪರಿಣಾಮ ಆಗಿದೆ. ಕೈಗಾರಿಕೆ ಮತ್ತು ಕೃಷಿ ಉತ್ಪಾದನೆ ಕಡಿಮೆಯಾಗಿ ಹಣದ ಸಂಪನ್ಮೂಲ ಏನು ನಮಗೆ ಬರಬೇಕಾಗಿತ್ತೋ ಅದು ಅಷ್ಟು ಬಂದಿಲ್ಲ. ಇದರ ಜೊತೆಗೆ ಕಳೆದ ಮೂರು ನಾಲ್ಕು ವರ್ಷಗಳಲ್ಲಿ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಸರ್ಕಾರ ಅನೇಕ ರಿಯಾಯಿತಿಗಳನ್ನು ಕೊಟ್ಟಿದೆ. ಅದರಿಂದ ಅಭಿವೃದ್ಧಿ ಕೆಲಸ ಕುಂಠಿತವಾಗಿಲ್ಲ. ಹೊಸದಾಗಿ ಮಂಡಲಗಳಲ್ಲಿ ಮತ್ತು ಜಿಲ್ಲಾ ಪರಿಷತ್ತುಗಳಲ್ಲಿ ಹೊಸ ಪ್ರತಿನಿಧಿಗಳು ಏನು ಆರಿಸಿಬಂದಿದ್ದಾರೆ, ಅವರ ಅಪೇಕ್ಷೆಗಳಿಗೆ ತಕ್ಕಂತೆ ಕೆಲಸ ಮಾಡಲಿಕ್ಕೆ ಸಾಧ್ಯವಾಗಿಲ್ಲ ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಅದರ ಅರ್ಥ ಕೆಲಸ ಮಂದಗತಿಯಿಂದ ನಡೆಯುತ್ತಿದೆ ಎಂದಲ್ಲ. ಬರಗಾಲದಿಂದ ಈ ರೀತಿ ಆಗಿದೆ. ಎಲ್ಲಾ ಕಡೆ ಈಗ ಮಳೆ ಆಗುತ್ತಿದೆ. ಎಲ್ಲಾ ಕಡೆ ಮಳೆಯಾಗಿ ಕೃಷಿ ಮತ್ತು ಕೈಗಾರಿಕೆ ಉತ್ಪಾದನೆ ಜಾಸ್ತಿಯಾದರೆ ಮುಂದಿನ ವರ್ಷ ಹಿಂದೆ ಯಾವ ಪ್ರಮಾಣದಲ್ಲಿ ಕೆಲಸ ಆಗಿತ್ತು ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಬಹುದು. ಇವತ್ತು ಅಂತ್ಯೋದಯ ಯೋಜನೆಯ ಬಗ್ಗೆ ಮಾನ್ಯ ಸದಸ್ಯರಾದ ಆರ್.ಎನ್. ನಾಯಕ್ ಅವರು ಹೇಳಿದ್ದಾರೆ. ಬ್ಯಾಂಕಿಯಲ್ಲಿ ಸಾಲ ಬಿಡುಗಡೆಯಾಗಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ಸರ್ಕಾರದವರು ಜವಾಬ್ದಾರರು ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಹೇಳಿದಹಾಗೆ ಬ್ಯಾಂಕ್ ಮ್ಯಾನೇಜರ್ ಕಾರಣ ಇರಬಹುದು. ಕೆಲವು ಸಾರಿ

ಬ್ಯಾಂಕ್ ಮ್ಯಾನೇಜರ್ ಅವರಿಂದ ಸರಿಯಾದ ಸಹಕಾರ ಸಿಗುತ್ತಿಲ್ಲ. ಅದರ ಅರ್ಥ ಅಂತ್ಯೋದಯ ಯೋಜನೆ ಬಿಡಬೇಕೆಂದು ಅಲ್ಲ. ಅದು ಒಳ್ಳೆಯ ಯೋಜನೆ. ರಾಜ್ಯ ಸರ್ಕಾರ ಕಡುಬಡವರಿಗೆ ಸಹಾಯ ಮಾಡಲಿಕ್ಕೆ ಈ ಯೋಜನೆಯನ್ನು ಜಾರಿಗೆ ತಂದಿದೆ. ಅದೇ ಪ್ರಕಾರ ಕುಡಿಯುವ ನೀರಿನ ಯೋಜನೆ. ಇವತ್ತು ರಾಜ್ಯದಲ್ಲಿ ೨೭,೦೨೮ ಮೈನರ್ ರೆವಿನ್ಯೂ ವಿಲೇಜಸ್ ಇದೆ. ಅದೇ ಪ್ರಕಾರ ೨೫,೫೯೫ ಹ್ಯಾಮ್ಲೆಟ್ಸ್, ತಾಂಡಾಗಳು ಮತ್ತು ಜನತಾ ಕಾಲೋನಿಗಳು ಇವೆ. ಹೀಗೆ ಒಟ್ಟು ೫೨,೬೨೩ ಇವೆ. ನಾವು ಮಾರ್ಚ್ ೧೯೮೫ರ ಅಂತ್ಯದಲ್ಲಿ ಸ್ಟಡಿ ಮಾಡಿದಾಗ ೧೭,೧೩೨ ಹಳ್ಳಿಗಳಲ್ಲಿ ಈ ಒಂದು ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಐಡೆಂಟಿಫೈ ಮಾಡಿದ್ದೆವು. ಅದರ ಪೈಕಿ ೩೧-೩-೮೮ ರೊಳಗೆ ೧೨,೪೭೭ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಮತ್ತು ಇವತ್ತು ಇನ್ನೂ ೪,೬೫೫ ಹಳ್ಳಿಗಳಲ್ಲಿ ನಾವು ಕವರ್ ಮಾಡಬೇಕಾಗಿದೆ. ಅದರ ಪೈಕಿ ೧೯೮೮-೮೯ರಲ್ಲಿ ೨,೬೫೫ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ದೂರ ಮಾಡುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ, ಬಾಕಿ ಉಳಿದ ೨ ಸಾವಿರ ಹಳ್ಳಿಗಳಿಗೆ ೧೯೮೮-೮೯ರ ಅಖೈರಿನೊಳಗೆ ಕುಡಿಯುವ ನೀರಿನ ಸಮಸ್ಯೆಯನ್ನು ದೂರ ಮಾಡುವ ಪ್ರಯತ್ನ ಮಾಡುತ್ತೇವೆ. ನಜೀರ್ ಸಾಹೇಬರು ಬಾಕಿ ಉಳಿದಿರುವ ಎರಡು ಸಾವಿರ ಹಳ್ಳಿಗಳಿಗೆ ೮೮-೯೦ಗೊಳಗೆ ಕುಡಿಯುವ ನೀರಿನ ಅಭಾವವನ್ನು ದೂರ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಏನು ಹೇಳಿದ್ದರು, ಆ ಪ್ರಕಾರ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಡಿಸೆಂಬರ್ ೮೨ರ ತನಕ ರಾಜ್ಯದಲ್ಲಿ ಕೇವಲ ೫೦,೪೦೩ ಬೋರ್‌ವೆಲ್‌ಗಳು ಇದ್ದವು. ಜನತಾ ಸರ್ಕಾರ ಅಧಿಕಾರಕ್ಕೆ ಬಂದ ನಂತರ ೩೧-೩-೮೮ರ ತನಕ ೫೬,೫೪೮ ಬೋರ್‌ವೆಲ್‌ಗಳನ್ನು ತೆಗೆಸಿದ್ದೇವೆ. ಇದು ಒಂದು ಹೆಮ್ಮೆಯ ಸಂಗತಿ. ಕೇಂದ್ರ ಸರ್ಕಾರ ಈ ಕೆಲಸವನ್ನು ಮೆಚ್ಚಿ ರಾಜ್ಯ ಸರ್ಕಾರಕ್ಕೆ ಬೋನಸ್ ಹಣವನ್ನು ಕೊಟ್ಟಿದೆ. ಕೆಲವು ಮಿತ್ರರು ಇದರ ಬಗ್ಗೆ ಟೀಕೆ ಮಾಡಿದ್ದಾರೆ, ಟೀಕೆ ಮಾಡುವುದು ಸರಿಯಲ್ಲ, ಕರ್ನಾಟಕ ರಾಜ್ಯ ಇಡೀ ದೇಶದಲ್ಲಿ ಕುಡಿಯುವ ನೀರಿನ ಅಭಾವವನ್ನು ದೂರಮಾಡುವುದರಲ್ಲಿ ನಂಬರ್ ಒಂದರ ಸ್ಥಾನದಲ್ಲಿದೆ, ಎಂದುದು ಹೆಮ್ಮೆಯ ಮಾತು. ೨೦೦೦ ಜನಸಂಖ್ಯೆಯಿರುವ ಹಳ್ಳಿಗಳಿಗೆ ಪೈಪ್ ವಾಟರ್ ಸಪ್ಲೈ ಸ್ಕೀಮ್ ಹಾಕಿಕೊಂಡಿದ್ದು ಇವತ್ತು ಆ ರೀತಿ ೨೧೮೪ ಹಳ್ಳಿಗಳು ಇವೆ. ಅದರ ಪ್ರಕಾರ ಮಾರ್ಚ್ ೮೮ರ ಒಳಗೆ ೧೧೮೪ ಹಳ್ಳಿಗಳಿಗೆ ಪೈಪ್ ವಾಟರ್ ಸಪ್ಲೈನ್ನು ಇಂಪ್ಲಿಮೆಂಟ್ ಮಾಡಿ ನೀರು ಕೊಟ್ಟಿದ್ದೇವೆ. ಆನ್ ಗೋಯಿಂಗ್ ಸ್ಕೀಮ್ ೮೯ ರಲ್ಲಿ ೫೯೯ ಇವೆ. ೮೮-೮೯ರಲ್ಲಿ ಹೊಸದಾಗಿ ೩೪೪ ಹಳ್ಳಿಗಳಿಗೆ ಪೈಪ್‌ವಾಟರ್ ಸಪ್ಲೈ ಸ್ಕೀಮ್ ಅನ್ನು ಸರ್ಕಾರ ಬಡ್ಜೆಟ್‌ನಲ್ಲಿ ಮಂಜೂರು ಮಾಡಿದೆ. ೨೩೯೭ ಹಳ್ಳಿಗಳಲ್ಲಿ ಈ ಕೆಲಸ ಇನ್ನೂ ಮಾಡಬೇಕಾಗುತ್ತದೆ ಈ ಹಳ್ಳಿಗಳಲ್ಲಿ ಕೂಡ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ. ಹಣದ ಕೊರತೆ ಇರುವುದರಿಂದ ಈ ಕೆಲಸವನ್ನು ಹಂತಹಂತವಾಗಿ ಮಾಡುತ್ತಿದ್ದೇವೆ. ೧೦೦೦ರ ಜನಸಂಖ್ಯೆ ಇರತಕ್ಕ ಹಳ್ಳಿಗಳಲ್ಲಿ ಮಿನಿವಾಟರ್‌ಸಪ್ಲೈ ಸ್ಕೀಮ್ಸ್ ಕೆಲಸವನ್ನು ನಾವು ತೆಗೆದುಕೊಂಡಿದ್ದೇವೆ. ಅದರಲ್ಲಿ ಗುರುತಿಸಲಾದ ಹಳ್ಳಿಗಳು ಸುಮಾರು ೫೨೯೭, ಅದರಲ್ಲಿ ಈಗಾಗಲೇ ಮಾರ್ಚ್ ೮೮ರೊಳಗೆ ೨೨೫೭ ಹಳ್ಳಿಗಳಲ್ಲಿ ಮಿನಿವಾಟರ್ ಸಪ್ಲೈ ಸ್ಕೀಮ್, ಜಾರಿ ಮಾಡಿದ್ದೇವೆ. ಈ ವರ್ಷ ೮೮-೮೯ರಲ್ಲಿ ೭೬೬ ಹಳ್ಳಿಗಳಲ್ಲಿ ಈ ಕೆಲಸಗಳು ನಡೆಯುತ್ತಿದೆ. ೮೮-೮೯ ಮುಂಗಡ ಪತ್ರದಲ್ಲಿ ೨೨೪ ಮಿನಿ ವಾಟರ್ ಸ್ಕೀಮ್ ತೆಗೆದುಕೊಳ್ಳಬೇಕೆಂದು ನಾವು ಗುರಿ ಹಾಕಿಕೊಂಡಿದ್ದೇವೆ, ಮಾರ್ಚ್ ೮೯ರತನಕ ೩,೨೪೭ ಹಳ್ಳಿಗಳಲ್ಲಿ ಮಿನಿವಾಟರ್ ಸಪ್ಲೈ ಸ್ಕೀಮ್ ಕೈಕೊಳ್ಳುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಗುಲ್ಬರ್ಗದಲ್ಲಿ ಸದಸ್ಯರಾದ ಶರಣಪ್ಪನವರು ಹೇಳಿದ ಹಾಗೆ ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ಅದಕ್ಕೋಸ್ಕರ ಅಲ್ಲಿ ಟೆಕ್ನಾಲಜಿ ಮಿಷನ್ ಫಸ್ಟ್ ಫೇಸ್ ಈಗಾಗಲೇ ಜಾರಿಗೆ ಬಂದಿದ್ದು, ಆ ಕೆಲಸ ಶುರು ಆಗಿದೆ. ಆದ್ದರಿಂದ ಆ ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವವನ್ನು ದೂರ ಮಾಡಲಿಕ್ಕೆ ಸಾಧ್ಯ ಆಗಬಹುದು. ೮.೪೫ ಕೋಟಿ ರೂಪಾಯಿಯ ಈ ಯೋಜನೆಯಿಂದ ಗುಲ್ಬರ್ಗ ಜಿಲ್ಲೆಯ ೪೨೩ ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮಾನ್ಯ ದೊಡ್ಡ ಮೇಟಿಯವರು ತಮ್ಮ ಮತದಾರರ ಕ್ಷೇತ್ರವಾದ ನರಗುಂದ ಮತ್ತು ನವಲಗುಂದದಲ್ಲಿ ಬ್ಲಾಕಿಷ್‌ವಾಟರ್ ದೊರೆಯುತ್ತಿದ್ದು ಕುಡಿಯುವ ನೀರಿನ ಸಮಸ್ಯೆ ಇದೆಯೆಂದು ತಿಳಿಸಿದ್ದಾರೆ. ರಾಯಚೂರು ಜಿಲ್ಲೆಗಳಲ್ಲಿಯೂ ಕೂಡ ಟೆಕ್ನಾಲಜಿ ಮಿಷನ್ ಯೋಜನೆಯನ್ನು ಜಾರಿಗೆ ತರುವ ಬಗ್ಗೆ ಯೋಜನೆ ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ. ಅಲ್ಲಿಂದ ಬಂದಮೇಲೆ ಕೆಲಸ ಪ್ರಾರಂಭ ಮಾಡಲಾಗುವುದೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಅಂತ್ಯೋದಯ ಯೋಜನೆ ಮೂಲಕ ಹೆಚ್ಚು ಹರಿಜನ ಮತ್ತು ಗಿರಿಜನರಿಗೆ ಅನುಕೂಲವಾಗಿದೆಯೆಂದು ಕೆಲವು ಸದಸ್ಯರು ಕೇಳಿದ್ದಾರೆ. ಈ ಯೋಜನೆಯಲ್ಲಿ ೧೬೮೯ ಜನ ಹರಿಜನರಿಗೆ ೩೧೮ ಜನ ಗಿರಿಜನರಿಗೆ ಸಹಾಯ ಸಿಕ್ಕಿದೆ. ಒಟ್ಟು ೨೦೦[illegible] ಜನರಿಗೆ ಲಾಭವಾಗಿದೆ. ಕೇಂದ್ರ ಸರ್ಕಾರದ ಆದೇಶದ

ಪ್ರಕಾರ ಶೇಕಡ ೩೦ ಜನರಿಗೆ ಸಹಾಯ ನೀಡಬೇಕು. ಆದರೆ ನಾವು ಈ ಯೋಜನೆಯ ಮೂಲಕ ಶೇಕಡ ೩೩ ಜನರಿಗೆ ಐ. ಆರ್. ಡಿ. ಪಿ. ಯೋಜನೆಯ ಸಹಾಯವನ್ನು ಮಾಡಿದ್ದೇವೆ. ಜಿಲ್ಲಾಪರಿಷತ್ತಿನಲ್ಲಿ ಏನು ೧೮

7-00 p.m.

ಪರ್ಸೆಂಟ್ ರಿಸರ್ವೇಷನ್ ಹರಿಜನ ಗಿರಿಜನರಿಗೆ ಮಾಡಲಾಗಿದೆ ಅದರಲ್ಲಿ ಷೆಡ್ಯೂಲ್ಡ್ ಕಾಸ್ಟ್‌ನವರಿಗೆ ಎಷ್ಟು. ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಎಷ್ಟು ಎಂಬುದು ಸ್ಪಷ್ಟವಾಗಿಲ್ಲವೆಂದು ಮಾನ್ಯ ಶಾಣಪ್ಪನವರು ಹೇಳಿದ್ದಾರೆ. ಇದರ ಬಗ್ಗೆ ತಿದ್ದುಪಡಿಯನ್ನು ಮಾಡಬೇಕೆಂದಿದ್ದೇವೆ. ಈ ತಿದ್ದುಪಡಿ ಈಗಾಗಲೇ ಕ್ಯಾಬಿನೆಟ್ ಮುಂದೆ ಇದ್ದು ಆದಷ್ಟು ಬೇಗನೆ ಅದು ಜಾರಿಯಲ್ಲಿ ಬರುತ್ತದೆ ಎಂದು ಹೇಳುತ್ತೇನೆ. ಇದೇ ರೀತಿ ನಾವು ಅಧಿಕಾರಕ್ಕೆ ಬಂದ ನಂತರ ಕುಡಿಯುವ ನೀರಿನ ಅಭಾವ ನೀಗಿಸಲು ಸುಮಾರು ೨೪೦ ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಖರ್ಚುಮಾಡಿದೆ. ೧೯೮೨-೮೩ರಿಂದ ೧೯೮೭-೮೮ರವರೆಗೆ ೨೪೦.೪೪ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದು ಇದರಲ್ಲಿ ಕೇಂದ್ರದಿಂದ ಬಂದ ೭೩.೪೮ ಕೋಟಿ ರೂಪಾಯಿ ಸೇರಿದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಎಷ್ಟು ಪ್ರಾತಿನಿಧ್ಯ ಕೊಟ್ಟಿದೆ ಎಂಬುದನ್ನು ಮಾನ್ಯ ಸದಸ್ಯರು ಗಮನದಲ್ಲಿ ತೆಗೆದುಕೊಳ್ಳಬೇಕು. ಅದೇ ರೀತಿ ಮಾನ್ಯ ಶಾಣಪ್ಪನವರು ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಬಗ್ಗೆ ಪ್ರಶಂಸೆ ಮಾಡಿದ್ದಾರೆ. ಹಾಗೂ ಮಾನ್ಯ ನಾಯಕ್ ಅವರು ಈ ಬಗ್ಗೆ ಟೀಕೆ ಟಿಪ್ಪಣಿಯನ್ನೂ ಸಹ ಮಾಡಿದ್ದಾರೆ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ೧೯೭೦ರಿಂದ ಸಾಧಾರಣ ೧೯೮೨-೮೩ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಏನು ಒಂದು ಕೆಲಸ ಆಯಿತು ಅದರ ಬಗ್ಗೆ ಸಾಕಷ್ಟು ದೂರುಗಳು ಬಂದವು. ದೂರು ಬಂದ ನಂತರ ಲ್ಯಾಂಡ್ ಆರ್ಮಿಯವರು ಏನು ಹೇಳಿದ ರೆಂದರೆ, ನಮ್ಮಿಂದ ಅದು ಆಗಿಲ್ಲ, ಅದನ್ನು ಪಿ. ಡಬ್ಲ್ಯು. ಡಿ. ಡಿಪಾರ್ಟ್‌ಮೆಂಟಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಏನು ತಪ್ಪು ಇದ್ದರೂ, ದೋಷ ಇದ್ದರೂ ಅದು ಪಿ. ಡಬ್ಲ್ಯು. ಡಿ. ಯಿಂದ ಆಗಿರ ಬಹುದು ಎಂದಿದ್ದಾರೆ. ಈ ಸಲುವಾಗೀ ನಾವು ಈಗಾಗಲೇ ಕೇಂದ್ರ ಸರ್ಕಾರದ ಮಾಜಿ ಇರಿಗೇಷನ್ ಸೆಕ್ರೆಟರಿಯವರನ್ನು ಹಂಪೈರ್ ಮಾಡಿದ್ದು, ಈಗಾಗಲೇ ಕೆಲಸ ನಡೆಯುತ್ತಿದ್ದು ಆದಷ್ಟು ಬೇಗ ವರದಿ ಬರಬಹುದು. ಇವತ್ತು ಲ್ಯಾಂಡ್ ಆರ್ಮಿಯವರಿಂದ ಕೆಲಸ ಕಳಪೆಯಾಗಿದ್ದರೆ ಸ್ವತಹ ಅವರೇ ಖರ್ಚು ಮಾಡಿ ಕೆಲಸ ಮಾಡುತ್ತಾರೆ. ಲೋಕೋಪಯೋಗಿ ಇಲಾಖೆಯಿಂದ ತಪ್ಪು ಆಗಿದ್ದರೆ ಅದನ್ನು ಸರಿ ಪಡಿಸುವ ಜವಾಬ್ದಾರಿ ಆ ಇಲಾಖೆಯದ್ದಾಗುತ್ತದೆ. ಕೆಲವು ಅಂಶಗಳನ್ನು ಅವರು ಹೇಳಿದ್ದು ಸತ್ಯ ಇದೆ, ಆದರೆ ಒಂದು ಮಾತು ನಿಜ. ನಿಜವಾಗಿಯೂ ಲ್ಯಾಂಡ್ ಆರ್ಮಿಯವರು ಒಳ್ಳೆಯ ಕೆಲಸ ಮಾಡಿದ್ದಾರೆ. ೧೯೮೬-೮೭ರಲ್ಲಿ ಇವರ ಟರ್ನ್‌ಓವರ್ ೨೧ ಕೋಟಿ ರೂ. ಇದ್ದದ್ದು ೧೯೮೭-೮೮ ರಲ್ಲಿ ಇದು ೨೬,೨೭ ಕೋಟಿ ರೂಪಾಯಿಗಳಾಗಿದೆ. ಕೆಲಸದ ಬಗ್ಗೆ ದೂರುಗಳು ಬಂದಿರುವುದರಿಂದ ಇವತ್ತು ಯಾರೇ ಕೆಲಸ ಮಾಡಿರಲಿ, ಲೋಕೋಪಯೋಗಿ ಇಲಾಖೆಯವರು ಮಾಡಿರಲಿ. ಬಿಡಿ ಮುಖಾಂತರ ಆಗಿರುವ ಕೆಲಸ ಆಗಿರಲಿ, ಲ್ಯಾಂಡ್ ಆರ್ಮಿಯವರು ಮಾಡಿರುವ ಕೆಲಸವೇ ಆಗಲಿ ಒಂದು ವೇಳೆ ಕೆಲಸ ಮುಗಿಸಿದ ನಂತರ ಒಂದು ವರ್ಷದಲ್ಲಿ ಕೆಲಸದಲ್ಲಿ ಏನಾದರೂ ತೊಂದರೆ ಅಥವಾ ದೋಷ ಇದ್ದರೆ ಅವರ ಖರ್ಚಿನಿಂದಲೇ ಸರಿಪಡಿಸಬೇಕೆನ್ನುವ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ಕಾರ್ಯಕ್ರಮವನ್ನು ಬೇರೆ ಯಾವ ಇಲಾಖೆಯಲ್ಲೂ ಹಾಕಿಲ್ಲ. ಆದ್ದರಿಂದ ಕೆಲಸ ಕಳಪೆಯಾದರೆ ಸರ್ಕಾರ ನೇರವಾಗಿ ಕ್ರಮ ತೆಗೆದುಕೊಳ್ಳುತ್ತದೆ. ಮತ್ತೆ ಲ್ಯಾಂಡ್ ಆರ್ಮಿಯವರು ಕಾಂಟ್ರಾಕ್ಟರನ್ನು ಉಪಯೋಗ ಮಾಡಿ ಕೆಲಸ ಮಾಡಿಸುತ್ತಿದ್ದಾರೆಂದು ಹೇಳಿದ್ದಾರೆ, ಇವತ್ತು ಕಾಂಟ್ರಾಕ್ಟರ್‌ಗಳಿಗೆ ಕೆಲಸ ಕೊಡುವ ವ್ಯವಸ್ಥೆ ಲ್ಯಾಂಡ್ ಆರ್ಮಿಯಲ್ಲಿ ಇಲ್ಲ. ಸರ್ಕಾರದ ಆದೇಶ ಹಾಗೂ ಸೂಚನೆಯಂತೆ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಭೂಸೇನಾ ನಿಗಮದ ಜನರು ಆ ಕೆಲಸವನ್ನು ಮಾಡುತ್ತಿದ್ದಾರೆ. ಇವರಿಗೇ ಕೆಲಸ ಕೊಡಬೇಕೆಂದು ಸರ್ಕಾರಿ ಆದೇಶ ಕೂಡ ಇದೆ. ಈ ಇಲಾಖೆಯಲ್ಲಿ ಒಳ್ಳೆಯ ಕೆಲಸಗಳು ನಡೆದಿದ್ದು ಇನ್ನೂ ಹೆಚ್ಚಿನ ಒಳ್ಳೆಯ ಕೆಲಸಗಳು ಆಗಬೇಕಾಗಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತೆ ಹೈದರಾಬಾದ್ ಕರ್ನಾಟಕದ ಭಾಗದ ಜನರಿಗೆ ಕೆಲಸದಲ್ಲಿ ವೈಟೇಜ್ ಸಿಗುತ್ತಾ ಇಲ್ಲ, ಅವರಿಗೆ ಸಿಗಬೇಕಾದ ಹಣ ಸಿಗುತ್ತಾ ಇಲ್ಲ, ಇದರಿಂದ ಈ ಹಿಂದುಳಿದ ಭಾಗಕ್ಕೆ ತೊಂದರೆ ಆಗುತ್ತದೆಂದು ಮಾನ್ಯ ಶಾಣಪ್ಪನವರು ಹೇಳಿದ್ದಾರೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ನವರು ದಿನಾಂಕ ೧೯-೧೨-೧೯೮೬ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಬ್ಯಾಕ್‌ವರ್ಡ್ ಏರಿಯಾ ಯಾವುದು ಇದೆ, ಅಲ್ಲಿಗೆ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕೆಂಬ ವ್ಯವಸ್ಥೆಯನ್ನು ಮಾಡಿದ್ದಾರೆ. ಬ್ಯಾಕ್‌ವರ್ಡ್ ಏರಿಯಾ ಬೀದರ್, ರಾಯಚೂರು, ಗುಲಬರ್ಗಾ ಯಾವುದೇ ಇರಲಿ, ಅಲ್ಲಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಲಿಕ್ಕೆ ವ್ಯವಸ್ಥೆಯಾಗಿದೆ. ಆದರಿಂದ ಸಾಕಷ್ಟು ಅನುಕೂಲ ಆ ಏರಿಯಾ ಗಳಿಗೆ ಆಗುತ್ತದೆ. ಜಿಲ್ಲಾಪರಿಷತ್ ಹಾಗೂ ಮಂಡಲಪಂಚಾಯತ್ ವ್ಯವಸ್ಥೆ ಜಾರಿ ಆದಮೇಲೆ ಅದರ ಬಗ್ಗೆ ಕೇಂದ್ರದವರು ಕೂಡ ಮೆಚ್ಚಿದ್ದಾರೆ. ಬೇರೆ ಬೇರೆ ರಾಜ್ಯಗಳವರೂ ಸಹ ಮೆಚ್ಚಿದ್ದಾರೆ.

ಕೇಂದ್ರ ಮಾಜಿ ಕೃಷಿ ಮಂತ್ರಿಗಳಾದ ದಿಲ್ಲೋನ್‌ರವರು ಈ ಪ್ರಯತ್ನಕ್ಕೆ ಪ್ರಶಂಸೆ ವ್ಯಕ್ತ ಮಾಡಿದ್ದಾರೆ. ಈ ದೇಶದ ಪ್ರಧಾನಮಂತ್ರಿಗಳು ಸಹ ಮೆಚ್ಚಿಗೆಯನ್ನು ವ್ಯಕ್ತಮಾಡಿದ್ದಾರೆ. ಕೇಂದ್ರಸರ್ಕಾರ ಕೂಡ ನಾವು ಮಾಡಿದ ರೀತಿಯಲ್ಲಿ ಅಧಿಕಾರ ವಿಕೇಂದ್ರೀಕರಣದ ಅನುಕರಣೆ ಮಾಡಲಿಕ್ಕೆ ಹೊರಟಿದೆ. ಮಾನ್ಯ ಸದಸ್ಯರುಗಳು ನನ್ನ ಬೇಡಿಕೆಗಳ ಮೇಲೆ ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ ಅವುಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡುತ್ತೇವೆ. ಆದ್ದರಿಂದ ಈ ಇಲಾಖೆಯ ಬೇಡಿಕೆಗಳನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ರಾಮಯ್ಯ.—ಗ್ರಾಮಾಭಿವೃದ್ಧಿ ಇಲಾಖೆಯ ಹತ್ತಾರು ಯೋಜನೆಗಳಿಗೆ ಕೇಂದ್ರ ಸರಕಾರದ ಪಾಲು ಇದೆ, ಮಾನ್ಯಮಂತ್ರಿಗಳು ಉತ್ತರ ಕೊಡುವಾಗ ಒಟ್ಟು ಇಷ್ಟು ಹಣವೆಂದು ಹೇಳಿದರು, ಆದರೆ ರಾಜ್ಯಸರ್ಕಾರದ ಪಾಲು ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳಲಿಲ್ಲ. ದಯ ಮಾಡಿ ಪ್ರತಿಯೊಂದು ಯೋಜನೆಗೂ ಕೇಂದ್ರಸರ್ಕಾರದ ಪಾಲು ಎಷ್ಟೆಂಬುದನ್ನು ಹೇಳಬೇಕು. ಎರಡನೆಯದಾಗಿ ಮಂಡಲ ಪಂಚಾಯಿತಿ ಹಾಗೂ ಜಿಲ್ಲಾಪರಿಷತ್‌ಗಳು ಏನಿವೆ ಅವುಗಳ ಬಗ್ಗೆ ದೂರುಗಳಿವೆ. ಅವುಗಳ ದುರಂತದ ಬಗ್ಗೆ ತಾವು ಏನೂ ಹೇಳುತ್ತಿಲ್ಲ. ನೀವೇನು ಪ್ರಾಮಿಸ್ ಮಾಡಿದ್ದೀರಿ, ಅಷ್ಟು ಹಣವನ್ನು ಬಿಡುಗಡೆ ಮಾಡಿ ಕೆಲಸ ಕಾರ್ಯಗಳನ್ನು ಮಾಡಲಿ, ನೀವು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಕೊನೆಯಲ್ಲಿ ಬಿಡುಗಡೆ ಮಾಡಿದರೆ ಏನೂ ಪ್ರಯೋಜನವಿಲ್ಲ. ೯೫೦ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ವರ್ಷದ ಕೊನೆಯ ಎರಡು ತಿಂಗಳಲ್ಲಿ ಬಿಡುಗಡೆ ಮಾಡಿದರೆ ಅವರು ಖರ್ಚು ಮಾಡುವುದು ಹೇಗೆ ? ಹಣವನ್ನು ದುರುಪಯೋಗ ಮಾಡಲಿಕ್ಕೆ ಕೊಟ್ಟಿದ್ದಾರೆಂದು ಗೊತ್ತಾಗುತ್ತದೆ, ಈ ವ್ಯವಸ್ಥೆಯಾಗಬಾರದು. ಏನು ಉದ್ದೇಶ ಇಟ್ಟುಕೊಂಡು, ಅದು ಸಫಲವಾಗಲಿಕ್ಕೆ ಪ್ರಥಮದಲ್ಲಿಯೇ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಎನ್.ಆರ್.ಇ.ಪಿ. ಕಾರ್ಯಕ್ರಮಕ್ಕೆ ರಾಜ್ಯಸರ್ಕಾರದ ಪಾಲು ೫೦ ಭಾಗ, ಕೇಂದ್ರಸರ್ಕಾರದ್ದು ೫೦ ಭಾಗ. ಆರ್.ಎಲ್.ಇ.ಜಿ.ಪಿ. ಕಾರ್ಯಕ್ರಮಕ್ಕೆ ನೂರಕ್ಕೆ ನೂರರಷ್ಟು ಕೇಂದ್ರ ಸರ್ಕಾರದ ಹಣ ಸಹಾಯ ಬರುತ್ತದೆ. ತಾವುಗಳೆಲ್ಲರೂ ಸಮಾಧಾನದಿಂದ ಇದ್ದರೆ ನಾನು ಉತ್ತರ ಹೇಳುತ್ತೇನೆ. ನಿಮಗೆ ಏನೇನು ಬೇಕೋ ಎಲ್ಲವನ್ನು ಹೇಳುತ್ತೇನೆ. ಐ.ಆರ್.ಡಿ.ಪಿ. ಯೋಜನೆಗೆ ರಾಜ್ಯಸರ್ಕಾರದ ಪಾಲು ೫೦ ಭಾಗ, ಕೇಂದ್ರಸರ್ಕಾರದ್ದು ೫೦ ಭಾಗ. ಆರ್.ಎಲ್.ಇ.ಜಿ.ಪಿ. ಯೋಜನೆಗೆ ಪೂರ ಕೇಂದ್ರಸರ್ಕಾರದ ಸಹಾಯ ಬರುತ್ತದೆ. ಡಿ.ಪಿ.ಎ.ಪಿ. ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರದ್ದು ೫೦ ಭಾಗ, ಕೇಂದ್ರಸರ್ಕಾರದ್ದು ೫೦ ಭಾಗ. ಆರ್.ಇ.ಜಿ.ಎಸ್. ಕಾರ್ಯಕ್ರಮಕ್ಕೆ ನೂರಕ್ಕೆ ನೂರರಷ್ಟು ರಾಜ್ಯಸರ್ಕಾರದ ಹಣ.

ಶ್ರೀ ಆರ್. ರಾಮಯ್ಯ.—ಆರ್.ಇ.ಜಿ.ಎಸ್. ಕಾರ್ಯಕ್ರಮ ಹೊಸ ಕಾರ್ಯಕ್ರಮ ಇದರಲ್ಲಿ ಎಷ್ಟು ಹಣವನ್ನು ಖರ್ಚುಮಾಡಿದ್ದೀರಿ ? ಅದರಲ್ಲಿ ಏನು ಸೂಚನೆ ಕೊಟ್ಟಿದೆ ಅಂದರೆ ಷೆಡ್ಯೂಲ್ಡ್ ಕಾಸ್ಟ್ ಹಾಗೂ ಷೆಡ್ಯೂಲ್ ಟ್ರೈಬ್ಸ್ ಜನ ಹೆಚ್ಚಾಗಿರುವ ಪ್ರದೇಶಗಳಿಗಾಗಿ ವಿಶೇಷ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಮೀಸಲು ಕ್ಷೇತ್ರಗಳ ಹೊರತಾಗಿ ಈ ಯೋಜನೆಯನ್ನು ಜಾರಿಗೆ ಕೊಡಲಾಗಿದೆ, ಅದು ತಪ್ಪಲ್ಲವೇ ?

ಶ್ರೀ ಆರ್. ವಿ. ದೇಶಪಾಂಡೆ.—ಚಿಕ್ಕೋಡಿಯಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿದ್ದೇವೆ.

ಶ್ರೀ ಆರ್. ರಾಮಯ್ಯ.—ಅದು ಒಂದರಲ್ಲಿ ಜಾರಿಗೆ ತಂದರಾಯಿತಾ ?

ಶ್ರೀ ಆರ್. ವಿ. ದೇಶಪಾಂಡೆ.—ಅದನ್ನು ಪರಿಶೀಲನೆ ಮಾಡುತ್ತೇನೆ.

† ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನಾನು ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ, ಈ ಗ್ರಾಮೀಣ ಪ್ರದೇಶದಲ್ಲಿರುವಂಥ ಯಾವ ಮಾನವಶಕ್ತಿ ಇವೆ, ನಿರುದ್ಯೋಗಿ ಯುವಜನರು ಏನು ಇದ್ದಾರೆ, ಅವರ ಜನಸಂಖ್ಯೆಗೆ ಅನುಗುಣವಾಗಿ ಅಲ್ಲಿ ಏನಾದರೂ ಉದ್ಯೋಗಾವಕಾಶವನ್ನು ಕಲ್ಪಿಸುವ ಯೋಜನೆಯನ್ನು ಏನಾದರೂ ಹಾಕಿಕೊಂಡಿದ್ದೀರಾ ಹೇಗೆ ? ಎರಡನೇಯದಾಗಿ, ಗ್ರಾಮಾಂತರ ಪ್ರದೇಶಗಳಲ್ಲಿರುವಂಥ ಯಾವತ್ತೂ ಹೊಲಗಳಿಗೆ ಹೋಗುವಂಥ ಕಾಲ್ನಡಿಗೆ ರಸ್ತೆ, ಚಿಕ್ಕಡಿ ರಸ್ತೆಗಳಿಗೆ ಆದ್ಯತೆಯನ್ನು ಕೊಟ್ಟು ಈ ರಸ್ತೆಗಳನ್ನು ಮಾಡುವಂಥ ಯೋಜನೆಗಳನ್ನು ಹಾಕಿಕೊಂಡಿದ್ದೀರಾ ಹೇಗೆ ? ಮತ್ತು ಗ್ರಾಮಾಂತರ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪ್ರದೇಶಗಳಲ್ಲಿ ಸೇವೆ ಮಾಡುತ್ತಿರುವಂಥ ಒಬ್ಬ ಗ್ರಾಮಸೇವಕನಾಗಲೀ, ಒಬ್ಬ ಶಿಕ್ಷಕನಾಗಲೀ, ಒಬ್ಬ ಆರೋಗ್ಯಾಧಿಕಾರಿಯಾಗಲೀ. ಯಾವುದೇ ಕಂದಾಯ ಅಧಿಕಾರಿಯಾಗಲೀ, ಇವರೆಲ್ಲ ಏನು ಗ್ರಾಮಾಂತರ ಪ್ರದೇಶಗಳಲ್ಲಿ ಇದ್ದು ಏನು ಸೇವೆ ಮಾಡುತ್ತಿದ್ದಾರೆ, ಇವರಿಗೆಲ್ಲಾ ವಸತಿ ವ್ಯವಸ್ಥೆಯನ್ನು ಅಲ್ಲಿಯೇ ಮಾಡಿದ್ದೀರೋ ಹೇಗೆ ? ಈ ವ್ಯವಸ್ಥೆಯನ್ನು ಮಾಡಿದರೆ ಮಾತ್ರ ಗ್ರಾಮಾಭಿವೃದ್ಧಿ ಸಾಧ್ಯವಾಗುತ್ತದೆ. ಇದರಿಂದ ಮಹಾತ್ಮಾಗಾಂಧಿಯವರು ಕಂಡಂಥ ಕನಸು ನನಸಾಗುತ್ತದೆ ಎಂದು ಮಾನ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಬೇರೆ ಬೇರೆ ಇಲಾಖೆಗಳಿಂದ ಕೆಲಸ ಮಾಡುವ ಗ್ರಾಮಾಂತರ ಪ್ರದೇಶದ ಸಿಬ್ಬಂದಿಗೆ ಮನೆಗಳನ್ನು ಕೊಡಿ ಎಂದು ಮಾನ್ಯಸದಸ್ಯರು ಹೇಳಿದರು. ನನ್ನ ಕೃಷಿ ಇಲಾಖೆಯಿಂದ ಸಿಬ್ಬಂದಿಗಳಿಗೆ ಕ್ವಾಟರ್ಸ್‌ಗಳನ್ನು ಕೊಟ್ಟಿದ್ದೇವೆ. ಆದರೆ ಅವರು ಅಲ್ಲಿ ಉಳಿಯುವುದಕ್ಕೆ ತಯಾರಿಲ್ಲ. ಏಕೆಂದರೆ ಅವರ ಸಂಬಳದಿಂದ ೧೦ ಪರ್ಸೆಂಟ್ ಬಾಡಿಗೆಯನ್ನು ಕೊಡಬೇಕಾಗುತ್ತದೆ. ಈಗ ಹಳ್ಳಿಗಳಲ್ಲಿ ಬಾಡಿಗೆಗೆ ಅದಕ್ಕಿಂತ ಕಡಿಮೆ ದರದಲ್ಲಿ ಮನೆಗಳು ಸಿಗುತ್ತವೆ. ಆದ್ದರಿಂದ ಈ ಕಾರ್ಯಕ್ರಮವನ್ನು ಹಾಕಿಕೊಳ್ಳುವುದು ಸರ್ಕಾರದ ಜವಾಬ್ದಾರಿ ಮತ್ತು ಅದನ್ನು ನಾವು ಹಾಕಿಕೊಳ್ಳುತ್ತೇವೆ. ಆಮೇಲೆ ಹೊಲಗಳಿಗೆ ಹೋಗತಕ್ಕ, ಗಾಡಿಹೋಗತಕ್ಕ ಸಣ್ಣ ಸಣ್ಣ ರಸ್ತೆಗಳನ್ನು ಎಲ್.ಆರ್.ಇ.ಪಿ, ಯಲ್ಲಿ ಮಾಡುತ್ತೇವೆ. ಒಂದೊಂದು ಹೊಲಕ್ಕೂ ರಸ್ತೆ ಮಾಡಲಿಕ್ಕೆ ಸಾಧ್ಯ ಇಲ್ಲ. ಆರ್.ಇ.ಜಿ.ಎಸ್, ಆರ್.ಎಲ್.ಇ.ಜಿ.ಪಿ. ಯಲ್ಲಿ ಇದನ್ನು ಮಾಡುತ್ತಿದ್ದೇವೆ. ಇವುಗಳ ಉದ್ದೇಶವಾದರೂ, ಜನರಿಗೆ ಉದ್ಯೋಗ ಕೊಡುವುದೇ ಆಗಿದೆ. ಕಡುಬಡವನ ಆರ್ಥಿಕ ಮಟ್ಟ ಸುಧಾರಿಸುವುದಕ್ಕೆ ಈ ಎಲ್ಲಾ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ಈ ಎನ್.ಆರ್.ಇ.ಪಿ. ಮತ್ತು ಆರ್.ಎಲ್.ಇ.ಜಿ.ಪಿ' ಯೋಜನೆಗಳಲ್ಲಿ ಕೇಂದ್ರಸರ್ಕಾರದಿಂದ ಬರುವ ಹಣ ಎಷ್ಟು ಮತ್ತು ರಾಜ್ಯಸರ್ಕಾರದ ಪಾಲು ಎಷ್ಟು ಎಂದು ಹೇಳಿದರು. ಈ ಸಬ್ಸಿಡಿ ಕಾರ್ಯಕ್ರಮದಲ್ಲಿ ಏನಾಗುತ್ತದೆ ಎಂದರೆ, ಇದು ಕಾಲಕ್ಕೆ ಸರಿಯಾಗಿ ಬರದೇಹೋದರೆ ಈ ಕಾರ್ಯಕ್ರಮಗಳಲ್ಲಿ ಆಳವಡಿಸಿಕೊಂಡಂತ ಫಲಾನುಭವಿಗಳಿಗೆ ಅದರ ಫಲ ಸಿಗುವುದಕ್ಕೆ ಸಾಧ್ಯ ಆಗುವುದಿಲ್ಲ. ಕಾಲಕ್ಕೆ ಸರಿಯಾಗಿ ಸಬ್ಸಿಡಿಯನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ಹೇಗೆ? ಇನ್ನು, ಮಂಡಲ್ ಪಂಚಾಯತಿಗಳಲ್ಲಿ ಏನಾಗಿದೆ ಎಂದರೆ, ಅವರಿಗೆ ತಿಂಗಳಿಗೆ ಸರಿಯಾಗಿ ಲೈಟ್ ಬಿಲ್ ತುಂಬುವಂಥ, ನೀರಿನ ಬಿಲ್ ತುಂಬುವಂಥ ಹೊರೆಯನ್ನು ಅವರ ತಲೆಮೇಲೆ ಹಾಕಿದ್ದೀರಿ. ಇದರ ಜೊತೆಗೆ ಪದೆಪದೇ ನಿಮ್ಮಿಂದ ಆರ್ಡರ್ ಹೋಗುತ್ತದೆ. ಏನೆಂದರೆ, ಐದು ಸಾವಿರಕ್ಕಿಂತ ಮೇಲೆ ಹಣವನ್ನು ಬಿಡುಗಡೆ ಮಾಡತಕ್ಕದ್ದಲ್ಲ, ಖಜಾನೆಯಿಂದ ತೆಗೆದುಕೊಳ್ಳತಕ್ಕದ್ದಲ್ಲ. ಎಂದು ಈ ಪರಿಸ್ಥಿತಿಯಲ್ಲಿ ಲೈಟ್ ಬಿಲ್ಲನ್ನು ತುಂಬದೇ ಹೋದರೆ ಕೆ.ಇ.ಬಿ. ಯವರು ಕನೆಕ್ಷನ್ ಅನ್ನು ಕಟ್ ಮಾಡುತ್ತಾರೆ. ನಮ್ಮ ಸರ್ಕಾರ ಇದ್ದಾಗ ಬೀದಿ ದೀಪ, ನೀರಿನ ಬಿಲ್‌ಗಳನ್ನು ಸರ್ಕಾರವೇ ತುಂಬುತ್ತಿತ್ತು. ನಿಮ್ಮ ಸರ್ಕಾರ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ಎಂದು ಕೇಳಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.— ಈಗ ಕೆ.ಇ.ಬಿ. ಬಿಲ್‌ನ್ನು ಮಂಡಲ್ ಪಂಚಾಯಿತಿಯವರು ತುಂಬಬೇಕೆಂದು ಮಾಡಿದ್ದೇವೆ. ಅವರು ಸಹ ತಮ್ಮ ಕಾಲಮೇಲೆ ತಾವು ನಿಲ್ಲುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ, ಜಿಲ್ಲಾ ಪರಿಷತ್ತುಗಳಿಗೆ ಯಾವುದೇ ಟ್ಯಾಕ್ಸ್ ಹಾಕುವುದಕ್ಕೆ ಪ್ರಾವಿಜನ್ ಇಲ್ಲ. ಆದರೆ ಮಂಡಲ್‌ಗಳಿಗೆ ಒಂದು ಆದಾಯ ಇದೆ. ಈ ಆದಾಯವನ್ನು ಹೆಚ್ಚು ಮಾಡಿಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಹಿಂದೆ ೧೩ ಕೋಟಿ ರೂಪಾಯಿ ಬಾಕಿ ಇತ್ತು. ೩೧–೩–೮೭ರ ತನಕ ಎಲ್ಲಾ ಹಣವನ್ನು ಸರ್ಕಾರ ಮಂಡಲ್‌ಗಳ ಪರವಾಗಿ ತುಂಬಿದೆ. ೧–೪–೮೭ರಿಂದ ಅವರೇ ಹಣವನ್ನು ತುಂಬಬೇಕಾಗಿದೆ. ಎರಡನೇಯದು ಸಬ್ಸಿಡಿ ಬಗ್ಗೆ ಹೇಳಿದ್ದಾರೆ. ಅದು ಸಕಾಲದಲ್ಲಿ ಕಡುಬಡವನಿಗೆ ಹೋದರೆ ಸಹಾಯವಾಗುತ್ತದೆ ನಿಜ. ಇವತ್ತು ಹಣ ಸಮಯಕ್ಕೆ ಸರಿಯಾಗಿ ಹೋಗಿಲ್ಲದೇ ಇದ್ದಿದ್ದರೆ ನಾವು ಟಾರ್ಜೆಟ್ ಅನ್ನು ರೀಚ್ ಮಾಡುವುದಕ್ಕೆ ಆಗುತ್ತಿದ್ದಿರಲಿಲ್ಲ. ಐ.ಆರ್.ಡಿ.ಪಿ. ಅಂತ್ಯೋದಯ, ನೇಗಿಲುಭಾಗ್ಯದಲ್ಲಿ ಸಹಾಯಮಾಡುವುದಕ್ಕೆ ಸಾಧ್ಯ ಆಗುತ್ತಿರಲಿಲ್ಲ. ಅದಕ್ಕೋಸ್ಕರ ಇದರ ಸಲುವಾಗಿ ಹಣ ಇನ್‌ಟೈಮ್ ಹೋಗುವುದು ಸರಿ. ಅದು ಇನ್‌ಟೈಮ್ ಹೋಗುತ್ತಿದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಈ ಮಂಡಲ್‌ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳ ಮಧ್ಯೆ ಇರುವ ತಾಲ್ಲೂಕು ಸಲಹಾಸಮಿತಿ ಬಗ್ಗೆ ಎರಡು ಮಾತುಗಳನ್ನು ಹೇಳಬೇಕೆಂದು ಇದ್ದೇನೆ. ಈ ಮಂಡಲ್ ಪಂಚಾಯತ್ ಏನಾಗಿದೆ ಎಂದರೆ...

ಒಬ್ಬರು ಮಾನ್ಯ ಸದಸ್ಯರು.—ಈಗ ಮಾತನಾಡುತ್ತೀರಾ ?

(ಸಭೆಯಲ್ಲಿ ನಗು)

ಅಧ್ಯಕ್ಷರು.—ನೀವು ಎದ್ದು ನಿಂತ ಕೂಡಲೇ ಎಲ್ಲರೂ ನಿಮ್ಮನ್ನು ವಿದೂಷಕನನ್ನು ನೋಡಿದಂತೆ ನೋಡಿ ನಗುತ್ತಿದ್ದಾರೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಈ ತಾಲ್ಲೂಕ್ ಸಲಹಾ ಸಮಿತಿ ಎಂಬುದು ಏನಾಗಿದೆ ಎಂದು ಹೇಳಿದರೆ, ಊಟಕ್ಕೆ ಉಂಟು ಲೆಕ್ಕಕ್ಕೆ ಇಲ್ಲ. ಎನ್ನುವ ಪರಿಸ್ಥಿತಿ ಇದೆ. ಪಂಚಾಯ್ತಿ ಸಭೆಗೆ ಹೋದರೆ. ಪ್ರಧಾನರ ಕೈಯಲ್ಲಿ ಬೈಸಿಕೊಳ್ಳಬೇಕು, ಜಿಲ್ಲಾ ಪರಿಷತ್ ಸಭೆಯಲ್ಲೂ ನಾವು ಮಾತು ಕೇಳಬೇಕು, ಇದಕ್ಕೆ ನಿರ್ಧಿಷ್ಟವಾದ ಕಾರ್ಯಕ್ರಮ ಇಲ್ಲ. ನಿರ್ಧಿಷ್ಟವಾದ ಗುರಿ ಇಲ್ಲ. ಸುಮ್ಮನೆ ನಮಗೆ ಕಿರುಕುಳ ಆಗತಕ್ಕಂಥ ಪರಿಸ್ಥಿತಿ ಇವೆ. ಈ ಸಲಹಾ ಸಮಿತಿಗೆ ನೇರವಾಗಿ ಕಿಂಚಿತ್ ಆದರೂ ಅಧಿಕಾರ ಕೊಡಬೇಕು. ಗ್ರಾಮಸಭೆಯಲ್ಲಿ ಒಂದು ತೀರ್ಮಾನ ಮಾಡಿ, ಅದನ್ನು ಜಿಲ್ಲಾಪರಿಷತ್ತಿಗೆ ಅಪ್ರೂವಲ್‌ಗೆ ಕಳುಹಿಸುತ್ತೇವೆ. ಈ ಸಲಹಾ ಸಮಿತಿ ಇದ್ದರೂ ಇವತ್ತು ಉಪಯೋಗ ಇಲ್ಲವೆಂದು ಹೇಳುತ್ತೇನೆ. ಇನ್ನು ಎನ್.ಆರ್.ಇ.ಪಿ. ಮಿನಿ ವಾಟರ್ ಸಪ್ಲೈ ಸ್ಕೀಮ್ ಇವೆಲ್ಲಾ ಕಾರ್ಯಕ್ರಮಗಳು ಇವೆ. ಅಧಿಕಾರ ವಿಕೇಂದ್ರಿಕರಣ ಮಾಡಿದ್ದೇವೆಂದು ಹೇಳುತ್ತೀರಿ, ಗ್ರಾಮಸಭೆಯಲ್ಲಿ ಮಾಡಿದ ತೀರ್ಮಾನ, ಜಿಲ್ಲಾಪರಿಷತ್‌ನಲ್ಲಿ ಅಪ್ರೂವಲ್ ಆದರೂ ಪ್ರಜಾಸಂಖ್ಯೆ ಕಡಿಮೆ ಇದೆ, ಆದಕ್ಕಾಗಿ ಹಣ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ. ಗ್ರಾಮಸಭೆಯಿಂದ ಮತ್ತು ಜಿಲ್ಲಾಪರಿಷತ್ತಿನಿಂದ ಇಂತಹ ಕಡೆ ಮಿನಿ ವಾಟರ್ ಸ್ಕೀಮ್, ಪೈಪ್ ವಾಟರ್ ಸ್ಕೀಮ್ ಕೊಡಿ ಎಂದು ಹೇಳಿದರೆ. ಇದು ಸ್ಟೇಟ್‌ನಿಂದ ಕೊಡುವುದಕ್ಕೆ ಬರುವುದಿಲ್ಲ, ಪ್ರಜಾಸಂಖ್ಯೆ ಕಡಿಮೆ ಇದೆಯೆಂದು ಹೇಳುತ್ತೀರಿ. ಜಿಲ್ಲಾಪರಿಷತ್ತಿನಲ್ಲಿ ಎಷ್ಟೇ ಪ್ರಜಾಸಂಖ್ಯೆ ಇದ್ದರೂ ಕೊಡಬಹುದೆಂದು ನಿರ್ಣಯ ಮಾಡಿದರೂ ನೀವು ಏಕೆ ಕೊಡುವುದಿಲ್ಲ ? ಖಡಾಖಂಡಿತವಾಗಿ ಹೇಳಬೇಕಾದರೆ. ಪಂಚಾಯ್ತಿ ಸಮಿತಿಗೆ ನಿರ್ಧಿಷ್ಟವಾದ ಅಧಿಕಾರ ಕೊಡುತ್ತೀರೋ ಇಲ್ಲವೋ ಎನ್ನುವುದನ್ನು ಹೇಳಬೇಕು. ಒಂದು ನಿರ್ಧಿಷ್ಟವಾದ ಅಧಿಕಾರವನ್ನು ಕೊಡುವುದಿಲ್ಲವೆಂದು ಹೇಳಿದರೆ, ಇದನ್ನು ಡಿಸಾಲ್ವ್ ಮಾಡಿ, ಎರಡೇ ಚಕ್ರ ಸಾಕು. ೪ ಚಕ್ರ ಏನೂ ಬೇಡ, ೨ ಚಕ್ರದಲ್ಲಿಯೇ ಓಡಿಸೋಣ.

ಶ್ರೀ ಆರ್. ವಿ. ದೇಶಪಾಂಡೆ.—ತಾಲ್ಲೂಕು ಸಲಹಾ ಸಮಿತಿಗಳು, they are cordinating and Advisory bodies. ಇವತ್ತು ಈ ಸಮಿತಿಗಳಿಗೆ ಅಧಿಕಾರ ಕೊಡುವ ಅವಕಾಶ, ಕಲಮ್ ೧೩೬–೧ಬಿ ನಲ್ಲಿ ಇದೆ. ಜಿಲ್ಲಾ ಪರಿಷತ್ತುಗಳು ಬೇಕಾದರೆ ಅಧಿಕಾರ ಕೊಡಬಹುದು. ಇದಕ್ಕೆ ಯಾವುದೇ ತರಹದ ಅಡೆತಡೆ ಇಲ್ಲ. ಇನ್ನು ಮಿನಿ ವಾಟರ್ ಸಪ್ಲೈ ಸ್ಕೀಮಿನ ಬಗ್ಗೆ ನಾನು ಹೇಳಿದೆ, ಇದರ ಬಗ್ಗೆ ಅಂಕಿಅಂಶಗಳನ್ನೂ ಕೊಟ್ಟಿದ್ದೇನೆ. ಎಷ್ಟು ಹಳ್ಳಿಗಳಲ್ಲಿ ಮಿನಿ ವಾಟರ್ ಸಪ್ಲೈ ಸ್ಕೀಮ್ ಅಥವಾ ಪೈಪ್ ವಾಟರ್ ಸ್ಕೀಮ್ ಇಂಪ್ಲಿಮೆಂಟ್ ಮಾಡಬೇಕಾಗಿದೆ ಎಂಬುದನ್ನು ಹೇಳಿದ್ದೇನೆ. ಎಲ್ಲಾ ಕಡೆಗೂ ಒಂದೇಸಾರಿ ಈ ಸ್ಕೀಮುಗಳನ್ನು ಕೊಡುವುದಕ್ಕಾಗುವುದಿಲ್ಲ. ಹಣಕಾಸಿನ ವೆಚ್ಚವನ್ನು ನೋಡಿಕೊಂಡು ಈ ಯೋಜನೆಗಳನ್ನು ಜಾರಿಗೆ ಕೊಡಬೇಕಾಗುತ್ತದೆ, ಜೊತೆಗೆ ಪಾಪ್ಯುಲೇಷನ್ ನಾರಮ್ಸ್ ಏನಿದೆ, ಅದರ ಪ್ರಕಾರ ಜಾರಿಯಲ್ಲಿ ಬರುತ್ತದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಂಡಲ್ ಪಂಚಾಯಿತಿಯಲ್ಲಿ ಮತ್ತು ಜಿಲ್ಲಾಪರಿಷತ್ತಿನಲ್ಲಿ ಏನು ಅಪ್ರೂವಲ್ ಮಾಡುತ್ತಾರೆ. ಅದಕ್ಕೆ ಸರ್ಕಾರ ಒಪ್ಪಿಗೆಯನ್ನು ಕೊಡಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಡಿಸ್ಟ್ರಿಕ್ಟ್ ಸೆಕ್ಟರ್‌ನಲ್ಲಿ ಎಲ್ಲಾ ಪ್ಲಾನಿಂಗ್‌ಅನ್ನು ಜಿಲ್ಲಾಪರಿಷತ್ತು ಮಾಡಬೇಕಾಗುತ್ತದೆ, ಎನ್.ಆರ್.ಇ.ಪಿ, ಆರ್.ಎಲ್.ಇ.ಜಿ.ಪಿ. ಡ್ರಿಂಕಿಂಗ್ ವಾಟರ್ ಈ ರೀತಿ ಯಾವುದೇ ಕೆಲಸವಾಗಲೀ, ಎಲ್ಲವೂ ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುತ್ತದೆ. ಇದರಲ್ಲಿ ಯಾರೂ ಹಸ್ತಕ್ಷೇಪ ಮಾಡುವುದಕ್ಕೆ ಬರುವುದಿಲ್ಲ, ಎನ್.ಆರ್.ಇ.ಪಿ. ಕಾರ್ಯಕ್ರಮಗಳನ್ನು ರಾಜ್ಯಮಟ್ಟದಲ್ಲಿ ಮಂಜೂರ್ಮಾಡಲಾಗುತ್ತದೆ, ಆರ್.ಎಲ್.ಇ.ಜಿ.ಪಿ. ಕಾರ್ಯಕ್ರಮಗಳನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಬೇಕಾಗುತ್ತದೆ. ಇದನ್ನು ಕೇಂದ್ರದವರು ಮಂಜೂರ್ಮಾಡುತ್ತಾರೆ ಇವತ್ತು, ಸರ್ಕಾರದಿಂದ ಯಾವುದೇ ಒಂದು ಕೆಲಸ ನಿಲ್ಲಿಸತಕ್ಕಂತಾದ್ದು ಇಲ್ಲ. ಅಲ್ಲಿ ಮಂಜೂರಾಗದೇ ಇದ್ದರೂ ಇಲ್ಲಿ ಮಂಜೂರಾಗುತ್ತದೆ. ಇನ್ನು ಮಂಡಲಗಳಿಗೆ ಕೇವಲ ೨ ಸಾವಿರ ರೂಪಾಯಿಗಳ ಕೆಲಸ ಮಂಜೂರ್ಮಾಡುವ ಅವಕಾಶ ಮಾಡಿಕೊಟ್ಟಿದ್ದೀರಿ ಎಂದರು ನಿಜ. ಇದಕ್ಕೆ ಹೊಸದಾಗಿ ಆದೇಶ ಹೊರಡಿಸಿ, ಪ್ರತಿಯೊಂದು ಮಂಡಲಕ್ಕೂ ೫ ಸಾವಿರ ರೂಪಾಯಿವರೆಗೆ. ತಾಂತ್ರಿಕ ಅನುಮೋದನೆ ಇಲ್ಲದೆ ಅವರು ಕೆಲಸ ಮಾಡಬೇಕೆಂದು ಸರ್ಕಾರ ಆದೇಶ ಹೊರಡಿಸಿದೆ.

ಶ್ರೀ ಬಿ. ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಇಲ್ಲ, ಆದ್ದರಿಂದ ತೆರೆದ ಬಾವಿಗಳನ್ನು ಮತ್ತು ಚಿಕ್ಕನೀರುಸರಬರಾಜು ಯೋಜನೆಗಳನ್ನು ಮತ್ತು ಹೆಚ್ಚು ಹೆಚ್ಚು ಕೊಳವೆ ಬಾವಿಗಳನ್ನು ತೋಡುವುದಕ್ಕೆ ಮನಸ್ಸು ಮಾಡುತ್ತೀರಾ ? ಕೊಳವೆ ಬಾವಿಗಳಲ್ಲಿ ಬಹುಭಾಗ ಫೇಲ್ಯೂರ್ ಆಗಿವೆ, ತಜ್ಞರು ಇದ್ದೂ ಹೀಗಾಗಲು ಕಾರಣವೇನು ? ಇದರಿಂದ ಸರ್ಕಾರದ ಹಣ ನಷ್ಟವಾಗುತ್ತಿಲ್ಲವೇ ? ಕೊಳವೆ ಬಾವಿಗಳನ್ನು ತೋಡಿದಾಗ ೨೦ ಮೀಟರ್ ತೋಡಿ ೧೨೦, ೧೫೦ ಅಡಿಗಳೆಂದು ಹೇಳಿ ಹಣ ಸುಲಿದ ಅನೇಕ ಉದಾಹರಣೆಗಳು ಇದೆ. ಇದನ್ನು ಕಟ್ಟುನಿಟ್ಟಿನಿಂದ ನಿಲ್ಲಿಸುತ್ತೀರಾ ? ಮತ್ತು ರಾಜ್ಯದ ಬೊಕ್ಕಸವನ್ನು ಉಳಿಸುತ್ತೀರಾ ? ತಾವು ತಮ್ಮ ಭಾಷಣದಲ್ಲಿ ವಿರೋಧ ಪಕ್ಷದವರು ಸಾಮಾನ್ಯವಾಗಿ ಮಂಡಲ್ ಪಂಚಾಯ್ತಿ ಮತ್ತು ಜಿಲ್ಲಾ ಪರಿಷತ್ತಿಗೆ ವಿರೋಧ ಎಂದು ಹೇಳಿದಿರಿ ; ನಾವು ಎಂದಿಗೂ ವಿರೋಧ ಇಲ್ಲ. ನಾವು ಹೇಳುವಂಥಾದ್ದು ಇಷ್ಟೆ, ಇದು ಹೊಸ ಕೂಸು ಈ ಕೂಸಿಗೆ ಬಾಲಗ್ರಹ ಚೇಷ್ಟೆ ಬರುವುದು ಸಹಜ. ಆದುದರಿಂದ ಸರಿಯಾದ ವೈದ್ಯರಿಂದ ಔಷಧಿ ಮಾಡಿಸಿ, ಅಂದರೆ ಸರಿಯಾದ ಪ್ರಮಾಣದಲ್ಲಿ ಹಣವನ್ನು ಮಂಡಲ್ ಪಂಚಾಯ್ತಿ ಮತ್ತು ಜಿಲ್ಲಾಪರಿಷತ್ತಿಗೆ ಕೊಟ್ಟರೆ, ಈ ಹೊಸ ಕೂಸು ಬದುಕುತ್ತದೆ, ಇದು ನಮ್ಮ ಆಶಯ, ಹಾಗೆ ಮಾಡುತ್ತೀರಾ ಎಂದು ಕೇಳುತ್ತೇನೆ ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ. ಅವರ ಮೊದಲನೇ ಪ್ರಶ್ನೆಗೆ ಉತ್ತರ ಎಂದರೆ, ಪರಿಶೀಲನೆ ಮಾಡುತ್ತೇನೆ. ಇವತ್ತು ದೇಶದ ಮಟ್ಟದಲ್ಲಿ ಬೋರ್‌ವೆಲ್ ಫೇಲ್ಯೂರ್ ಆದ ಪ್ರಮಾಣ ಸಾಧಾರಣ ೧೬ ರಿಂದ ೧೭ ಪರ್ಸೆಂಟ್ ಇದೆ. ಆದರೆ ನಮ್ಮ ರಾಜ್ಯದಲ್ಲಿ ಸಾಧಾರಣ ೧೦ ಪರ್ಸೆಂಟ್ ಇದೆ. ಆದರೆ ಸೌತ್‌ಕೆನರಾ ಜಿಲ್ಲೆಯಲ್ಲಿ salt water, brackish water ಸ್ವಲ್ಪ ಹೆಚ್ಚಿದೆ: ಆದುದರಿಂದ ಫೇಲ್ಯೂರ್ ಪ್ರಮಾಣ ರಾಜ್ಯದಲ್ಲಿ ಏನಿದೆ ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಇಲ್ಲಿ ಬೋರ್‌ವೆಲ್ ಫೇಲ್ಯೂರ್ ಆಗುತ್ತದೆ. ಇರತಕ್ಕಂಥಾದ್ದನ್ನು ಹೇಳುತ್ತಿದ್ದೇನೆ. ನನಗೆ ಎಷ್ಟು ಗೊತ್ತು ಅಷ್ಟನ್ನು ಹೇಳುತ್ತಿದ್ದೇನೆ. ಅದರ ಸಲುವಾಗಿ ಸೌತ್‌ಕೆನರಾ ಮತ್ತು ನಾರ್ತ್ ಕೆನರಾ ಜಿಲ್ಲೆಯಲ್ಲಾಗಲೀ, ಅದರಲ್ಲೂ ಕರಾವಳಿ ಪ್ರದೇಶದಲ್ಲಿ ಬೋರ್‌ವೆಲ್ ಫೇಲ್ ಆದ ಪ್ರಮಾಣ ರಾಜ್ಯದಲ್ಲಿರುವುದಕ್ಕಿಂತ ಹೆಚ್ಚು ಇದೆ. ಅದಕ್ಕೆ ಕಾರಣ ಪಿ. ಹೆಚ್. ಇ. ಇಲಾಖೆ ಅಲ್ಲ. ಜಿಯಾಲಜಿಸ್ಟ್ಸ್ ಸೈಟ್ ಐಡೆಂಟಿಫೈ ಮಾಡಿದ ನಂತರ ಅಲ್ಲಿ salt water, brackish ಬಂದರೆ ಅದಕ್ಕೆ ಜವಾಬ್ದಾರಿ ಈ ಇಲಾಖೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಎಲ್ಲಿ ಇಂತಹ ಸಮಸ್ಯೆ ಆಗುತ್ತದೆ ಅಲ್ಲಿ ಪುನಃ ಒಂದು ಹೊಸ ಬೋರ್‌ವೆಲ್ ಡ್ರಿಲ್ ಮಾಡಬೇಕೆಂದು ಸರ್ಕಾರ ಆದೇಶ ಕೊಟ್ಟಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ್).—ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲಾ, ಬೈಲಹೊಂಗಲ್ ತಾಲ್ಲೂಕು ಮರಕುಂಬಿ ಗ್ರಾಮದಲ್ಲಿ ಮಲಪ್ರಭಾ ಯೋಜನೆಯಲ್ಲಿ ನಿರ್ವಸಿತ ಜನರು ವಾಸಿಸುತ್ತಿದ್ದು, ಅಲ್ಲಿ ನಾಲ್ಕು ಸಾವಿರಕ್ಕಿಂತ ಹೆಚ್ಚು ಜನ ಇದ್ದಾರೆ. ಅವರಿಗೆ ಟ್ರಕ್ ಮೂಲಕ ನೀರನ್ನು ಹಾಕಲಿಕ್ಕೆ ಹತ್ತಿರುತ್ತಾರೆ. ಆದಕ್ಕಾಗಿ ಇಲ್ಲಿಗೆ ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್‌ನ್ನು ತೆಗೆದುಕೊಳ್ಳಲಾಗುವುದೇ ? ಇದೊಂದು ಪ್ರಾಬ್ಲಮ್ಯಾಟಿಕ್ ವಿಲೇಜ್ ಆಗಿದ್ದು, ಬೇಗನೆ ಈ ಯೋಜನೆಯನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ ?

ಶ್ರೀ ಆರ್. ವಿ. ದೇಶಪಾಂಡೆ.—ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್‌ನ್ನು ನನ್ನ ಲೆವೆಲ್‌ನಲ್ಲಿ ಮಂಜೂರು ಮಾಡುವುದು ಇದ್ದರೆ ಇವತ್ತೇ ನಾನು ಮಾಡುತ್ತಿದ್ದೆ. ಆದರೆ ನನಗೆ ಅಧಿಕಾರ ಇಲ್ಲ. ಅಧಿಕಾರ ವಿಕೇಂದ್ರಿಕರಣ ಆಗಿದ್ದು, ಅದನು ಜಿಲ್ಲಾ ಪರಿಷತ್‌ಗೆ ಕೊಟ್ಟಿದ್ದೇವೆ. ಮಾನ್ಯ ಸದಸ್ಯರ ಸೂಚನೆಯನ್ನು ನಾನು ಜಿಲ್ಲಾಪರಿಷತ್‌ಗೆ ಕಳುಹಿಸಿಕೊಡುತ್ತೇನೆ.

ಶ್ರೀ ವಿನಾಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ಎನ್. ಆರ್. ಇ. ಪಿ. ಯೋಜನೆಯಲ್ಲಿ ೧೯೮೭–೮೮ನೇ ವರ್ಷದಲ್ಲಿ ಕೇಂದ್ರ ಸರಕಾರದಿಂದ ಬಂದಂಥ ದುಡ್ಡು ಎಷ್ಟು ? ಇದಕ್ಕೆ ೧೯೮೭–೮೮ರಲ್ಲಿ ತಾವು ಈ ಯೋಜನೆಗೆ ಖರ್ಚು ಮಾಡಿದ ದುಡ್ಡು ಎಷ್ಟು ? ಈ ಯೋಜನೆಯಲ್ಲಿ ಈ ವರ್ಷ ಯಾವುದೇ ಕಾಮಗಾರಿ ತೆಗೆದುಕೊಳ್ಳ ಕೂಡದು ಎಂದು ಜಿಲ್ಲಾ ಪರಿಷತ್ತಿಗೆ ನಿರ್ದೇಶನ ಕಳುಹಿಸಿದ್ದೀರಾ ? ಇದುವರೆಗೆ ವೆಷ್ಟರ್ನ್ ಘಾಟ್ ಸ್ಕೀಮ್ ಏನಿದೆ, ಆ ಸ್ಕೀಮ್ ಮುಖಾಂತರ ಈ ದುಡ್ಡನ್ನು ಒಂದೇ ಯೋಜನೆಗೆ ಅಳವಡಿಸಲಾಗುತ್ತಿತ್ತು ಕಳೆದ ವರ್ಷ ನಮ್ಮಲ್ಲಿ ಕೊಹಿಲಾ ಫಾರಂನಲ್ಲಿ ೧೦ ಲಕ್ಷ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಲಾಯಿತು. ಪುತ್ತೂರು ತಾಲ್ಲೂಕಿಗೆ ಸಂಬಂಧಪಟ್ಟ ದುಡ್ಡನ್ನು ಅಲ್ಲೇ ಇನ್‌ವೆಸ್ಟ್ ಮಾಡಿರುತ್ತಾರೆ. ಈ ೧೦ ಲಕ್ಷ ರೂಪಾಯಿಗಳನ್ನು ಬೇರೆ ಬೇರೆ ಮಂಡಲ್‌ಗೆ ಡಿವೈಡ್ ಆಗುವ ರೀತಿಯಲ್ಲಿ ಸಣ್ಣ ಪುಟ್ಟ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವುದು ಒಳ್ಳೆಯದೆಂದು ನನ್ನ ಸೂಚನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ೧೯೮೭-೮೮ನೇ ಇಸವಿಯಲ್ಲಿ, ಎನ್. ಆರ್. ಇ. ಪಿ. ಯೋಜನೆಯ ಟೋಟಲ್ ಪ್ರೋಗ್ರಾಂ ೪೬ ಕೋಟಿ ೨೧ ಲಕ್ಷ. ಅದರಲ್ಲಿ ೫೦ ಪರ್ಸೆಂಟ್ ಕೇಂದ್ರ ಸರ್ಕಾರದಿಂದ ಬಂದಿದೆ.

ಶ್ರೀ ವಿನಯಕುಮಾರ್ ಸೊರಕೆ.—ಕೇಂದ್ರ ಸರ್ಕಾರದಿಂದ ಬಂದಂಥ ದುಡ್ಡು ಎಷ್ಟು ? ತಾವು ಒಟ್ಟು ಖರ್ಚು ಮಾಡಿದ ದುಡ್ಡು ಎಷ್ಟು?

ಶ್ರೀ ಆರ್. ವಿ. ದೇಶಪಾಂಡೆ.—೧೯೮೭-೧೯೮೮ನೇ ಇಸವಿಯಲ್ಲಿ ೪೬.೨೧ ಲಕ್ಷ ರೂಪಾಯಿಗಳ ಕಾರ್ಯಕ್ರಮವಿತ್ತು.

ಶ್ರೀ ವಿನಾಯಕುಮಾರ್ ಸೊರಕೆ.—ಅದು ಕಾರ್ಯಕ್ರಮ ಆಯಿತು. ನೀವು ಖರ್ಚು ಮಾಡಿದ ದುಡ್ಡು ಎಷ್ಟು ?

ಶ್ರೀ ಧರ್ಮಸಿಂಗ್.—ಅವರು ನಿರ್ದಿಷ್ಟವಾಗಿ ಏನು ಕೇಳುತ್ತಿದ್ದಾರೆ ಎಂದರೆ, ಎನ್.ಆರ್.ಇ.ಪಿ. ಯೋಜನೆಯಲ್ಲಿ ೫೦ ಪರ್ಸೆಂಟ್ ಸ್ಟೇಟ್‌ದು, ೫೦ ಪರ್ಸೆಂಟ್ ಸೆಂಟರ್‌ದು. ಅದು ಸರಿ. ಆದರೆ ನಿಮಗೆ ಎನ್. ಆರ್. ಇ. ಪಿ. ಯೋಜನೆಗೆ ಸೆಂಟರ್‌ನಿಂದ ಎಷ್ಟು ಹಣ ಬಂದಿದೆ ಎಂದು ಕೇಳುತ್ತಿದ್ದಾರೆ. ತಾವು ಒಟ್ಟಿಗೆ ಹೇಳುತ್ತಿದ್ದೀರಿ. ವಟ್ ಈಸ್ ದಿ ಪಾಯಿಂಟ್. ಅದರಲ್ಲಿ ಮಾನ್ಯ ಬೊಮ್ಮಾಯಿಯವರು, ಎನ್. ಆರ್. ಇ. ಪಿ. ಎಲ್ಲಾ ಕೂಡಿಸಿ ಬರಗಾಲದ ಹಣ ಬಿಡುಗಡೆ ಮಾಡುತ್ತಾರೆ. ಆದುದರಿಂದ ಅವರ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ.—ಎನ್. ಆರ್. ಇ. ಪಿ. ಯಲ್ಲಿ ಸ್ಕೇರ್ಸಿಟಿ ಬಿಟ್ಟು, ಆರ್. ಎಲ್. ಇ. ಜಿ. ಪಿ. ಬಿಟ್ಟು, ಟೋಟಲ್ ಹಣ ರಾಜ್ಯ ಸರಕಾರ ಬಿಡುಗಡೆ ಮಾಡಿದ್ದು ೩೯ ಕೋಟಿ ೨೨ ಲಕ್ಷ. ಟೋಟಲ್ ಹಣ ರಾಜ್ಯ ಸರಕಾರದ್ದು, ಕೇಂದ್ರ ಸರಕಾರದ್ದು ಕೂಡಿ ೪೬ ಕೋಟಿ ೨೧ ಲಕ್ಷ. ಅದರಲ್ಲಿ ೫೦ ಪರ್ಸೆಂಟ್ ಸೆಂಟರ್‌ದ್ದು. ಎಂದರೆ ೨೩ ಕೋಟಿ ೧೦ ಲಕ್ಷ ೫೦ ಸಾವಿರ ಚಿಲ್ಲರೆ ಕೇಂದ್ರಸರ್ಕಾರದ್ದು.

ಶ್ರೀ ವಿನಯಕುಮಾರ್ ಸೊರಕೆ.—ಅಧ್ಯಕ್ಷರೇ, ನಾನು ಕೇಳುತ್ತಿರುವುದು, ೧೯೮೭-೮೮ ರಲ್ಲಿ ಎನ್. ಆರ್. ಇ. ಪಿ. ಯೋಜನೆಗೆ ಕೇಂದ್ರ ಸರಕಾರದಿಂದ ಎಷ್ಟು ದುಡ್ಡು ಬಂದಿದೆ ಎಂದು.

ಶ್ರೀ ಆರ್. ವಿ. ದೇಶಪಾಂಡೆ.—ಅದನ್ನೆ ನಾನು ಹೇಳಿದ್ದು. ಎನ್. ಆರ್. ಇ. ಪಿ. ಯೋಜನೆ ಬಗ್ಗೆಯೇ ನಾನು ಹೇಳಿದ್ದು.

ಶ್ರೀ ವಿನಯಕುಮಾರ್ ಸೊರಕೆ.—೧೯೮೭-೮೮ ರಲ್ಲಿ ಒಟ್ಟು ಎಷ್ಟು ದುಡ್ಡು ಖರ್ಚು ಮಾಡಿದ್ದೀರಿ. ತಾವು ಖರ್ಚು ಮಾಡಿದ ದುಡ್ಡು ಎಷ್ಟು.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಈಗಾಗಲೇ ಹೇಳಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ೧೯೮೭-೮೮ನೇ ಇಸವಿಯಲ್ಲಿ ೩೯ ಕೋಟಿ ೨೨ ಲಕ್ಷ ೯೩ ಸಾವಿರ ರೂಪಾಯಿಗಳನ್ನು ಎನ್. ಆರ್. ಇ. ಪಿ. ಯೋಜನೆಯಲ್ಲಿ ಖರ್ಚು ಮಾಡಲಾಗಿದೆ,

ಶ್ರೀ ವಿನಯಕುಮಾರ್ ಸೊರಕೆ.—ಎನ್. ಆರ್. ಇ. ಪಿ. ಯೋಜನೆಯಲ್ಲಿ ೧೯೮೭-೮೮ ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂತು ? ಅದರಲ್ಲಿ ತಾವು ಎಷ್ಟು ಹಣ ಖರ್ಚು ಮಾಡಿದ್ದೀರಿ ? ಇದರ ಮೊತ್ತ ಹೇಳಬೇಕು ?

ಶ್ರೀ ಆರ್. ವಿ. ದೇಶಪಾಂಡೆ.—ನಾನು ಈಗಾಗಲೇ ಹೇಳಿದ್ದೇನೆ ಕರ್ನಾಟಕ ರಾಜ್ಯದಲ್ಲಿ ಎನ್. ಆರ್. ಇ. ಪಿ. ಯೋಜನೆಗೆ ೧೯೮೭-೮೮ನೇ ಸಾಲಿನಲ್ಲಿ ೩೯,೧೨,೯೩ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು.

ಶ್ರೀ ಬಿ. ಜೆ. ಕೊಟ್ರಪ್ಪ.—ಮಾನ್ಯ ಅಧ್ಯಕ್ಷರೇ, ಜಿಲ್ಲಾಪರಿಷತ್ ಆಕ್ಟ್ ಪ್ರಕಾರ ತಾಲ್ಲೂಕು ಪಂಚಾಯಿತ್‌ನವರು ಮತ್ತು ಜಿಲ್ಲಾ ಪರಿಷತ್ತು ನವರು 'they can inspect and seize the property ಜಿಲ್ಲಾ ಪರಿಷತ್ತಿನ ೭೦-೮೦ ಜನ ಸದಸ್ಯರು ಹೋಗಿ ಇನ್ಸ್‌ಪೆಕ್ಟ್ ಮಾಡಬೇಕೋ ಅಥವಾ ತಾಲ್ಲೂಕ್ ಸಮಿತಿ ಸದಸ್ಯರು ಸೇರಿ ಇನ್ಸ್‌ಪೆಕ್ಟ್ ಮಾಡಬೇಕೋ ಎನ್ನುವುದನ್ನು ಕ್ಲಾರಿಫೈ ಮಾಡಬೇಕು. ಆಮೇಲೆ ಪಿ. ಹೆಚ್. ಇ. ಡಿಪಾರ್ಟ್‌ಮೆಂಟ್‌ಗೆ ರಿಪೋರ್ಟ್ ಮಾಡತಕ್ಕಂಥ ಸಿಸ್ಟಂ

ಈಗ ಇದೆ. ಮಂಡಲ್ ಪಂಚಾಯಿತಿಯವರಿಂದ ಹಣ ತೆಗೆದುಕೊಳ್ಳುತ್ತಾರೆ. ಮಂಡಲ್ ಪಂಚಾಯಿತಿಯವರನ್ನು ಕೇಳಿದರೆ ಪಿ. ಹೆಚ್. ಇ. ಯವರಿಗೆ ರಿಪೋರ್ಟ್ ಮಾಡಿದ್ದೇವೆಂದು ಹೇಳುತ್ತಾರೆ. ಹೀಗಾಗಿ ಬೋರ್‌ವೆಲ್‌ಗಳ ಕೆಲಸಗಳನ್ನು ಆಗುತ್ತಿಲ್ಲ ಈ ಬಗ್ಗೆ ಮಾನ್ಯ ಮಂತ್ರಿಗಳು ನನಗೆ ಉತ್ತರ ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಮೊದಲ ಪ್ರಶ್ನೆಗೆ ಉತ್ತರವಾಗಿ ಹೇಳುವುದಾದರೆ ಯಾವುದೇ ಕೆಲಸವನ್ನು ಸೂಪರ್‌ವೈಜ್ ಮಾಡುವುದಕ್ಕೆ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತಿಯ ನೂರಾರು ಜನ ಸದಸ್ಯರು ಹೋಗಿ ಇನ್ಸ್‌ಪೆಕ್ಟ್ ಮಾಡುವಂತಹ ಅವಶ್ಯಕತೆ ಇಲ್ಲ. ಈಗ ಕೃಷಿ ಇಲಾಖೆಗೆ ಸಂಬಂಧಪಟ್ಟಿದ್ದು ಇದ್ದರೆ ಆ ಇಲಾಖಾಧಿಕಾರಿ ಮಾಡುತ್ತಾರೆ, ತೋಟಗಾರಿಕಾ ಇಲಾಖೆಗೆ ಸಂಬಂಧಪಟ್ಟಿದ್ದು ಆದರೆ ಆ ಇಲಾಖಾಧಿಕಾರಿ ಮಾಡುತ್ತಾರೆ. ಎರಡನೆಯದಾಗಿ ಮಾನ್ಯ ಸದಸ್ಯರು ಬಹಳ ಒಳ್ಳೆಯ ಸೂಚನೆ ಕೊಟ್ಟಿದ್ದಾರೆ. ಇವತ್ತು ಪಿ. ಹೆಚ್. ಇ. ಗಳಿಗೆ ನಾವು ಪ್ರತಿಯೊಂದು ಬೋರ್‌ವೆಲ್ ರಿಪೇರಿಗೆಂದು ೨೫೦ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅವರಿಗೆ ಒಂದು ಮೊಬೈಲ್ ವ್ಯಾನ್ ಸಹ ಕೊಟ್ಟಿದ್ದೇವೆ. ಆದರೂ ಸಹ ಸರಿಯಾದ ಸಮಯಕ್ಕೆ ಅವರು ಬಂದು ರಿಪೇರಿ ಕೆಲಸ ಮಾಡುತ್ತಿಲ್ಲ. ಅದಕ್ಕೋಸ್ಕರ ಈಗ ಸರ್ಕಾರ ಒಂದು ಪರಿಶೀಲನೆ ಮಾಡುತ್ತಿದೆ. ಅದೇನೆಂದರೆ ಯಾರ್ಯಾರು ಯುವಕರು ಬೋರ್‌ವೆಲ್ ರಿಪೇರಿ ಮಾಡುವುದರ ಬಗ್ಗೆ ಟ್ರೈಯಿಜಮ್‌ನಲ್ಲಿ ಟ್ರೈನಿಂಗ್ ಪಡೆದುಕೊಂಡಿರುತ್ತಾರೋ ಅಂತಹವರನ್ನು ಮಂಡಲ್ ಪಂಚಾಯಿತಿಗಳಲ್ಲಿ ಖಾಯಂ ಆಗಿ ನೇಮಿಸಿಕೊಂಡರೆ ಅವರಿಂದ ಈ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸುವುದಕ್ಕೆ ಅನುಕೂಲವಾಗಬಹುದು. ಆಗ ಯುವಕರಿಗೆ ಕೆಲಸ ಸಹ ಕೊಟ್ಟಂತಾಗುತ್ತದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಜಿ. ಕೊಟ್ರಪ್ಪ.—ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬರಲಿಲ್ಲ ಅಧ್ಯಕ್ಷರೇ...

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಮಂಡಲ ಪಂಚಾಯಿಗಳು ಪ್ರಾರಂಭವಾಗುವುದಕ್ಕಿಂತ ಮೊದಲು ಅಂದರೆ ಈ ಕಾನೂನು ಬರುವುದಕ್ಕಿಂತ ಮೊದಲು ಲೋಕೋಪಯೋಗಿ ಇಲಾಖೆಯು ಪ್ರಾರಂಭ ಮಾಡಿದ ಕೆಲವು ಕೆಲಸಗಳು ಮುಗಿಯದೆ ಹಾಗೆಯೇ ಇವೆ. ನನ್ನ ಕ್ಷೇತ್ರದಲ್ಲಿ ಒಂದು ಸೇತುವೆ ಕೆಲಸಕ್ಕೆ ಇನ್ನು ಸುಮಾರು ೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ನಾವು ಈಗ ಪ್ರತಿಯೊಂದು ಮಂಡಲ್ ಪಂಚಾಯಿತಿಗೆ ೫೦ ಸಾವಿರ ರೂಪಾಯಿಗಳನ್ನು ಮಾತ್ರ ಮೀಸಲಾಗಿಡುತ್ತಿದ್ದೇವೆ. ಅದೇ ರೀತಿ ನನ್ನ ಕ್ಷೇತ್ರದಲ್ಲಿ ಒಂದು ರಸ್ತೆ ಕೆಲಸ ಕೂಡ ಮಾಡಬೇಕಾಗಿದೆ. ಅದಕ್ಕೆ ಇನ್ನೂ ಸುಮಾರು ೧೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಆದರೆ ಮಂಡಲ್ ಪಂಚಾಯಿತಿ ವತಿಯಿಂದ ಸುಮಾರು ೩೫ ಸಾವಿರ ರೂಪಾಯಿಗಳು ಮಾತ್ರ ಸಿಗುತ್ತದೆ. ಈ ರೀತಿಯಾದರೆ ಈ ಎರಡೂ ಕೆಲಸಗಳು ಪೂರ್ಣಗೊಳಿಸಲು ಇನ್ನು ೧೦-೨೦ ವರ್ಷಗಳಾಗುತ್ತದೆ. ಆಗ ಇದರ ಕಾಸ್ಟ್ ಆಫ್ ಕನ್‌ಸ್ಟ್ರಕ್ಷನ್ ಜಾಸ್ತಿಯಾಗುತ್ತದೆ. ಆದ್ದರಿಂದ ಸರ್ಕಾರದವರು ಇಂತಹ ಕೆಲಸಗಳಿಗಾದರೂ ವಿಶೇಷ ನೆರವು ನೀಡುತ್ತಾರೆಯೇ ಹೇಗೆ ? ಎರಡನೆಯದಾಗಿ ಗುಡ್ಡಗಾಡು ಬೆಟ್ಟ ಪ್ರದೇಶ ಇರತಕ್ಕಂಥ ಮಂಡಲ ಪಂಚಾಯಿತಿಗಳು ಕೆಲವು ಇವೆ. ಅಲ್ಲಿ ಜನಸಂಖ್ಯೆ ಬಹಳ ಕಡಿಮೆ ಅಂತಹ ಮಂಡಲ ಪಂಚಾಯಿತಿಗಳಿಗೆ ತಲಾದಾಯ ಕೊಡುವುದನ್ನು ಜಾಸ್ತಿ ಮಾಡುತ್ತೀರಾ ? ಮೂರನೆಯದಾಗಿ ಖಾಲಿ ಇರತಕ್ಕಂಥ ಹುದ್ದೆಗಳನ್ನು ಆದಷ್ಟು ಬೇಗ ಭರ್ತಿ ಮಾಡುತ್ತೀರಾ ? ಮತ್ತು ಜಿಲ್ಲಾ ಪರಿಷತ್ತಿಗೆ ಬೇಕಾದ ಹುದ್ದೆಗಳಿಗೆ ಆದಷ್ಟು ಬೇಗ ನೇಮಕಾತಿ ಮಾಡಬೇಕು. ಮತ್ತು ನೇಮಕಾತಿ ಅಧಿಕಾರವನ್ನು ಜಿಲ್ಲಾಪರಿಷತ್ತುಗಳಿಗೆ ಬೇಗ ಕೊಡುತ್ತೀರಾ ? ಕೊನೆಯದಾಗಿ ಮಂಡಲ್ ಪಂಚಾಯಿತಿಗಳನ್ನು ರಚನೆ ಮಾಡುವಾಗ ಸ್ಥೂಲವಾಗಿ ಹನ್ನೆರಡೂವರೆ ಸಾವಿರ ಜನಸಂಖ್ಯೆ ಇರಬೇಕೆಂದು, ಅದಕ್ಕೆ ಒಂದು ಮಂಡಲ ಪಂಚಾಯಿತಿ ನೇಮಕ ಮಾಡಬೇಕೆಂದು ತೀರ್ಮಾನ ಆಯಿತು ಅದು ೧೯೮೧ನೇ ಸೆನ್ಸಸ್ ಪ್ರಕಾರ. ಆದರೆ ಪುರಸಭೆಗಳನ್ನು ಮಂಡಲ್ ಪಂಚಾಯಿತಿಗಳನ್ನಾಗಿ ಕನ್‌ವರ್ಟ್ ಮಾಡಿದಾಗ ಹತ್ತು ಸಾವಿರ ಜನಸಂಖ್ಯೆಗೆ ಮಾತ್ರ ಒಂದು ಮಂಡಲ್ ಪಂಚಾಯಿತಿ ರಚನೆ ಮಾಡುವುದಾಗಿ ತೀರ್ಮಾನ ಮಾಡಿದಿರಿ. ಒಂದೇ ಸರ್ಕಾರ ಎರಡೆರಡು ಯಾರ್ಡ್‌ಸ್ಟಿಕ್ ಇಟ್ಟುಕೊಳ್ಳುವುದು ಸರಿಯಲ್ಲ. ಮಂಡಲ್ ಪಂಚಾಯಿತಿಗಳ ರಚನೆಗೆ ಯಾವುದಾದರೊಂದು ಯಾರ್ಡ್‌ಸ್ಟಿಕ್ ಇಟ್ಟುಕೊಳ್ಳುವುದು ಒಳ್ಳೆಯದು. ಆದ್ದರಿಂದ ಮೊದಲು ಇದ್ದಂತೆ ಹನ್ನೆರಡೂವರೆ ಸಾವಿರ ಜನಸಂಖ್ಯೆಗೆ ಒಂದು ಮಂಡಲ್ ಪಂಚಾಯಿತಿ ಇರುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಎಲ್ಲೆಲ್ಲಿ ವೇಕೆನ್ಸಿಗಳು ಖಾಲಿ ಇವೆಯೋ ಅವುಗಳನ್ನು ಆದಷ್ಟು ಬೇಗ ತುಂಬುವ ಕೆಲಸವನ್ನು ಮಾಡುತ್ತೇವೆ. ಎರಡನೆಯದಾಗಿ ಲೋಕೋಪಯೋಗಿ ಇಲಾಖೆಯವರು

ಮಾಡುತ್ತಿದ್ದ ಕೆಲಸಗಳು ಅರ್ಥವಿಲ್ಲವೆ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು, ಇದಕ್ಕೆ ಹಿಂದೆ ಬಡ್ಜೆಟ್ ಪ್ರಾವಿಜನ್ ಇತ್ತು. ಬಡ್ಜೆಟ್ ಪ್ರಾವಿಜನ್ ಇದ್ದುದಕ್ಕಿಂತ ಹೆಚ್ಚು ಹಣವನ್ನು ಕೆಲವು ಕಡೆ ಖರ್ಚು ಮಾಡಿದ್ದಾರೆ. ಅವರಿಗೆ ಬಡ್ಜೆಟ್ ಪ್ರಾವಿಜನ್ ೫ ಕೋಟಿ ರೂಪಾಯಿಗಳು ಇದ್ದರೆ ಐದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ತೊಂದರೆಯಾಗಿದೆ. ಈಗ ಅಂತಹ ಕೆಲಸಗಳಿಗೆ ಸಹಾಯ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ ಇನ್ನು ಅನೇಕ ಸಲಹೆಗಳನ್ನು ಮಾನ್ಯ ಸದಸ್ಯರು ಏನು ಕೊಟ್ಟಿದ್ದಾರೆ, ಆ ಬಗ್ಗೆ ಕೂಡ ನಾನು ಪರಿಶೀಲನೆ ಮಾಡುತ್ತೇನೆ.

೭-೩೦ ಪಿ. ಎಂ.

ಅಧ್ಯಕ್ಷರು.—ಶಿವಣ್ಣನವರೇ, ತಾವು ಕೇಳಿ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಜನಗಳಿಗೆ ಅನುಕೂಲವಾಗಬೇಕಾದರೆ ಅಧಿಕಾರ ವಿಕೇಂದ್ರೀಕರಣ ಆಗಬೇಕೆಂದು ಹೇಳಿ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ಮಾಡಿದರು. ಇದಕ್ಕೂ ಮೊದಲು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಇರಲಿಲ್ಲವೇ ? ಇವತ್ತು ಇಡೀ ರಾಜ್ಯದಲ್ಲಿ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ರಚನೆ ಮಾಡಿ ಕ್ರಾಂತಿಕಾರಕವಾದ ಬದಲಾವಣೆ ಮಾಡಿದ್ದೇವೆ. ಹಾಗೂ ನಾವು ಕನಸಿನ ರಾಜ್ಯದಲ್ಲಿ ಇದ್ದೇವೆಂದು ಅವರು ಹೇಳಿಕೊಳ್ಳುತ್ತಿದ್ದಾರೆ. ಇವತ್ತಿನ ದಿವಸ ಈ ಜಿಲ್ಲಾಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳು ದ್ವಂದ್ವ ರೀತಿಯಲ್ಲಿ ಕೆಲಸ ಮಾಡುತ್ತಿವೆ. ಇವತ್ತು ತಾಲ್ಲೂಕು ಮಟ್ಟದಲ್ಲಿರುವ ಪಂಚಾಯಿತಿ ಸಮಿತಿಗೆ ಬಿ. ಡಿ. ಓ. ಗಳನ್ನು ಕಾರ್ಯದರ್ಶಿಗಳೆಂದು ಹಾಕಿದ್ದಾರೆ. ಈ ಕಾರ್ಯದರ್ಶಿಗಳ ವ್ಯಾಪ್ತಿ ಎಷ್ಟರಮಟ್ಟಿಗೆ ಕೆಳಕ್ಕೆ ಇಳಿದಿದೆ ಎಂದರೆ, ಅವರಿಗೆ ಏನು ಅಂದರೆ ಏನೂ ಕೆಲಸ ಇಲ್ಲ. ಅಲ್ಲಿ ಆಗುವ ಮೀಟಿಂಗ್‌ನಲ್ಲಿ ರೆಸೆಲ್ಯೂಷನ್ ಪಾಸ್ ಮಾಡುವುದನ್ನು ಬಿಟ್ಟರೆ ಅವರುಗಳಿಗೆ ಬೇರೆ ಕೆಲಸವೇ ಇಲ್ಲ. ಆ ಬಗ್ಗೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದು ನನ್ನ ಪ್ರಶ್ನೆ. ನಂತರ ಜಿಲ್ಲಾಪರಿಷತ್ತುಗಳ ಮಟ್ಟದಲ್ಲಿ ಕಾರ್ಯದರ್ಶಿಗಳನ್ನು ಹಾಕಿದ್ದಾರೆ. ಈ ಕಾರ್ಯದರ್ಶಿಗಳಿಗೆ ಮುಖ್ಯ ಕಾರ್ಯದರ್ಶಿಗಳು ಎಂದು ನಾಮಕರಣ ಮಾಡಿದ್ದಾರೆ. ನಮ್ಮ ರಾಜ್ಯ ಸರ್ಕಾರದ ಕಾರ್ಯಾಂಗವನ್ನು ನೋಡಿಕೊಳ್ಳುವುದಕ್ಕೆ ಒಬ್ಬರು ಚೀಫ್ ಸೆಕ್ರೆಟರಿಗಳು ಇದ್ದಾರೆ. ಈ ಸೆಕ್ರೆಟರಿಯವರಿಗೆ ಮುಖ್ಯ ಕಾರ್ಯದರ್ಶಿಗಳು ಎಂದು ಕರೆಯುತ್ತಾರೆ. ರಾಜ್ಯಕ್ಕೆ ಒಬ್ಬರು ಮುಖ್ಯ ಕಾರ್ಯದರ್ಶಿ ಇರುವುದು ಸರಿ. ಅದು ಬಿಟ್ಟು ಜಿಲ್ಲಾಪರಿಷತ್ತಿನಲ್ಲಿ ಕೆಲಸ ಮಾಡುತ್ತಿರುವ ಕಾರ್ಯದರ್ಶಿಗಳಿಗೆಲ್ಲಾ ಮುಖ್ಯ ಕಾರ್ಯದರ್ಶಿಗಳೆಂದು ನಾಮಕರಣ ಮಾಡಿರುವುದು ಸರಿಯಲ್ಲ. ಇವರನ್ನು ಮುಖ್ಯ ಕಾರ್ಯದರ್ಶಿಗಳೆಂದು ಕರೆಯುವುದಾದರೆ, ಜಿಲ್ಲಾ ಪರಿಷತ್ತಿನ ಅಧ್ಯಕ್ಷರನ್ನು ಮುಖ್ಯ ಮಂತ್ರಿಗಳೆಂದು ಏಕೆ ಕರೆಯಬಾರದು ? ಇದರ ಬಗ್ಗೆ ನನ್ನ ಸೂಚನೆ ಏನೆಂದರೆ, ಜಿಲ್ಲಾಪರಿಷತ್ತಿನಲ್ಲಿ ಕೆಲಸ ಮಾಡುತ್ತಿರುವ ಸೆಕ್ರೆಟರಿಗಳಿಗೆ ಮುಖ್ಯ ಕಾರ್ಯದರ್ಶಿಗಳೆಂದು ಕರೆಯುವುದನ್ನು ಬಿಟ್ಟು ಬೇರೆ ರೀತಿಯಲ್ಲಿ ಕರೆಯುವುದಕ್ಕೆ ಕಾನೂನು ಮಾಡಬೇಕು. ಆಮೇಲೆ ತಾಲ್ಲೂಕು ಬೋರ್ಡ್‌ಗಳು, ಪುರಸಭೆಗಳು ಇದ್ದಾಗ ಡಿವಿಷನಲ್ ಕಮಿಷನರ್‌ರವರಿಗೆ ಹೆಚ್ಚಿನ ಕೆಲಸ ಇರುತ್ತಿತ್ತು. ಆದರೆ ಈಗ ಅವರಿಗೆ ಹೆಚ್ಚಿನ ಕೆಲಸ ಕಾರ್ಯಗಳು ಇಲ್ಲದ ಹಾಗೆ ಆಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂದು ಕೇಳುವುದಕ್ಕೆ ಬಯಸುತ್ತೇನೆ. ಮತ್ತೆ ಎಲ್ಲಾ ಜಿಲ್ಲೆಗಳ ಜಿಲ್ಲಾ ಪರಿಷತ್ತು ಅಧ್ಯಕ್ಷರುಗಳಿಗೆ ಮತ್ತು ಉಪಾಧ್ಯಕ್ಷರುಗಳಿಗೆ ಅವರಿಗೆತಕ್ಕಂತೆ ಸರಿಯಾದ ಸ್ಥಾನಮಾನವನ್ನು ಕೊಟ್ಟಿದ್ದೀರಿ. ಅವರು ಅನೇಕ ಕಾರ್ಯಕ್ರಮಗಳನ್ನು ನೋಡಿಕೊಳ್ಳುತ್ತಿದ್ದಾರೆ. ಅದೇ ರೀತಿ ಆಯಾ ಜಿಲ್ಲಾ ಪರಿಷತ್ತುಗಳಲ್ಲಿ ವಿರೋಧಪಕ್ಷದ ನಾಯಕರುಗಳು ಇದ್ದಾರೆ. ಈ ವಿರೋಧಪಕ್ಷದ ನಾಯಕರುಗಳಿಗೂ ಸರಿಯಾದ ಸ್ಥಾನಮಾನ ಕೊಡತಕ್ಕಂಥ ವ್ಯವಸ್ಥೆಯನ್ನು ಸಚಿವರು ಮಾಡುತ್ತಾರೆಯೋ ಎಂದು ಕೇಳುವುದಕ್ಕೆ ಬಯಸುತ್ತೇನೆ. ಮತ್ತೆ......

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಇವರು ಪ್ರಶ್ನೆ ಕೇಳುತ್ತಿದ್ದಾರಾ ಅಥವಾ ಡಿಬೇಟ್ ಮಾಡುತ್ತಿದ್ದಾರಾ ? ಒಂದೇ ಸಾರಿ ಇಷ್ಟೊಂದು ಪ್ರಶ್ನೆಗಳನ್ನು ಕೇಳಿದರೆ ಉತ್ತರ ಹೇಳುವುದಕ್ಕೆ ಕಷ್ಟವಾಗುತ್ತದೆ.

ಅಧ್ಯಕ್ಷರು.—ನೀವು ಒಂದೇ ಸಾರಿ ಏಳೆಂಟು ಪ್ರಶ್ನೆಗಳನ್ನು ಕೇಳಿದರೆ ಅವರು ಹೇಗೆ ಉತ್ತರ ಹೇಳಬೇಕು ?

ಶ್ರೀ ಎಂ. ಶಿವಣ್ಣ.—ಇನ್ನೊಂದು ಸಾರಿ ಕೇಳುವುದಕ್ಕೆ ಅವಕಾಶ ಕೊಡುವುದಾದರೆ ನಾನು ಕುಳಿತುಕೊಳ್ಳುತ್ತೇನೆ. ಇನ್ನು ಒಂದೇ ಒಂದು ಪ್ರಶ್ನೆ ಇದೆ.

ಅಧ್ಯಕ್ಷರು.—ಕೊನೆಯದಾಗಿ ಕೇಳಿ.

ಶ್ರೀ ಎಂ. ಶಿವಣ್ಣ.—ಮಾನ್ಯ ಸಚಿವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಮೈಸೂರು ಜಿಲ್ಲೆ ಒಂದರಲ್ಲೇ ೬೨ ಸಾವಿರ ಜನ ಜೀತದಾಳುಗಳನ್ನು ಮುಕ್ತಗೊಳಿಸಿದ್ದೇವೆಂದು ಹೇಳಿದ್ದಾರೆ. ಈ ೬೨ ಸಾವಿರ ಜೀತದಾಳುಗಳಲ್ಲಿ ೧೧ ಸಾವಿರ ಜೀತದಾಳುಗಳಿಗೆ ಪುನರ್ವಸತಿ ಸೌಕರ್ಯವನ್ನು ಒದಗಿಸಿ ಕೊಡಲಾಗಿದೆಯೆಂದು ಹೇಳಿದ್ದಾರೆ. ಜೀತದಾಳುಗಳಿಗೆ ಸರ್ಕಾರ ಕೊಡುವ ೬೫೫೦ ಪರಿಹಾರ ಹಣದಲ್ಲಿ ಫಲಾನುಭವಿಗಳಿಗೆ ಕೇವಲ ೩ ಸಾವಿರ ರೂಪಾಯಿಗಳು ಸಿಗುತ್ತಿವೆ. ಇದರ ಬಗ್ಗೆ ಒಂದು ಉದಾಹರಣೆಯನ್ನು ಹೇಳುವುದಾದರೆ,

ಅಧ್ಯಕ್ಷರು.—ಈಗ ಉದಾಹರಣೆ ಬೇಡ.

ಶ್ರೀ ಎಂ. ಶಿವಣ್ಣ.—೬೫೫೦ ರೂಪಾಯಿಗಳನ್ನು ಜೀತವಿಮುಕ್ತರಿಗೆ ಕೊಟ್ಟರೆ, ಅವರು ಕುರಿ, ಎತ್ತು, ಮುಂತಾದವುಗಳನ್ನು ತೆಗೆದುಕೊಡುತ್ತಾರೆ. ನಾನು ಹೇಳುತ್ತೇನೆ, ಈ ರೀತಿ ಕುರಿ ಕೋಳಿ ತೆಗೆದುಕೊಡುವ ಬದಲು ಅವರಿಗೆ ಶಾಶ್ವತವಾದ ಒಂದು ಪರಿಹಾರವನ್ನು ದೊರಕಿಸಿ ಕೊಡುವುದಕ್ಕೆ ಮಾನ್ಯ ಸಚಿವರು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು, ಬಿ.ಡಿ.ಓ. ಗಳಿಗೆ ಏನೂ ಕೆಲಸ ಇಲ್ಲವೆಂದು ಹೇಳಿದ್ದಾರೆ. ಬಿ.ಡಿ.ಓ. ಗಳಿಗೆ ತಾಲ್ಲೂಕು ಮಟ್ಟದ ಪೂರ್ಣ ಜವಾಬ್ದಾರಿ ಇರುತ್ತದೆ. ತಾಲ್ಲೂಕು ಮಟ್ಟದಲ್ಲಿ ಆಗುವ ಎಲ್ಲಾ ಕೆಲಸಗಳನ್ನು ಅವರು ಸೂಪರ್‌ವಿಷನ್ ಮಾಡಬೇಕಾಗುತ್ತದೆ. ತಾಲ್ಲೂಕು ಪಂಚಾಯಿತಿ ಸಮಿತಿಗಳಲ್ಲಿ ಅವರು ಕಾರ್ಯದರ್ಶಿಗಳಾಗಿ ಎಲ್ಲಾ ಕೆಲಸ ಸರಿಯಾಗಿ ನಡೆಯುತ್ತಿವೆಯೋ ಎಂದು ಅವರು ನೋಡಬೇಕಾಗುತ್ತದೆ. ಪಂಚಾಯತ್ ಸೆಕ್ರೆಟರಿಯವರು ಎಲ್ಲಾ ಕೆಲಸಗಳನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದಾರೆಯೋ ಇಲ್ಲವೇ ಎಂದು ಅವರು ನೋಡಬೇಕು. ಫೈನಾನ್ಸ್ ಕಂಟ್ರೋಲ್ ಕೊಟ್ಟರೆ ಮಾತ್ರ ಅದು ಜವಾಬ್ದಾರಿ ಎಂದು ಹೇಳುವುದಕ್ಕಾಗುವುದಿಲ್ಲ. ಬಿ.ಡಿ.ಓ. ಮುಖಾಂತರ ಬೇರೆ ಬೇರೆ ಅಭಿವೃದ್ಧಿ ಕೆಲಸ ಕಾರ್ಯಗಳು ನಡೆಯುತ್ತಿವೆ. ಅವರಿಗೂ ಸಾಕಷ್ಟು ಜವಾಬ್ದಾರಿಯುತವಾದ ಕೆಲಸ ಇದ್ದೇ ಇದೆ. ಹಾಗೆಯೇ ಡಿವಿಜನಲ್ ಕಮೀಷನರ್‌ರವರಿಗೂ ಕೂಡ ಸಾಕಷ್ಟು ಕೆಲಸ ಮತ್ತು ಅಧಿಕಾರ ಇದೆ. Supervision is also a very big responsibility.

ಶ್ರೀ ಎಂ. ಶಿವಣ್ಣ.—ತಾಲ್ಲೂಕು ಪಂಚಾಯತ್ ಸಮಿತಿಯಲ್ಲಿ ಅಧ್ಯಕ್ಷತೆಯನ್ನು ವಹಿಸುವುದು ಬಿಟ್ಟರೆ ಶಾಸಕರಿಗೆ ಬೇರೆ ಏನು ಅಧಿಕಾರ ಇದೆ ?

ಶ್ರೀ ಆರ್. ವಿ. ದೇಶಪಾಂಡೆ.—ಮತ್ತೆ ಜಿಲ್ಲಾ ಪರಿಷತ್ತಿನಲ್ಲಿ ಚೀಫ್ ಸೆಕ್ರೆಟರಿ ಎಂಬ ಡೆಸಿಗ್ನೇಶನ್ ಏಕೆ ಕೊಟ್ಟಿದ್ದೀರಿ ಎಂದು ಕೇಳಿದ್ದಾರೆ ಆ ಬಗ್ಗೆ ಇದೇ ಸದನದಲ್ಲಿ ನಾವೆಲ್ಲರೂ ಕೂಡಿ ಅವರಿಗೆ ಒಂದು ಡೆಸಿಗ್ನೇಶನ್ ಕೊಡುವ ಬಗ್ಗೆ ನಿರ್ಣಯವನ್ನು ಮಾಡಿದ್ದೇವೆ.

ಅಧ್ಯಕ್ಷರು.—ದೇಶಪಾಂಡೆಯವರೆ, ಜಿಲ್ಲಾ ಪರಿಷತ್ತಿನ ಕೆಲಸ ಕಾರ್ಯಗಳ ಬಗ್ಗೆ ಹೇಳಿ. ಮಾನ್ಯ ಸದಸ್ಯರಿಗೆ ಆಗ ಗೊತ್ತಾಗುತ್ತದೆ. ಸೆಕ್ಷನ್ ೧೨೬ರ ಪ್ರಕಾರ ಅವರಿಗೆ ಏನೇನು ಪವರ್ಸ್ ಇದೆ ಎಂದು ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ.—ನಾವು ಅಧಿಕಾರಕ್ಕೆ ಬಂದ ನಂತರ ವಿರೋಧಿ ಪಕ್ಷದವರನ್ನು ರೆಕಾಗ್ನೈಸ್ ಮಾಡಿ ಅವರಿಗೆ ಒಂದು ಸ್ಟೇಟಸ್‌ನ್ನು ಕೊಟ್ಟಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹಾಗೆ ಮಾಡಿದ್ದು ನಿಮ್ಮ ಸರಕಾರ ಅಲ್ಲ, ನಮ್ಮ ಸರಕಾರದವರು ಮಾಡಿದ್ದು......

ಶ್ರೀ ಆರ್.ವಿ. ದೇಶಪಾಂಡೆ.—ಜನತಾ ಪಕ್ಷದ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ ಮೊದಲನೇ ಬಾರಿಗೆ ಈ ತರಹದ ಒಂದು ಅಧಿಕಾರವನ್ನು ವಿರೋಧಿ ಪಕ್ಷದವರಿಗೆ ಕೊಟ್ಟಿದ್ದು. ಅದೇ ಪ್ರಕಾರ ಇವೊತ್ತು ಜಿಲ್ಲಾ ಪರಿಷತ್ತಿನಲ್ಲಿ ವಿರೋಧಿ ಪಕ್ಷದ ನಾಯಕರಿಗೆ ಏನು ಸ್ಥಾನಮಾನಗಳನ್ನು ಕೊಡಬೇಕೆಂಬ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು.—ಲೈಕುದ್ದೀನ್‌ರವರೇ ತಾವು ಕ್ಲಾರಿಫಿಕೇಶನ್ ಕೇಳಿ, ಭಾಷಣ ಮಾಡುವುದು ಮಾತ್ರ ಬೇಡ.

† SRI MOHAMMAD LIAQUDDIN BURNUDDIN (Bidar).—Mr. Speaker, the Hyderabad-Karnataka area Zilla parishads, on account of their backwardness, had asked for additional allotment of funds in order to remove the regional imbalances and it was promised that the additional funds will be provided to that area. Has the Hon. Minister provided the additional funds for the Zill parishads of Bidar, Gulbarg and Raichur, may be clarified. What steps the hon. Minister has taken for the improvement of that area ? Whether the additional amount has been allotted to that area ? Secondly, it is an admitted fact that all the PWD roads are in a bad condition and after the constitution of the Zilla parishads and Mandal pachayats, there is a conflict between the PWD and the engineering staff of the Zilla Parishads The Zilla Parishads engineers say that it is PWD work and when we opproach the PWD athey say it is allotted to the Zill Parishads. For this reason no decided no road work has been taken in our area and the matter is not yet decided nor settled. For this a clarification is necessary. Similar is the state of affairs in irri ation Department also. Minor Irrigation Department is there. There were two sanctioned irrigation schemes in Bidar at Samistapur and Chintalgere. Three years back it was sanctioned. You have not taken up and the reason is that nobody is accepting the responsibility. Who has to complete that irrigation project ? Regarding MP-1 and MP-2, who has to sanction the budget ? Whether it is to be sanctioned by the Taluk Samithi or the Zilla Parishad, because Mandal Phanchyaths are not authorised to sanction those estimates.

ಅಧ್ಯಕ್ಷರು.—ಲೈಕುದ್ದೀನ್‌ರವರೇ ದಯಾವಿಟ್ಟು ಮುಕ್ತಾಯ ಮಾಡಿ. ತಾವುಗಳು ಭಾಷಣ ಮಾಡುತ್ತಿದ್ದೀರೋ ಅಥವ ಕ್ಲಾರಿಫಿಕೇಶನ್ ಕೇಳುತ್ತಿದ್ದರೋ ? ಈ ರೀತಿಯಾದರೆ ನಾನು ಬೇರೆ ಯಾವರನ್ನು ಕರೆಯುತ್ತೇನೆ.

SRI MOHAMMED LAIQUDDIN.—There is anomaly regarding MP-2. Who is to sanction the budget.

SRI R. V. DESHAPANDE.—Hon. Member has raised one or two issues. I think he was not present when I replied, With regard to the backward areas, there is a commitment on the government that the backward areas will be given more weightage

---

† ಈ ಚಿಹ್ನೆ ಸಂಬಂದ ಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

while releasing the found. This is the proceedings of the Government of Karnataka, Planning Department, We have already issued instructions by our order dated 19th December, 1986 to give more weightage to the b ckward areas while relealsing the funds. In this years allocation districts like Bidar, Raichur, Gulbarga and Bellary are getting more money when compared to the last year. Secondly, Hon. Member said that there is no co-ordination between the PWD and ZP and thereby there has been a problem in executing the works. I do agree that this is a new set-up. Last year was the first year, and there were some administratative probl ms and those administrative problems have been solved There should not be any difficulty in executing these works Thirdly, as for as he Mandal Panchayaths, Vibhag-which are the works of Mand ls, are to be executed by the Mandal Panchayaths and Vibhag-2, which are the works of Zilla Parishads will be executed by the Zilla Parishads. Now again Government h s said in its order that the Mandal Panchayaths could sanction works withouc technical approval to the extent of Rs. 5,000/-,

ಶ್ರೀ ಧರ್ಮಸಿಂಗ್.—ಮಾನ್ಯ ಸಚಿವರಲ್ಲಿ ನಾನು ಮೂರು ಪ್ರಶ್ನೆಗಳನ್ನು ಕೇಳ ಬಯಸುತ್ತೇನೆ. ತಾವು ನಮಗೆ ಕೊಟ್ಟ ರಿಪೋರ್ಟಿನಲ್ಲಿ ೧೯೮೫-೮೬ರಲ್ಲಿ ಮತ್ತು ೧೯೮೬-೮೭ರಲ್ಲಿ ಎನ್. ಆರ್. ಇ. ಪಿ ಮತ್ತು ಇ.ಜಿ.ಪಿ.ಗೆ ೬,೯೮೦ಲಕ್ಷ ರೂ. ಗಳನ್ನು ಕೊಟ್ಟು ಅದರಲ್ಲಿ ೬,೪೬೭ ಲಕ್ಷ ರೂ. ಗಳ ಖರ್ಚು ಮಾಡಿದ್ದೀರಿ. ಅದರಲ್ಲಿ ಕೆಲಸ ತೆಗೆದು ಕೊಂಡಿರುವುದು ೪೧,೩೫೯ ಕೆಲಸಗಳು ಮಾತ್ರ. ಹಾಗೆಯೇ ಅದರಲ್ಲಿ ಕಂಪ್ಲೀಟ್ ಮಾಡಿರುವುದು ೩೦,೯೫೯ ಕೆಲಸಗಳು ಮಾತ್ರ. ಇನ್ನೂ ೧೧ ಸಾವಿರ ಕೆಲಸಗಳು ಬಾಕಿ ಇವೆ. ಈಗ ಏನಾಗಿದೆ ಅಂದರೆ ೬,೯೮೦ ಲಕ್ಷ ರೂ.ಗಳಲ್ಲಿ ೬,೪೬೭ ಲಕ್ಷ ರೂ, ಗಳನ್ನು ಖರ್ಚು ಮಾಡಿದ್ದೀರಿ. ಕೆಲಸ ತೆಗೆದು ಕೊಂಡಿದ್ದು ೪೧, ೩೫೯. ೧೯೮೫-೮೬ ಮತ್ತು ೧೯೮೬-೮೭ರ ರಿಪೋರ್ಟನ್ನು ನಮಗೆ ಕೊಟ್ಟಿದೀರಿ. ೧೯೮೭-೮೮ರ ರಿಪೋರ್ಟ್ ಕೊಡಬೇಕು. ಈ ವರ್ಷದಲ್ಲಿ ನೀವು ೧೧ ಸಾವಿರ ಕೆಲಸಗಳನ್ನು ನೀವು ಕಂಪ್ಲೀಟ್ ಮಾಡಬೇಕು. ಈ ಕೆಲಸಗಳಿಗೆ ಮೀಸಲಾಗಿಟ್ಟ ಹಣದಲ್ಲಿ ಅರ್ಧದಷ್ಟು ಹಣ ಕೇಂದ್ರ ಸರಕಾರದ್ದು ಮತ್ತು ಅರ್ಧದಷ್ಟು ಹಣ ರಾಜ್ಯ ಸರಕಾರದ್ದು ಇರುತ್ತದೆ. ಈಗ ಕೊಟ್ಟಿರುವ ನಿಮ್ಮ ರಿಪೋರ್ಟ್ ಮತ್ತು ಪರ್‌ಫಾರ್ಮೆನ್ಸ್ ಬಡ್ಜೆಟ್‌ನಲ್ಲಿ ಜಿಲ್ಲಾಪರಿಷತ್ತುಗಳಿಗೆ ಎನ್.ಆರ್.ಇ.ಪಿ. ಹಣವನ್ನು ಅಂದರೆ ೯೨೦ ಕೋಟಿ ರೂ,ಗಳನ್ನು ನೀವು ಒದಗಿಸಿಲ್ಲ. ಒಟ್ಟಿನಲ್ಲಿ ಇವೊತ್ತಿನ ವರೆಗೆ ಕೇಂದ್ರ ಸರಕಾರದಿಂದ ಎನ್.ಆರ್.ಇ.ಪಿ. ಮತ್ತು ಆರ್.ಎಲ್.ಇ.ಜಿ.ಪಿ. ಗಳಿಗೆ ಎಷ್ಟು ಹಣ ಬಂದಿದೆ ಎಂದು ದಯವಿಟ್ಟು ತಿಳಿಸಬೇಕು.

ಅಧ್ಯಕ್ಷರು.—ಧರ್ಮಸಿಂಗ್‌ರವರೇ, ಅವರು ಉತ್ತರ ಕೊಡುವಾಗ ನೀವು ಕೇಳಲಿಲ್ಲ. ಕಡೆಗೆ ಬಂದು ಏನೇನೋ ಕೇಳುತ್ತಿದ್ದೀರಿ. ಜನರಲ್ ಪಾಲಿಸಿ ಬಗ್ಗೆ ತಾವು ಕೇಳುತ್ತಿದ್ದೀರೆಂದು ನಾನು ಪರ್ಮಿಷನ್ ಕೊಟ್ಟಿದ್ದೇನೆ.

ಶ್ರೀ ಧರ್ಮಸಿಂಗ್.—೮೫-೮೬. ೮೬-೮೭ರಲ್ಲಿ ಎಷ್ಟು ದುಡ್ಡು ರಿಲೀಸ್ ಮಾಡಿದ್ದೀರಿ, ಎಷ್ಟು ಎಕ್ಸ್‌ಪೆಂಡಿಚರ್ ಆಗಿದೆ, ಎಷ್ಟು ವರ್ಕ್ಸ್ ಆಗಿದೆ ಎಂಬುದನ್ನು ತಿಳಿಸಬೇಕು, ಇವೊತ್ತು ಎನ್‌ಆರ್‌ಇಪಿಯಲ್ಲಿ ನೀವು ೪೦೧೬ ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿರುವುದರಲ್ಲಿ ಅಲಾಟ್ ಮೆಂಟ್ ಎಷ್ಟು ಆಗಿದೆ. ಆರ್.ಎಲ್.ಜಿ.ಪಿ. ಏನು ಇದೆ. ಇದರ ಬಾಬ್ತು ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ, ಅದು ನನಗೆ ಗೊತ್ತಿಲ್ಲ, ತಮ್ಮ ಪಟ್ಟಿ ಪ್ರಕಾರ ಪ್ರಶ್ನೆಯನ್ನು ಕೇಳಿದ್ದೇನೆ. ಅದರಲ್ಲಿ ೩೭೫೯ ಲಕ್ಷ ರೂಪಾಯಿ ಅಲಾಟ್‌ಮೆಂಟ್, ರಿಲೀಸ್‌ಮಾಡಿದ್ದು ೨೯೪೯ ಲಕ್ಷ ರೂಪಾಯಿಗಳು ಯಾಕೆ ೧೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲ.

ಅಧ್ಯಕ್ಷರು.—ಎಷ್ಟು ಪ್ರಶ್ನೆಗಳನ್ನು ಕೇಳುವುದು, ಜಾಸ್ತಿ ಕ್ಲಾರಿಫಿಕೇಶನ್ಸ್ ಕೇಳುತ್ತಿದ್ದೀರಿ, ನೀವು ಸೀನಿಯರ್ ಮೆಂಬರ್ ಎಂದು ನಿಮಗೆ ಕ್ಲಾರಿಫಿಕೇಶನ್ ಕೇಳಲು ಅನುಮತಿ ಕೊಟ್ಟಿದ್ದೇನೆ. ಅವರು ಉತ್ತರಹೇಳುತ್ತಾರೆ ಕೇಳಿ.

ಶ್ರೀ ಆರ್. ವಿ. ದೇಶ್‌ಪಾಂಡೆ.—ಇಲ್ಲಿ ಏನಾಗುತ್ತದೆಎಂದರೆ ಎನ್. ಆರ್. ಇ. ಪಿ. ಮತ್ತು ಆರ್. ಎಲ್. ಇ. ಜಿ. ಪಿ. ಯಲ್ಲಿ though the works are recommended by Zilla Parishads, the action plan for NREP is approved by the State Government. As far as RLEGP is concerned it is approved by the Central Government and there is delay by the Central Government in sending their communication. Hence, that is also one of the reasons for the delay in executing the works and delay in releasing the funds. For the year 1986-87 and 1987-88, under NREP 41,399 wors were to be completed by the end of 1986-87 and it is a fact that 30,939 works were completed. Balance works or spillover works, most of them have been completed in 1987-88.

ಅಧ್ಯಕ್ಷರು.—ಖರ್ಗೆಯವರೇ ತಾವು ಕೇಳಿ, ಎಲ್ಲರೂ ಕೂಡ್ರಿ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಅವರು ಉತ್ತರವನ್ನು ಕೊಡುವಾಗ ನಾನು ಇರಲಿಲ್ಲ. ಗುಲ್ಬರ್ಗ ಡಿವಿಜನ್‌ನಿಂದ ಬೊಮ್ಮಾಯಿಯವರು ಒಂದು ಮೀಟಿಂಗ್‌ನ್ನು ಕರೆದಿದ್ದರು. ಅವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ಇತ್ತು, ಅಲ್ಲಿಗೆ ನಾನು ಹೋಗಿದ್ದೆ.

(ಗೊಂದಲ)

ಶ್ರೀ ಬಸವರಾಜ್.—ನನಗೆ ಅವಕಾಶ ಕೊಟ್ಟಿಲ್ಲ. ಅವರಿಗೆ ಕೊಡುತ್ತೀರಿ. ನಮಗೂ ಒಂದೇ ನಿಮಿಷವಾದರೂ ಕೊಡಿ.

(ಗೊಂದಲ)

ಅಧ್ಯಕ್ಷರು.—ಆಗುವುದಿಲ್ಲ ಕೂಡ್ರಿ. ಖರ್ಗೆಯವರೇ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಕೇಳತಕ್ಕಂಥದ್ದು ಇಷ್ಟೆ ಬ್ಯಾಕ್‌ವರ್ಡ್ ಏರಿಯಾಗೆ ಕ್ರೈಟೀರಿಯಾ ಫಿಕ್ಸ್ ಮಾಡಿ ಅಲ್ಲಿಗೆ ಹೆಚ್ಚಿನ ಗ್ರಾಂಟ್ ಕೊಡುವುದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡುತ್ತೀರಾ ? ಅವರು ನಾರ್ಮ್ಸ್ ಬಗ್ಗೆ ಹೇಳಿದರು ಪಾಪ್ಯುಲೇಷನ್, ಜಿಯಾಗ್ರಫಿಕಲ್ ಏರಿಯಾ ಲಿಟರಸಿ ಪರ್ಸೆಂಟೇಜ್ ಹೀಗೆ ನಾನಾ ರೀತಿಯ ಕ್ರೈಟೀರಿಯಾ ಫಿಕ್ಸ್ ಮಾಡಿ ಮೇಲೆ ಗ್ರಾಂಟ್ಸ್‌ನ್ನು ಕೊಡುತ್ತೇವೆ ಎಂದು ಹೇಳಿದರು. ಇನ್ನು ಗುಲ್ಬರ್ಗ, ಬೀದರ್, ರಾಯಚೂರು, ಬಳ್ಳಾರಿ ಈ ಡಿವಿಜನ್‌ಗಳು ಏನು ಇವೆ ಅವರ ಡಿಸ್ಟೆಂಟ್‌ಅನ್ನು ಕೂಡಾ ಗಮನಕ್ಕೆ ತೆಗೆದುಕೊಳ್ಳಬೇಕು. ಇದರ ಬಗ್ಗೆ ಪ್ಲಾನಿಂಗ್ ಕಮಿಷನ್ ಮುಂದೆ ಅಂದರೆ ಪ್ಲಾನಿಂಗ್ ಮಿನಿಸ್ಟರ್ ಬೊಮ್ಮಾಯಿ ಇದ್ದರು, ಅವರಿಗೆ ನಾವು ಮನವಿಯನ್ನು ಕೂಡ ಕೊಟ್ಟಿದ್ದೇವೆ. ಅದಕ್ಕೆ ಅದನ್ನು ನೀವು ಪರಿಶೀಲಿಸಿ ಡಿಸ್ಟೆಂಟ್‌ಅನ್ನು ಕೂಡಾ ಕ್ರೈಟೀರಿಯಾ ಎಂದು ತಾವು ಫಿಕ್ಸ್ ಮಾಡಿ ಈ ಗ್ರಾಂಟನ್ನು ರಿಲೀಸ್ ಮಾಡುತ್ತೇವೆ ಎಂದು ಹೇಳಿದ್ದರು. ಜಿಲ್ಲಾಪರಿಷತ್‌ನವರು ಫಿಕ್ಸ್ ಮಾಡುತ್ತಾರೆ ಎಂದು ಹೇಳಿದ್ದರು. ಆದ್ದರಿಂದ ಅದನ್ನು ಪರಿಶೀಲನೆ ಮಾಡುತ್ತೀರಾ ಹೇಗೆ? ಎರಡನೆಯದಾಗಿ ೧೮ ಪರ್ಸೆಂಟ್ ಅಮೌಂಟ್‌ನಲ್ಲಿ ಅನೇಕ ಜಿಲ್ಲಾ ಪರಿಷತ್‌ನವರು ಏನು ಮಾಡುತ್ತಿದ್ದಾರೆ ಎಂದರೆ ಷೆಡ್ಯೂಲ್ಡ್ ಕ್ಯಾಸ್ಟ್ ಜನರು ವಾಸ ಮಾಡುವ ಲೋಕಾಲಿಟಿಗೆ ಒಂದು ರಸ್ತೆ ಎಂದು ಮಾಡುವುದು, ಆದರೆ ಅದು ಮೇಯಿನ್ ರಸ್ತೆಯೇ ? ಆದರೆ ಈ ೧೮ ಪರ್ಸೆಂಟ್ ಅಮೌಂಟ್‌ನಲ್ಲಿ ಎಕ್ಸ್‌ಪೆಂಡಿಚರ್ ಮಾಡುವುದು ರೂಢಿ ಇದೆ. ನಾರ್ಮಲ್ ರೋಡನ್ನು ಹಾಕುವುದು ಬಿಟ್ಟು ಇವರು ಸ್ಪೆಷಲ್ ಕಾಂಪೋನೆಂಟ್ ಹಣವನ್ನು ಒಯ್ದು ಅಲ್ಲಿ ಖರ್ಚು ಮಾಡುತ್ತಾರೆ. ಅದಕ್ಕಾಗಿ ಆ ರೀತಿಯಲ್ಲಿ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಮತ್ತು ಎಲ್ಲೆಲ್ಲಿ ಈ ರೀತಿಯಾಗಿ ಮಾಡಿದ್ದಾರೆ ಅಂಥ ಕಡೆ ಸ್ಕೀಮನ್ನು ವಿತ್‌ಹೋಲ್ಡ್ ಮಾಡಿ ಸ್ಪೆಷಲ್ ಕಾಂಪೋನೆಂಟ್‌ನಲ್ಲಿಯೇ ಖರ್ಚು ಮಾಡ ತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಮೂರನೆಯದಾಗಿ ಕೆಲವು ಕಡೆ ಐದು ಸಾವಿರ ರೂಪಾಯಿಗಳ ಒಂದು ಎಸ್ಟಿಮೇಟನ್ನು ಜಿಲ್ಲಾ ಪರಿಷತ್‌ನವರು ಮಾಡುತ್ತಾರೆ. ಐದು ಸಾವಿರ ರೂಪಾಯಿಗಳ ಎಸ್ಟಿಮೇಟನ್ನು ಮಾಡಿಕೊಂಡು ತಮಗೆ ಬೇಕಾದವರಿಗೆ ಕಂಟ್ರಾಕ್ಟ್‌ಗಳನ್ನು ಕೊಡುತ್ತಾರೆ. ಟೆಂಡರನ್ನು ಕಾಲ್‌ಫರ್ ಮಾಡುವುದಿಲ್ಲ. ಅದಕ್ಕೆ ದಯವಿಟ್ಟು ಐದು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಯಾವುದೇ ಐಟಂ ಕೆಲಸ ಇರಲಿ, ಅದಕ್ಕೆಲ್ಲಾ ಟೆಂಡರನ್ನು ಕಾಲ್‌ಫರ್ ಮಾಡತಕ್ಕಂಥ ವ್ಯವಸ್ಥೆಯನ್ನು

ಶ್ರೀ ಧರ್ಮಸಿಂಗ್.—ಡಿ.ಪಿ.ಎ.ಪಿ. ಸೆಂಟ್ರಲ್ ಸೆಕ್ಟಾರ್‌ನಲ್ಲಿ ಇರುವುದು. ನೀವು ರಿಲೀಸ್ ಮಾಡಿದ್ದು ೫೦೦ ಲಕ್ಷ ಎಷ್ಟು ಎಕ್ಸ್‌ಪೆಂಡಿಚರ್ ಆಗಿದೆ ಎಂದು ನಮಗೆ ಗೊತ್ತಿಲ್ಲ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಎಷ್ಟು ಹೊತ್ತು ಕೇಳುವುದು, ದುಡ್ಡು ಜಾಸ್ತಿ ಖರ್ಚು ಮಾಡಿದ್ದಾರೋ ಅಥವಾ ಕಡಿಮೆ ಮಾಡಿದ್ದಾರೋ, ಅದನ್ನು ಕೇಳಿರಿ.

ಶ್ರೀ ಧರ್ಮಸಿಂಗ್.—ಇದು ದೊಡ್ಡ ಡಿಪಾರ್ಟ್‌ಮೆಂಟ್ ಆದ್ದರಿಂದ ಅದನ್ನು ಹೇಳಬೇಕು. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗೆ ಎಷ್ಟು ಹಣವನ್ನು ಒದಗಿಸಿದ್ದರೆಂಬುದನ್ನು ಹೇಳಬೇಕಲ್ಲ. ಪ್ಲಾನ್‌ನಲ್ಲಿ ೮೭–೮೮ರಲ್ಲಿ ತಾವು ೩೫,೩೪೮ ಲಕ್ಷ ಕೊಟ್ಟಿದ್ದೀರಿ, ನಾನ್ ಪ್ಲಾನ್‌ನಲ್ಲಿ ೫೯,೭೪೨ ಲಕ್ಷ ಒಟ್ಟು ಪ್ಲಾನ್ ಅಂಡ್ ನಾನ್ ಪ್ಲಾನ್ ಸೇರಿಸಿದರೆ ೯೦ ಸಾವಿರ ಲಕ್ಷ ಚಿಲ್ಲರೆ ಕೊಟ್ಟಿದ್ದೀರಿ. ಇಲ್ಲಿ ಖರ್ಚು ಮಾಡಿರುವುದು ೫೫,೩೫೩ ಮಿಕ್ಕ ಹಣ ಲಾಪ್ಸ್ ಆಗಿದೆ, ಅದು ಯಾಕೆ ಲ್ಯಾಪ್ಸ್ ಆಗಿದೆ ಎಂದು ಸದನಕ್ಕೆ ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ. ಎನ್.ಆರ್.ಇ.ಪಿ.ಯಲ್ಲಿ ನಾನು ಈಗಾಗಲೇ ಹೇಳಿದ್ದೇನೆ. ೪೬, ಕೋಟಿ ೨೧ ಲಕ್ಷ ರೂಪಾಯಿ ರಿಲೀಸ್ ಆಗಿದೆ, ೩೯ ಕೋಟಿ ೨೨ ಲಕ್ಷ ಖರ್ಚು ಆಗಿದೆ. ಈ ಹಣ ಎಲ್ಲಾ ರಿಲೀಸ್ ಆಗಿದೆ, ಆರ್.ಎಲ್.ಜಿ.ಪಿ.ಯಲ್ಲಿ ೩೬ ಕೊಟಿ ೯೭ ಲಕ್ಷ. ಟಾರ್ಗೆಟ್ ೨೯ ಕೋಟಿ ೩೮ ಲಕ್ಷ ರೂಪಾಯಿಗಳು ರಿಲೀಸ್ ಆಗಿದೆ ಇನ್ನೂ ೧೦ ಕೋಟಿ ರಿಲೀಸ್ ಆಗಬೇಕಾಗಿದೆ, ಅದರ ಬಗ್ಗೆ ತೊಂದರೆ ಇಲ್ಲ. ಯಾವುದೇ ಒಂದು ಬಾಬಿನಹಣ ಲ್ಯಾಪ್ಸ್ ಆಗಿಲ್ಲ. ಕೇಂದ್ರ ಸರ್ಕಾರದ ನಿಯಮಾವಳಿ ಪ್ರಕಾರ ರಾಜ್ಯ ಸರ್ಕಾರ ೨೫ ಪರ್ಸೆಂಟ್ ಇಟ್ಟುಕೊಂಡು ಮುಂದಿನ ಸಾಲು ರಿಲೀಸ್ ಮಾಡುತ್ತೇವೆ.

ಶ್ರೀ ಧರ್ಮಸಿಂಗ್.—ಕೇಂದ್ರ ಸರ್ಕಾರದವರು ೧೦೦ ಪರ್ಸೆಂಟ್ ಕೊಡುತ್ತಾರೆ. ಕೇಂದ್ರ ಸರ್ಕಾರದವರು ಕೊಟ್ಟ ಹಣವನ್ನು ನೀವು ಏತಕ್ಕೆ ಖರ್ಚು ಮಾಡುವುದಿಲ್ಲ.

SRI R. V. DESAPANDE.—Where the Central Government? Is it in a foreign country? we are giving money. They are pending it.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಎಲ್ಲಿಂದ ಬಂತು ಅದು ಬೇಡ. We are not bothered about it. You are not able to spend. You are incapable to spend that money. whatever may be the source. But, you are not capable to spend that money.

SRI R. V. DESHPANDE.—We are capable of spending the money. It is a fact that under RLEGP we could not realese Rs. 10 crores. It is not that we did not have money. We had money. But what happened the Zilla Prishads had to execute the works under RLEGP, REGS and NREP. It was a new set up. Because there was teaching trouble there was delay in execution of works. The amount was not released in one lumpsum. It was released in quarters. When we found the Zilla Parishads were having money we thought it fit to release the funds this year. There is no difficulty for the government to release the funds.

ಅಧ್ಯಕ್ಷರು.—ಖರ್ಗೆಯವರೇ ಕೇಳಿ. ಧರ್ಮಸಿಂಗ್‌ರವರೇ ತಾವು ದಯವಿಟ್ಟು ಕೂಡಿ, ನಿಮಗೆ ಉತ್ತರ ಕೊಡುವುದಿಲ್ಲ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ..... ...

(ಗೊಂದಲ)

SRI DHARAM SINGH.—1986-87 you have completed 41,000 works. In 1987-88 you have not given.

ಮಾಡುತ್ತೀರಾ ಹೇಗೆ ? ಏಕೆಂದರೆ ಬಹಳ ಜನ ಮಿಸ್‌ಯೂಸ್ ಮಾಡುತ್ತಿದ್ದಾರೆ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಅವರು ಇವರು ಸೇರಿಕೊಂಡು ಮಾಡುತ್ತಿದ್ದಾರೆ. ದಯವಿಟ್ಟು ಈ ಮೂರು ಪ್ರಶ್ನೆಗಳಿಗೆ ಉತ್ತರವನ್ನು ಹೇಳಬೇಕು. ಮತ್ತೆ ೧೯೮೫ರಲ್ಲಿ ಗ್ರಾಂಟ್ಸ್ ಯಾವ ರೀತಿ ಕೊಡಬೇಕೆಂದು ಒಂದು ಆರ್ಡರ್ ಇಶ್ಯೂ ಮಾಡಿದೆ. ಇದರಲ್ಲಿ ಡಿಸ್ಟ್ರಿಕ್ಟ್ ಆನ್ಯುಯಲ್‌ಪ್ಲಾನ್, ಪಾಪ್ಯುಲೇಷನ್ ಏರಿಯಾ ಬ್ಯಾಕ್‌ವರ್ಡ್‌ನೆಸ್, ಇವೆಲ್ಲಾ ಕ್ರೈಟೀರಿಯಾ ಫಿಕ್ಸ್ ಮಾಡಿದ್ದೀರಿ, ಆದರೆ ಇದರಲ್ಲಿ ಡಿಸ್ಟೆನ್ಸ್ ಇಲ್ಲ. ಉದಾಹರಣೆ ಬೀದರ್ ಕರ್ನಾಟಕದಲ್ಲಿ ಕೊನೆಯ ಮೂಲೆಯಲ್ಲಿದೆ.

SRI DESHPANDE.—Backward area comminication is measured by road mileage per 100 Sq Km. per lakh population that is there.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಮ್ಮ ಸ್ಟೇಟ್‌ನಲ್ಲಿ ಪರ್ ಕ್ಯಾಪಿಟಾ ಇನ್‌ಕಂ ದೃಷ್ಟಿಯಲ್ಲಿ ಇಟ್ಟುಕೊಂಡರೆ ಅಥವಾ ಆವರೇಜ್ ಇನ್‌ಕಮ್ ಸ್ಟೇಟ್ ತೆಗೆದುಕೊಂಡರೆ ಗುಲ್ಬರ್ಗ ೧೯ ಸ್ಥಾನ ರಾಯಚೂರು ೧೮ನೇ ಸ್ಥಾನ, ಬೀದರ್ ೧೭ನೇ ಸ್ಥಾನ, ಬಳ್ಳಾರಿ ೧೬ನೇ ಸ್ಥಾನದಲ್ಲಿ ನಿಲ್ಲುತ್ತವೆ. ನಮ್ಮ ಸ್ಟೇಟ್‌ನಲ್ಲಿ ಕೊನೆಯ ಸ್ಟೇಜ್‌ನಲ್ಲಿರತಕ್ಕ ಈ ಜಿಲ್ಲೆಗಳಲ್ಲಿ ಏನಾದರೂ ಸ್ಪೆಷಲ್ ಗ್ರಾಂಟ್ಸ್ ಕೊಡಬೇಕು. ಬೇರೆ ಜಿಲ್ಲೆಗಳಿಗೆ ಯಾವ ರೀತಿ ಗ್ರಾಂಟ್ಸ್ ಕೊಡುತ್ತಿದ್ದೀರೋ ಅದೇ ರೀತಿಯಲ್ಲಿ ಸರಿಸಮನಾಗಿ ಈ ಜಿಲ್ಲೆಗಳು ಡೆವೆಲಪ್ ಆಗುವುದಕ್ಕೆ ಏನಾದರೂ ಸ್ಪೆಷಲ್ ಗ್ರಾಂಟ್ಸ್ ಕೊಡಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಈ ವರ್ಷದಲ್ಲಿ ಎಲ್ಲಾ ಕಾರ್ಯಕ್ರಮಗಳಲ್ಲಿ ಈ ನಾಲ್ಕು ಜಿಲ್ಲೆಗಳಿಗೆ ಹೆಚ್ಚಿನ ಹಣವನ್ನು ಇವೊತ್ತು ಒದಗಿಸುತ್ತಿದ್ದೇವೆ. ಈಗ ಪ್ರಶ್ನೆ ಏನು ಅಂದರೆ, ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕು ಎಂದು. ಈಗ ಇದರಲ್ಲಿ ಏನು ಪ್ರಾಬ್ಲಮ್ಸ್ ಇದೆ ಅಂದರೆ ಈಗ ಎನ್‌ಆರ್‌ಇಪಿ ಆರ್‌ಎಲ್‌ಜಿಪಿ ಇವೆಲ್ಲಾ ಸೆಂಟ್ರಲೀ ಸ್ಪಾನ್ಸರ್ಡ್ ಸ್ಕೀಮುಗಳು. ಇದಕ್ಕೆ ಕೇಂದ್ರ ಸರ್ಕಾರದ ಕೆಲವು ನಾರ್ಮ್ಸ್‌ಗಳು ಇವೆ. ಯಾವ ರೀತಿ ಅಲ್ಲಿ ಹೆಚ್ಚು ಮಾಡುವುದಿಲ್ಲ ಅಲ್ಲಿಯವರೆಗೆ ನಾವು ಕೂಡ ಹೆಚ್ಚು ಸ್ವಲ್ಪ ಮಾಡುವುದಕ್ಕೆ ಕಷ್ಟವಾಗುತ್ತದೆ. ಇವೊತ್ತು ಕೊಡಗು ಜಿಲ್ಲೆಗೆ ಎನ್‌ಆರ್‌ಇಪಿಯಲ್ಲಿ ಕೇವಲ ೫೦ ಲಕ್ಷ ಸಿಕ್ಕಿದೆ, ನಾರ್ತ್ ಕೆನರಾಗೆ ೭೦ ಲಕ್ಷ ಸಿಕ್ಕಿದೆ. ಅದೇ ಧಾರವಾಡ ಬೀದರ್‌ಗೆ ೩ ಕೋಟಿ ರೂಪಾಯಿ ಸಿಗುತ್ತದೆ.

SRI M. MALLIKARJUNA KHARGE.—These are centrally sponsored schemes. What about school buildings, roads and other things.

ಶ್ರೀ ಆರ್. ಧರ್ಮಸಿಂಗ್.—ಕೇಂದ್ರ ಸರ್ಕಾರ ಕೊಡುತ್ತಿರುವ ಹಣದ ಮೇಲೆಯೇ ನೀವು ನಿಂತಿದ್ದೀರಿ.

ಶ್ರೀ ಆರ್. ವಿ. ದೇಶಪಾಂಡೆ.- ಅವರೇನು ಬೇರೆ ದೇಶದವರಲ್ಲ, ನಾವುಅನೇಕ ವಿಧವಾದತೆರಿಗೆಗಳ ರೂಪದಲ್ಲಿ ಕೇಂದ್ರಕ್ಕೆ ಹಣ ಕೊಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಟೆಂಡರ್ ಕರೆಯುವಲ್ಲಿ ಬಹಳ ಕರಪ್ಷನ್ಸ್ ಇದೆ, ಇದನ್ನು ತಪ್ಪಿಸಬೇಕೆಂದು ಹೇಳಿದ್ದಾರೆ. ಟೆಂಡರ್ ಕರೆಯುವಾಗ ಪೇಪರ್ ಅಡ್ವರ್ಟೈಜ್‌ಮೆಂಟಿಗೆ ಪಬ್ಲಿಕೇಶನ್ಸ್ ಇತ್ಯಾದಿಗಳಿಗೆ ಖರ್ಚು ಆಗುತ್ತದೆ. ಇದರಲ್ಲಿ ಕೇವಲ ಒಂದೋ ಅಥವಾ ಎರಡು ಸಾವಿರ ಕರಪ್ಷನ್ ಆಗಬಹುದು. ಮಾನ್ಯ ಸದಸ್ಯರು ಈ ಬಗ್ಗೆ ಏನು ಸಜೆಷನ್ಸ್ ಕೊಟ್ಟಿದ್ದಾರೆ ಅದನ್ನು ಸರ್ಕಾರ ಖಂಡಿತವಾಗಿಯೂ ಪರಿಶೀಲನೆ ಮಾಡುತ್ತದೆ.

ಅಧ್ಯಕ್ಷರು.—ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ನಾನು ಪ್ರಸ್ತಾಪವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.
ಪ್ರಸ್ತಾಪವೇನೆಂದರೆ:

''೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೫೮, ೫೯, ೭೦, ಮತ್ತು ೭೧ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂತ ವೆಚ್ಚವನ್ನು ವಹಿಸಲು ಸರ್ಕಾರದ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು''

ಪ್ರಸ್ತಾಪವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೫೮ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ.—

'' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೪, ೯೯, ೫೦, ೦೦೦ ರೂ.ಗಳಿಗಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು ''

ಅಭಿಯಾಚನೆ ಕ್ರಮಾಂಕ ೫೯ ಸಾಮುದಾಯಿಕ ಅಭಿವೃದ್ಧಿ.—

'' ರಾಜ್ಯ ಪಾಲರ ಶಿಫಾರಸ್ಸಿನಮೇರೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾಮುದಾಯಿಕ ಅಭಿವೃದ್ಧಿ ಸಂದಾಯ ಮಾಡುವಲ್ಲಿ ಬರತಕ್ಕಂತ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೯, ೭೭, ೭೦, ೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು ''

ಅಭಿಯಾಚನೆ ಕ್ರಮಾಂಕ ೬೧ ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ.—

'' ರಾಜ್ಯಪಾಲರ ಶಿಫಾರಸ್ಸಿನಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ ಸಂದಾಯ ಮಾಡುವಲ್ಲಿ ಬರತಕ್ಕಂತ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೮, ೩೨, ೯೪, ೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು ''

ಅಭಿಯಾಚನೆ ಕ್ರಮಾಂಕ ೬೧ ಗ್ರಾಮೀಣ ಉದ್ಯೋಗ ಯೋಜನೆ.—

'' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಉದ್ಯೋಗ ಯೋಜನೆ ಸಂದಾಯ ಮಾಡುವಲ್ಲಿ ಬರತಕ್ಕಂತ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೩, ೬೬, ೦೦, ೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು ''

(ಸದನವು ೭ ಗಂಟೆ ೫೮ ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ ೧೭ನೇ ಜೂನ್ ೮೮ರಂದು ಶುಕ್ರವಾರ ೧೦ ಗಂಟೆಗೆ ಸೇರಲು ನಿರ್ಧರಿಸಿತು)